ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 24 ಸಂಚಿಕೆ 2
ಏಪ್ರಿಲ್-ಜೂನ್ 1995

ಸಾಧನೆ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE : Kannada Quarterly of the Bangalore University, Bangalore. Vol. 24 No. 2 April—June 1995

ಸಂಪಾದಕ ಸಮಿತಿ :

ಡಾ॥ ಎನ್. ಆರ್. ಶೆಟ್ಟಿ ಕುಲಪತಿಗಳು	ಅಧ್ಯಕ್ಷರು
ಡಾ॥ ಕೆ. ಮರುಳಸಿದ್ದಪ್ಪ ಪ್ರಾಧ್ಯಾಪಕರು ಹಾಗೂ ನಿರ್ದೇಶಕರು	ಪ್ರಧಾನ ಸಂಪಾದಕರು
ಡಾ॥ ಶ್ರೀಮತಿ ಲೀಲಾರಾವ್ ಪ್ರಾಧ್ಯಾಪಕರು, ಸಂಹವನ ವಿಭಾಗ	ಸಂಪಾದಕರು
ಶ್ರೀಮತಿ ಎಂ. ಸುಮಿತ್ರ ಅಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ	"
ಶ್ರೀ ಎಂ. ಜಿ. ಮಂಜುನಾಥ್ ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಕೇಂದ್ರ	"
ಶ್ರೀಮತಿ ಎಲ್. ಸಂಗಮಿತ್ರ ಪ್ರಕಟಣ ಸಹಾಯಕಿ	ಸಂಚಾಲಕರು

ವಾರ್ಷಿಕ ಚಂದಾ :	ರೂ. 15–00	
ವಿದ್ಯಾರ್ಥಿಗಳಿಗೆ	ರೂ. 10–00	(ದೃಢೀಕರಣ ಪತ್ರವನ್ನು ಕಳುಹಿಸಬೇಕು)
ಆಜೀವ ಸದಸ್ಯತ್ವ	ರೂ. 150–00	

ಪ್ರಕಾಶಕರು :

ಎಸ್. ಕೆಂಡಗಣ್ಣಸ್ವಾಮಿ
ನಿರ್ದೇಶಕ
ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ, ಬೆಂಗಳೂರು

ಮುದ್ರಣ :

ಎಸ್. ಎಂ. ಹೊನ್ನಪ್ಪ
ಕಾರ್ಯನಿರ್ವಾಹಕ ನಿರ್ದೇಶಕ
ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ

ಪರಿವಿಡಿ

ಕಾವ್ಯ

ಡಾ. ವಿಜಯ ಕುಮಾರ ಮಹಾನುಭಾವಿಗಳು

ಬರೆಯ ಬೇಕೆಂಬ ಹಂಬಲವು ಬಹಳುಂಟು
ಬರೆಯ ಲಾರೆನು ನಾನು ಮನಕೆ ನಲಿವಿಲ್ಲ
ಹಗಲಿರುಳು ಕಳೆದಿಹುದು ಸಂಜೆ ಸೋನೆಯ ತೆರದಿ
ಹೊತ್ತು ಮೂಡುವುದೆಂದು ನನ್ನ ಬಾಳ ಆಗಸದಿ

ಮೊಗ್ಗರಳಿ ಹೂವಾಗಿ ಕಂಡು ಚೆಲ್ಲುವ ತೆರದಿ
ಬದುಕು ಅರಳುವುದೆಂದು ಉಲ್ಲಾಸ ತಾ ಹೊಮ್ಮಿ
ಹೊತ್ತು ಮೂಡುವ ತೆರದಿ ಕಾವ್ಯ ಮೂಡುವುದೆಂದು
ಸಪ್ತವರ್ಣದ ಬಣ್ಣ ಚಿತ್ತಾರ ಬಿಡಿಸುವೆನೆ ?

ಕಲೆಯು ಅರಳುವ ಮಣ್ಣು ಕಣ್ಣೆದುರು ಬಿದ್ದಿಹುದು
ಕಲೆಯ ಅರಳಿಸಲಾರೆ ಇಲ್ಲೆನಗೆ ಉಲ್ಲಾಸ
ಹೇಳಲಾಗದ ನೋವ ತಾಳಲಾರಳು ಅಳಲ
ಹಡೆದಳಾ ಶಿಶುವ ಪಡೆದಳಾ ತಾಯ್ತನವ.

ಕೊಂಬೆರೆಂಬೆಯ ತುಂಬ ಚಿಗುರು ಹೂ ಹೊಮ್ಮಿ
ಎಲೆ ಎಲೆಗೆ ಕಾಯಾಗಿ ಹಣ್ಣು ಸುಗ್ಗಿಯುಬಂದು
ಬಯಲ ಮಾನಸದೇವ ಎಲೆ ಎಲೆಗೆ ಫಸಲಾಗಿ
ಸೃಷ್ಟಿ ಹಿಂದಿನ ಸೆಲೆಯ ಕಾಣುವೆನೆ ಪಡೆಯುವೆನೆ ?

ದಲಿತ ಸಾಹಿತ್ಯ : ಮರು ಚಿಂತನೆ

ಡಾ ಕೆ. ಆರ್. ದುರ್ಗಾದಾಸ

ಕನ್ನಡದಲ್ಲಿ ದಲಿತ ಸಾಹಿತ್ಯ ಕುರಿತಂತೆ ಹಲವಾರು ವ್ಯಾಖ್ಯಾನಗಳು ವಿಭಿನ್ನ ದೃಷ್ಟಿಕೋನಗಳೂ ಈಗಾಗಲೇ ಪ್ರಸಿದ್ಧಿಯಲ್ಲಿವೆ. ಸಾಹಿತ್ಯ 'ಯಾರನ್ನು' ಕುರಿತು ದಾಗಿರಬೇಕು ಮತ್ತು ಅದು 'ಯಾರಿಂದ' ರಚನೆಗೊಂಡರೆ ಅಥೆಂಟಿಕ್ ಆಗುತ್ತದೆ ಎಂಬ ಅಂಶಗಳು ಪ್ರಧಾನವಾಗಿ ಚರ್ಚೆಗೊಳಗಾಗಿವೆ. ಈ ಚರ್ಚೆಗೆ ಹಿನ್ನೆಲೆಯಾಗಿ ಕೆಲವು ಕಾರಣಗಳೂ ಇದ್ದವು:

1) ಇದೂವರೆಗಿನ ಸಾಹಿತ್ಯದಲ್ಲಿ ಕೇವಲ ಕೆಲವೇ ಜನರ ಭಾವನೆಗಳು ದಾಖಲುಗೊಂಡಿದ್ದು, ಸಾಹಿತ್ಯ ಆ ಮಟ್ಟಿಗೆ ಊನವಾಗಿದೆ. ಸಾಹಿತ್ಯ ಸಮಗ್ರತೆಯನ್ನು ಪಡೆಯಲು ಇದೂವರೆಗೆ ದಾಖಲುಗೊಳ್ಳದ ಜನಗಳ ಭಾವನೆಗಳನ್ನು ಒಳಗೊಳ್ಳಬೇಕು.

2) ಈಗಾಗಲೇ ರಚನೆಗೊಂಡಿರುವ ಸಾಹಿತ್ಯದಲ್ಲಿ ರಾಜ–ಮಹಾರಾಜರ, ಮಂತ್ರಿವರೇಣ್ಯರ ಮತ್ತು ಪುರೋಹಿತರ ಚಿತ್ರ ಮಾತ್ರ ಪ್ರಧಾನವಾಗಿದ್ದು ಉಳಿದವರ ಅಸ್ತಿತ್ವ ಅವರ ಸುಖ ಸಂತೋಷಕ್ಕಾಗಿ ಮಾತ್ರವೆಂಬಂತೆ ಚಿತ್ರಣಗೊಂಡಿದ್ದರ ಹಿಂದೆ ಸಾಮಾಜಿಕ, ರಾಜಕೀಯ ಕಾರಣಗಳಿರುವುದು ಸ್ಪಷ್ಟ, ಮೇಲಾಗಿ ಇಂಥ ಸಾಹಿತ್ಯವನ್ನು ಸೃಷ್ಟಿಸಿದವರು ಮೇಲ್ವರ್ಗ ದವರೇ ಆಗಿದ್ದರೆಂಬುದು ಗಮನಾರ್ಹ. ಸಾಹಿತ್ಯವನ್ನೂ ಇಂತಹ ಮತೀಯ ಇಲ್ಲವೇ ವರ್ಗ ಹಿತಾಸಕ್ತಿಯ ಹಿಡಿತದಿಂದ ಪಾರುಗಾಣಿಸಲು ಸಮಾಜದ ಎಲ್ಲ ಸ್ತರದ ಜನಗಳೂ ಸಾಹಿತ್ಯ ಸೃಷ್ಟಿಯಲ್ಲಿ ಪಾಲ್ಗೊಳ್ಳುವ ವಾತಾವರಣ ನಿರ್ಮಾಣವಾಗಬೇಕು.

ಹಿನ್ನೆಲೆ :

ಸಾಹಿತಿ ತಾನು ಆಯ್ದುಕೊಳ್ಳುವ ವಸ್ತು ವಿಷಯದಲ್ಲಿ ಸ್ವತಂತ್ರನಿದ್ದು ಆತನಿಗೆ ಇಂಥದೇ ವಸ್ತು ಕುರಿತು ಕಾವ್ಯರಚನೆ ಮಾಡಬೇಕೆಂದು ಒತ್ತಾಯಿಸುವುದು ಕವಿಯ ಸ್ವಾತಂತ್ರ್ಯಕ್ಕೆ ಧಕ್ಕೆ ತರುವುದು ಎಂಬ ವಾದವನ್ನು ಮುಂದೆ ಮಾಡಿಕೊಂಡು ಜೀವನಕ್ಕೂ ಸಾಹಿತ್ಯಕ್ಕೂ ನೇರ ಸಂಪರ್ಕ ಕಲ್ಪಿಸದೆ ಸಮಕಾಲೀನವಲ್ಲದ ವಸ್ತು

ವಿಷಯುಗಳನ್ನು ಸಾಹಿತ್ಯದ ಮೂಲಕ ಪ್ರಚುರಪಡಿಸುತ್ತ ಬರಲಾಗಿತ್ತು. ಕನ್ನಡದ ಮಟ್ಟಿಗೆ ಇಂಥ, ಧೋರಣೆಯುನ್ನೂ ಮೊದಲು ಪ್ರತಿಭಟಿಸಿದವರು ವಚನಕಾರರು. ಸಮಕಾಲೀನ ಸಮಸ್ಯೆಗಳಿಗೆ ಮೊದಲು ಆದ್ಯತೆಯುನ್ನು ಪ್ರಕಟಿಸುವುದರ ಮೂಲಕ ವಚನಕಾರರು ಸಾಹಿತ್ಯವನ್ನು ಜನಸಮ್ಮುಖಿಗೊಳಿಸಿದರು. ಅಷ್ಟೇ ಅಲ್ಲ ಅದೂವರೆಗೆ ಅಕ್ಷರ ಪ್ರಪಂಚಕ್ಕೆ ಎರವಾಗಿದ್ದ ಜನರಲ್ಲಿ ಜಾಗೃತಿ ಉಂಟುಮಾಡಿ ಸಾಹಿತ್ಯ ರಚನೆಯಲ್ಲಿ ಪಾಲ್ಗೊಳ್ಳುವಂಥ ಅವಕಾಶವನ್ನೂ ನಿರ್ಮಿಸಿಕೊಟ್ಟರು. ಇದರಿಂದಾಗಿ ಸಾಹಿತ್ಯ ಎಲ್ಲ ವರ್ಗದ ಜನಗಳ ಭಾವನೆಗಳನ್ನು ಒಳಗೊಂಡು ಹಿಂದೆಂದೂ ಕಾಣದ ಕಸುವು (Fertility) ಮತ್ತು ವಿಸ್ತಾರ (Expanse) ಗಳನ್ನು ಪಡೆದುಕೊಂಡಿತು. ಜಾತಿ ಪದ್ಧತಿ, ಅಂಧಶ್ರದ್ಧೆ, ಮೂಢ ನಂಬಿಕೆಗಳಂತಹ ಸಾಮಾಜಿಕ ಅನಿಷ್ಟಗಳನ್ನು ಖಂಡಿಸುತ್ತಾ, ದುಡಿಮೆಯ ಮಹತ್ವ ಸಂಪತ್ತಿನ ಅಕ್ರೋಢೀಕರಣ ಮತ್ತು ದಾಸೋಹ ಗಳಂತಹ ಸಮಾಜವಾದದ ಮೌಲ್ಯಗಳನ್ನು ಸಮಾಜದಲ್ಲಿ ಅನುಷ್ಠಾನಗೊಳಿಸುವ ಕಡೆಗೆ ವಚನಕಾರರು ದೃಷ್ಟಿಹರಿಸಿದರು. ಸಾಮಾಜಿಕ ಸುಧಾರಣೆಯಲ್ಲಿ ಸಾಹಿತ್ಯವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಸಾಧ್ಯವೆಂಬುದನ್ನು ವಚನಕಾರರು ತೋರಿಸಿ ಕೊಟ್ಟರು. ಅವರು ಆಯ್ದುಕೊಂಡ ವಚನ ಪ್ರಕಾರವೂ ಕೂಡ ಸರಳ ರಚನೆಯಾಗಿದ್ದು ಬಹುಪಾಲು ಜನರು ಸಾಹಿತ್ಯವಾಹಿನಿಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಯಿತು. ಬಹಳಷ್ಟು ನಿರೀಕ್ಷೆಗಳನ್ನೂ ಹುಟ್ಟಿಸಿದ್ದ ಈ ಆಂದೋಲನ ಪ್ರಗತಿಯ ಹಾದಿಗೆ ತಡೆಯೊಡ್ಡುವ ಬೂಜ್ವಾಕ್ ಹಿತಾಸಕ್ತಿಗಳು ಮೇಲುಗೈ ಪಡೆದುದರ ಪರಿಣಾಮವಾಗಿ ಅನತಿಕಾಲದಲ್ಲಿಯೇ ಹಿಂದೆ ಸರಿಯುವಂತಾಯಿತು. ಈ ಪರಂಪರೆಗೆ ಮತ್ತೊಮ್ಮೆ ಚಾಲನೆ ದೊರೆತದ್ದು ಆಧುನಿಕ ಯುಗದಲ್ಲಿಯೇ. ಇಂಡಿಯಾ ಬ್ರಿಟಿಷರ ಗುಲಾಮಗಿರಿಗೆ ಒಳಪಟ್ಟ ಸಂದರ್ಭವೇ ದಲಿತರ ಪಾಲಿಗೆ ವರದಾನವಾಯಿತು. ಬ್ರಿಟಿಷರ ಮೂಲಕ ಅಸ್ತಿತ್ವಕ್ಕೆ ಬಂದ ಹೊಸ ಶಿಕ್ಷಣ ಪದ್ಧತಿಯಂತೂ ಮೂಕರಾಗಿದ್ದ ದಲಿತರಿಗೆ ಬಾಯಿ ಕೊಟ್ಟಿತು. ಇಂದು ದಲಿತರು ತಮ್ಮ ಶೋಷಣೆಯ ವಿರುದ್ಧ ಬಂಡೇಳಲು ಮತ್ತು ತಮ್ಮ ಹಕ್ಕುಗಳ ಕುರಿತು ಹೋರಾಡಲು ಚರಿತ್ರೆಯ ಮೇಲಿನ ಸಂಗತಿಗಳು ಸಂಬಂಧ ಸ್ಥಾಪಿಸಿಕೊಂಡಿವೆ.

ಪ್ರೇರಣೆಗಳು :

ದಲಿತ ಸಾಹಿತ್ಯ ಅಧಿಕೃತವಾಗಿ ಪ್ರಾರಂಭಗೊಂಡುದು ತೀರಾ ಇತ್ತೀಚೆಗೆ ಎಂಬುದು ನಿಜವಾದರೂ ಇದಕ್ಕಿಂತ ಪೂರ್ವದಲ್ಲಿಯೇ ದಲಿತರ ಪ್ರಸ್ತಾಪ ಅನೇಕ ಕೃತಿಗಳಲ್ಲಿ ಬಂದಿದೆ. ರಾಮಾಯಣದ ಶಂಭೂಕ, ಮಹಾಭಾರತದ ಏಕಲವ್ಯರು ಪ್ರಾಸಂಗಿಕವಾಗಿ ಚಿತ್ರಿತರಾಗಿದ್ದರೂ ಆ ಮೂಲಕ ದಲಿತರ ಸ್ಥಿತಿಗತಿಗಳನ್ನು ಅರಿಯಲು ಮುಖ್ಯ ಪ್ರಮಾಣಗಳೂ ಆಗಿವೆ. ಕರ್ಣನಂತವರು ಜಾತಿ ಕಾರಣಕ್ಕೆ ಅನುಭವಿಸಿದ ಮೂಕಯಾತನ, ಪರಿಸ್ಥಿತಿಗಳ ಒತ್ತಡಕ್ಕೆ ಸಿಕ್ಕು ದುರಂತವನ್ನು ಅಪ್ಪಿದುದನ್ನು

ಪಂಪನಂಥ ಕವಿ ಸಮರ್ಪಕವಾಗಿಯೇ ಚಿತ್ರಿಸಿದ್ದಾನೆ. ದಲಿತರನ್ನೂ ಹೊರತುಪಡಿಸಿ ಸಮಾಜವನ್ನು ಕಲ್ಪಿಸಿಕೊಳ್ಳಲೂ ಅಸಾಧ್ಯವೆಂಬುದನ್ನು ಈ ಸಾಹಿತ್ಯ ಕೃತಿಗಳು ಮನಗಾಣಿಸಿವೆ. ಹರಿಹರನಂಥವರು ದಲಿತರನ್ನೇ ಕುರಿತು ಕಾವ್ಯರಚನೆ ಮಾಡಿದುದನ್ನು ಇಲ್ಲಿ ನೆನೆಯಬಹುದು. ಹರಿದಾಸರು ಸಾಮಾಜಿಕ ವಿಷಮತೆಯ ವಿರುದ್ಧ ದನಿ ಎತ್ತಿ ಹಾಡಿದುದೂ ಗಮನಾರ್ಹವೇ. ಇದೆಲ್ಲವೂ ಧಾರ್ಮಿಕ ನೆಲೆಯಲ್ಲಿ ನಡೆದ ಸುಧಾರಣಾ ಹಾದಿ ಎಂಬುದು ನಿಜವಾದರೂ ಆ ಕಾಲಕ್ಕೆ ದಲಿತರ ವಿಮೋಚನೆಗಾಗಿ ಸಾಹಿತ್ಯದ ಮೂಲಕವೂ ಪ್ರಯತ್ನ ನಡೆದುದಕ್ಕೆ ನಿದರ್ಶನಗಳಾಗಿವೆ.

ಇಂಥ ಪ್ರಯತ್ನಗಳು ಆಗೊಮ್ಮೆ ಈಗೊಮ್ಮೆ ಘಟಿಸುವ ಆಕಸ್ಮಿಕಗಳಾಗಿದ್ದುವು ಅಷ್ಟೆ. ಏಕೆಂದರೆ ಸಮಾಜದ ಬಹುಪಾಲು ಜನವರ್ಗಕ್ಕೆ ಶಿಕ್ಷಣವನ್ನು ನಿರಾಕರಿಸ ಲಾಗಿತ್ತು, ಅಲ್ಲದೇ ಕೆಲವೇ ಜನ ಅದರ ಮೇಲೆ ಹಿಡಿತ ಸಾಧಿಸಿಕೊಂಡಿದ್ದರ ಪರಿಣಾಮ ವಾಗಿ ಬಹುಪಾಲು ಜನರ ಭಾವನೆಗಳು ಸಾಹಿತ್ಯ ಪ್ರಪಂಚಕ್ಕೆ ಎರವಾಗಬೇಕಾಯಿತು, ಸಾಹಿತ್ಯ ರಚನೆಯಲ್ಲಿ ಕೆಲವೇ ಕೆಲವು ಜನರು ಪಾಲುಪಡೆದದ್ದರಿಂದ ಸಾಹಿತ್ಯದ ವ್ಯಾಪ್ತಿಯೂ ಅಷ್ಟರಮಟ್ಟಿಗೆ ಸೀಮಿತವಾಗಿತ್ತು. ಬದಲಾದ ಸಾಮಾಜಿಕ, ರಾಜಕೀಯ ಪರಿಸ್ಥಿತಿಗಳು ಬ್ರಿಟಿಷರ ಆಳ್ವಿಕೆ, ಅಂಬೇಡ್ಕರ, ಫುಲಿ, ಲೋಹಿಯಾ ಮುಂತಾದವರ ಹೋರಾಟಗಳ ಪರಿಣಾಮವಾಗಿ ಅದೂವರೆಗೆ ಶಿಕ್ಷಣದಿಂದ ವಂಚಿತರಾಗಿದ್ದ ಜನತೆಗೆ ಶಿಕ್ಷಣ ದೊರೆತು ತಮ್ಮ ಪರಿಸ್ಥಿತಿಗಳ ಅರಿವು ಮೂಡಲು ಸಾಧ್ಯವಾಯಿತು. ಒಂದು ಕಡೆ ತಮ್ಮ 'ಇರುವಿಕೆ' ಕುರಿತು ಜಾಗೃತಿ ಮೂಡುತ್ತಿದ್ದಂತೆಯೇ ಮತ್ತೊಂದು ಕಡೆ ತಮ್ಮ 'ಇರುವಿಕೆ' ಗೆ ಕಾರಣವಾದ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸುವುದು ದಲಿತರಿಗೆ ಅನಿವಾರ್ಯವಾಗತೊಡಗಿತು, ಯಾವ ಇರುವಿಕೆಯನ್ನು ಅಸಹಾಯಕ ನೆಲೆಯಲ್ಲಿ ಮೌನವಾಗಿ ಒಪ್ಪಿಕೊಂಡಿದ್ದಾರೋ ಅದರ ವಿರುದ್ಧ ದಲಿತರು ದನಿ ಎತ್ತತೊಡಗಿದರು. ಪಾರಂಪರಿಕವಾಗಿ ತಮ್ಮ ಮೇಲೆ ವಿಧಿಸಲ್ಪಟ್ಟಿದ್ದ ನಿರ್ಬಂಧಗಳಿಂದ ಬಿಡುಗಡೆ ಪಡೆಯಲು ದಲಿತರು ಯೋಚಿಸತೊಡಗಿದರು. ದಲಿತರು ದೇವಸ್ಥಾನ ಪ್ರವೇಶಿಸಿ ಪೂಜಿಸುವಂತಿರಲಿಲ್ಲ. ಕೆರೆ, ಬಾವಿ ನೀರು ಉಪಯೋಗಿಸುವಂತಿರಲಿಲ್ಲ. ಸಾರ್ವಜನಿಕ ಬೀದಿಗಳಲ್ಲಿ ಓಡಾಡುವಂತಿರಲಿಲ್ಲ. ಬದಲಾಗಿ ಯಾವ ವೃತ್ತಿಗಳನ್ನು ಮೇಲ್ವರ್ಗದ ಜನ ಕೀಳೆಂದು ಭಾವಿಸಿದ್ದಾರೋ ಅಂಥ ವೃತ್ತಿಗಳನ್ನು ದಲಿತರು ಮಾಡಿ ಬದುಕ ಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಲಾಗಿತ್ತು. ದಲಿತರ ಮೇಲಿನ ಈ ನಿರ್ಬಂಧಗಳ ವಿರುದ್ಧ ಅನೇಕ ಸಮಾಜ ಸುಧಾರಕರು ಸಮರ ಸಾರಿದರು. ದಲಿತರ ಸಮಸ್ಯೆಗಳನ್ನು ಮಾನವೀಯ ಸಮಸ್ಯೆಗಳೆಂದು ಪರಿಗಣಿಸಿದ ಜ್ಯೋತಿಬಾ ಫುಲೆ 1848 ರಲ್ಲಿ ಪೂನಾದಲ್ಲಿ ದಲಿತರಿಗಾಗಿ ಮೊದಲ ಶಾಲೆಯನ್ನು ತೆರೆದರು. ಈ ನಿಟ್ಟಿನಲ್ಲಿ ಅವರು ಎದುರಿಸಿದ ಪ್ರತಿರೋಧ ನಿರೀಕ್ಷಿತವೇ ಆಗಿತ್ತು. ಬರೋಡಾದ ಮಹಾರಾಜ ಸಾಯಜಿರಾವ್ ಗಾಯಕವಾಡ 1883 ರಲ್ಲಿ ಅನೇಕ ಶಾಲೆಗಳನ್ನು ದಲಿತರಿಗಾಗಿ ತೆರೆದರು. ಆದರೆ

ಆ ಶಾಲೆಗಳಲ್ಲಿ ಶಿಕ್ಷಕರಾಗಿ ಕೆಲಸ ಮಾಡಲು ಮುಸ್ಲಿಂ ಶಿಕ್ಷಕರನ್ನು ಹೊರತುಪಡಿಸಿ ಮೇಲು ಜಾತಿಯ ಹಿಂದೂ ಶಿಕ್ಷಕರು ಒಪ್ಪಲಿಲ್ಲವೆಂಬುದನ್ನು ನೋಡಿದರೆ ದಲಿತರು ಎಂತಹ ಪ್ರತಿಕೂಲ ವಾತಾವರಣದಲ್ಲಿ ಉಸಿರಾಡಬೇಕಿತ್ತು ಎಂಬುದರ ಅರಿವಾಗುತ್ತದೆ. ಅಂಬೇಡ್ಕರ ಅವರಂತೂ ದಲಿತರಲ್ಲಿ ಜಾಗೃತಿ ಮತ್ತು ಸ್ವಾಭಿಮಾನ ಮೂಡಿಸಲು ಹೋರಾಟಾತ್ಮಕ ಕಾರ್ಯಕ್ರಮಗಳನ್ನು ನಡೆಸಿದರು. ದೇವಸ್ಥಾನ ಪ್ರವೇಶ, ಸಾರ್ವಜನಿಕ ಕೆರೆಯ ನೀರು ಕುಡಿಯುವುದು ಮೊದಲುಗೊಂಡು ದಲಿತರಿಗೆ ಪ್ರತ್ಯೇಕ ಚುನಾವಣಾ ವ್ಯವಸ್ಥೆಗಾಗಿ ಒತ್ತಾಯಿಸಿದರು ಗಾಂಧಿಯಂಥವರು ಭಾರತದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಹೋರಾಡುತ್ತಿದ್ದ ಕಾಲದಲ್ಲೇ ಅಂಬೇಡ್ಕರ ಸ್ವದೇಶಿ ಸವರ್ಣೀಯರ ದೌರ್ಜನ್ಯಗಳಿಂದ ತತ್ತರಿಸಿಹೋಗಿದ್ದ ದಲಿತರ ಬಿಡುಗಡೆಗಾಗಿ ಹೋರಾಟ ನಡೆಸಿದರು. ಸ್ವತಂತ್ರ ಭಾರತದ ಸಂವಿಧಾನವಲ್ಲಿ ದಲಿತರು ಮತ್ತು ಹಿಂದುಳಿದವರಿಗಾಗಿ 'ಮೀಸಲಾತಿ' ಸೌಲಭ್ಯವನ್ನು ಅಡಕಗೊಳಿಸಿದ್ದು, ಜಾತಿ ಆಚರಣೆಯನ್ನು ಅಪರಾಧವನ್ನಾಗಿಸಿ ಶಿಕ್ಷೆಯ ಕಾನೂನು ರೂಪಿಸಿದ್ದು, ಸಾಮಾಜಿಕ ಸಮಾನತೆಯ ದಿಕ್ಕಿನಲ್ಲಿ ಹೊಸ ಭರವಸೆಯನ್ನೇ ಸೃಷ್ಟಿದವು. ದಲಿತರ ವಿಮೋಚನೆಗಾಗಿ ಇಷ್ಟೊಂದು ಗಂಭೀರ ಪ್ರಯತ್ನಗಳು ಆ ಕಾಲಕ್ಕೆ ನಡೆಯುತ್ತಿದ್ದಾಗ ಆಧುನಿಕ ಕನ್ನಡ ಸಾಹಿತ್ಯದಲ್ಲಿ ದಲಿತರ ಪರಿಸ್ಥಿತಿಗಳು ಮತ್ತು ಅವರ ವಿಮೋಚನೆಗಾಗಿ ನಡೆಯುತ್ತಿದ್ದ ಹೋರಾಟಗಳ ದಾಖಲೆ ನಿರೀಕ್ಷಿತ ಪ್ರಮಾಣದಲ್ಲಿ ನಡೆಯಲಿಲ್ಲವೆಂಬುದು ವಾಸ್ತವ ಸತ್ಯ.

ನವೋದಯ

ಇಂಗ್ಲೀಷಿನ ರೊಮ್ಯಾಂಟಿಕ್ ಸಾಹಿತ್ಯದಿಂದ ಪ್ರಭಾವಿತರಾಗಿಯೂ ನವೋದಯ ಲೇಖಕರು ಭಾರತೀಯ ಪರಂಪರೆಯಲ್ಲಿ ಶ್ರದ್ಧೆಯನ್ನಿರಿಸಿಕೊಂಡವರಾಗಿದ್ದರು. ಸಮೃದ್ಧ ಅನುಭವ ಸಾಹಿತ್ಯದ ಹಿನ್ನೆಲೆಯೊಂದಿಗೆ ತಮ್ಮನ್ನು ರೂಪಿಸಿಕೊಂಡ ಈ ಕಾಲದ ಲೇಖಕರು ಸಮಸ್ಯೆಗಳನ್ನು ಭಾವನಾತ್ಮಕ ನೆಲೆಯಲ್ಲಿಯೇ ಕಂಡರು. ಕ. ವೆಂ. ರಾಜಗೋಪಾಲರ 'ಹೊಲತಿಯ ಹಾಳು' ಕಥೆಯಲ್ಲಿ ಬರುವ 'ವರ್ಣನೆ'ಯನ್ನು ಇಲ್ಲಿ ಗಮನಿಸಬಹುದು.

"ಗೌಡರಿಗೆ ಲಕ್ಕಿಯದೇ ಚಿಂತೆಯಾಗಿತ್ತು. ಈಗ ಆಕೆಯ ತೊಡೆಗಳವರೆಗೂ ಬಾಳೆಯ ಮೇಲು ಹೊದಿಕೆಗಳನ್ನು ಮಾತ್ರ ಎರಡು ಮೂರು ಸುಲಿದ ಮೇಲೆ ಕಾಣುವಂತೆ ಅವು ಮಿರುಗತೊಡಗಿದ್ದವು. ಆಕೆಯ ಎದೆ ಕೊಂಚ ಎಳ್ಳೆ ಬಣ್ಣದಲ್ಲಿ" ಕೆಂಪನೆಯ ಮುಖ, ಅಗಲವಾದ ಕಣ್ಣುಗಳು ಹಿಂದೆಂದೋ ಒಮ್ಮೆ ಕೇಳಿದ್ದ ರಾಜಶೇಖರ ವಿಲಾಸದ ಹೆಣ್ಣಿನ ವರ್ಣನೆ ಸರಿಯೆಂದು ತೋರತೊಡಗಿತ್ತು. (ಪುಟ 25).*

* ಪುಟ ಸಂಖ್ಯೆಗಳು—ಗಿರಡ್ಡಿ ಗೋವಿಂದರಾಜ ಸಂಪಾದಿಸಿದ ಸಣ್ಣಕಥೆಗಳ ಸಂಕಲನ (1983) ಪುಸ್ತಕವನ್ನೂ ಅನುಸರಿಸಿದೆ.

ಕೆಳವರ್ಗದ ಹೆಣ್ಣುಗಳಲ್ಲಿ ಶೃಂಗಾರವನ್ನೂ ಮಾತ್ರ ಕಾಣುವ ಈ ದೃಷ್ಟಿಯೇ ಗೌಡನಂಥವರ ಸುಖಕ್ಕೆ ಲಕ್ಕಿಯಂಥವರು ಬಲಿಯಾಗುವುದನ್ನು ಹೇಳಿದರೂ ಗೌಡನ ಕ್ರೌರ್ಯಕ್ಕೆ ಎದಿರೇಟು ಕೊಡುವಲ್ಲಿ ಸೋಲುತ್ತದೆ. ಲಕ್ಕಿಯ ಶಾಪವನ್ನು ಕಾಲರಾ ಮುಖೇನ ನಿಜಗೊಳಿಸುವ ಲೇಖಕ ಶೋಷಿತರನ್ನೂ ಅಸಹಾಯಕ ಸ್ಥಿತಿಯಲ್ಲಿಯೇ ಇರಿಸಿದರೂ, ಗೌಡನಂಥವರು ಶಾಪಕ್ಕೆ ಅಳುಕಬೇಕೆಂಬುದನ್ನೂ ದನಿಯಾಗಿರಿಸಿ ಕೊಂಡಿರುವುದು ಉದಾರ ಧೋರಣೆಗೆ ಸಾಕ್ಷಿಯಾಗಿದೆ.

ಆನಂದಕಂದರ 'ಜೋಗತೀಕಲ್ಲು' ಇದೇ ಸಾಲಿಗೆ ಸೇರುತ್ತದೆ. ಮೇಲ್ ವರ್ಗದವರ ಸುಖಕ್ಕಾಗಿ ತನ್ನ ಬದುಕನ್ನೇ ಮೀಸಲಿರಿಸಬೇಕಾಗಿ ಬಂದ ಜೋಗತಿ "ಚಂದಾ" ಅದೇ ಕಾರಣಕ್ಕೆ ಜೀವತ್ಯಾಗ ಮಾಡಿಕೊಳ್ಳುವ ಸಂದರ್ಭವಿದೆ. ಬಲಿದಾನ ದಿಂದ ಕೆಳವರ್ಗದವರಿಗೆ ಸಿಗುವ ಪುರಸ್ಕಾರವಿದು :

'ಒಬ್ಬರ ಸುಖದ ಸಲುವಾಗಿ ಇನ್ನೊಬ್ಬರು ಜೀವಕೊಡೂದಂದ್ರ ಅವರು ಬರೇ ಮನಸ್ಯಾರಲ್ರಿ : ದೇವರ ಸರಿ. ಚಂದಾ ಅಂಗರ ಒಂದು ದೇವತೆ' (ಪುಟ 71) ಹೆಣ್ಣನ್ನು ವರ್ಣಿಸಬೇಕೆಂದಾಗ ಪ್ರಾಚೀನ ಕಾವ್ಯಗಳ ಶೃಂಗಾರ ಭಾಗಗಳ ಮೊರೆ ಹೋಗುವುದೂ, ದುರಂತವಾದಾಗ ಭಾವ ಪರವಶರಾಗಿ ವೈಭವೀಕರಿಸುವುದು ಆ ಕಾಲದ ಕಥೆಗಾರರಲ್ಲಿ ಕಂಡುಬರುವ ಸಾಮಾನ್ಯ ಅಂಶವಾಗಿತ್ತು. ಭಾರತೀಯ ಪ್ರಿಯರ 'ಮೋಚಿ' ಕಥೆಯಲ್ಲಿನ ಭಾವನಾಮಯತೆ ಇನ್ನೊಂದು ಬಗೆಯದು :

> "ದೂರದಲ್ಲಿ ಅವನು ಕುಳಿತಿದ್ದುದನ್ನು ಕಂಡು ಬೇಕಂತಲೇ ಜೋಡಿನ ಒಂದು ಕೊನೆಯನ್ನು ಕಿತ್ತುಬಿಟ್ಟೆ". (ಪುಟ 102)

ಮೋಚಿಯನ್ನು ಉದ್ಧರಿಸ ಹೋಗುವ ಕಥಾನಾಯಕ : ಬೇಡವೆನ್ನುವ ನಿಸ್ವಾರ್ಥಿ ಮೋಚಿ. ಈ ಇಬ್ಬರೂ ತಮ್ಮ ಸ್ಥಿತಿಗಳನ್ನು ಇದ್ದಂತೆಯೇ ಒಪ್ಪಿಕೊಂಡವರು. ಅಂದರೆ ಆ ಕಾಲದ ಲೇಖಕರ ತಾತ್ವಿಕತೆಯೂ ಪರಂಪರಾಗತ ಧೋರಣೆಗಳಿಂದ ಪ್ರಭಾವಿತವಾಗಿತ್ತು.

ಇಷ್ಟೆಲ್ಲಾ ಮಿತಿಗಳ ನಡುವೆಯೂ ನವೋದಯ ಕಥೆಗಾರರು ಸಾಮಾಜಿಕ ಅಂಶಗಳಿಗೆ ಮಹತ್ವ ಕೊಟ್ಟಿದ್ದರೆಂಬುದನ್ನೂ ಗಮನಿಸಿದರೆ ಸಾಹಿತ್ಯ ಕೇವಲ ರಂಜನೀಯ ಮಾಧ್ಯಮವೆಂದು ಅವರು ತಿಳಿದಿರಲಿಲ್ಲ. ಸಾಹಿತ್ಯದ ಮೂಲಕ ಸಾಮಾಜಿಕ ಅರಿವು ಮೂಡಿಸಲು ಸಾಧ್ಯವೆಂದೇ ಅವರು ತಿಳಿದಿದ್ದರಿಂದ ಕಥೆಯನ್ನು ಆದಷ್ಟು ಸರಳವಾಗಿ ಮತ್ತು ನೇರವಾಗಿ ರೂಪಿಸಿದರು.

ಪ್ರಗತಿಶೀಲ

ನವೋದಯ ಸಾಹಿತ್ಯದ ಭಾವುಕತೆ ಮತ್ತು ಆದರ್ಶಗಳನ್ನು ಭ್ರಮಾಲೋಕವೆಂದೇ ಕರೆದು ಮಾರ್ಕ್ಸ್‌ವಾದದ ನೆಲೆಯಲ್ಲಿ ಸಾಹಿತ್ಯ ರಚನೆಗೆ ತೊಡಗಿದ ಪ್ರಗತಿಶೀಲರು ಸಾಹಿತ್ಯದಲ್ಲಿ ಸಾಮಾಜಿಕ ಅಂಶಗಳಿಗೆ ಇರುವ ಮಹತ್ವವನ್ನು ಕಥೆ, ಕಾದಂಬರಿಗಳ ಮೂಲಕ ಪ್ರಚಾರಪಡಿಸಿದರು. ವಾಸ್ತವ ಬದುಕಿನ ವಿವರಗಳನ್ನು ಮೂಲೆ ಮೂಲೆಯಿಂದ ಕಲೆ ಹಾಕಿದ ಪ್ರಗತಿಶೀಲರು ಶೋಷಣೆಯ ನಾನಾ ಮುಖಗಳನ್ನು ಸಾಹಿತ್ಯದಲ್ಲಿ ದಾಖಲುಗೊಳಿಸಿದರು. ಪ್ರಗತಿಶೀಲ ಲೇಖಕರಾಗಿ ತಮ್ಮನ್ನು ಗುರುತಿಸಿಕೊಂಡ ತರಾಸು, ಕಟ್ಟೀಮನಿ, ಅನಕೃ ಮತ್ತು ನಿರಂಜನರು ಉತ್ತಮ ಕಥೆಗಳನ್ನು ಬರೆದರು. ಕಥೆಗಳ ಮೂಲಕ ಸಮಾಜದಲ್ಲಿ ಬಡವರಿಗೆ, ದುರ್ಬಲರಿಗೆ ಆಗುತ್ತಿದ್ದ ಅನ್ಯಾಯಗಳನ್ನು ಬಿಡಿಸಿ ತೋರಿಸಲು ಪ್ರಯತ್ನಿಸಿದರು. ನಿರಂಜನರ 'ಕೊನೆಯ ಗಿರಾಕಿ' ಇಂಥ ಆಶಯವನ್ನೊಳಗೊಂಡ ಉತ್ತಮ ಕಥೆ. ಅದರ ಕೊನೆಯ ಸಾಲುಗಳಿವು :

> ಕಾಣೆಯ ದೇಹದ ಮೇಲೆ ಗಿಡುಗವೊಂದು ಎತ್ತರದಲ್ಲಿ ಸುತ್ತು ಸುತ್ತು ಬರುತ್ತಿತ್ತು. ಅದನ್ನೇ ನೋಡುತ್ತಿದ್ದ ಹಾಗೆ ಕಣ್ಣರಳಿಸಿ ಕಾಣೆ ಮಲಗಿದ್ದಳು. ಸುತ್ತು ಬರುತ್ತಲೇ ಇತ್ತು ಗಿಡಗ, ಕೆಳಗೆ ನೋಡುತ್ತಾ ಕೊನೆಯ ಗಿರಾಕಿ (ಪುಟ 142).

ಅಸಹಾಯಕ ಮೂಕಿಯೊಬ್ಬಳು ಸಮಾಜದ ಕಾಮುಕತನಕ್ಕೆ ಬಲಿಯಾಗಿ ದುರಂತವಪ್ಪುವುದನ್ನು ಚಿತ್ರಿಸಿರುವ ರೀತಿ ಅನನ್ಯವಾದುದು.

ನವ್ಯ

ಪ್ರಗತಿಶೀಲ ಸಾಹಿತ್ಯದ ರಚನೆ ಚಾಲ್ತಿಯಲ್ಲಿರುವಾಗಲೇ ಸಾಮಾಜಿಕತೆಗಿಂತ ವ್ಯಕ್ತಿ ಅನುಭವವೇ ಮುಖ್ಯವೆಂಬ ನವ್ಯಪಂಥ ಘಟ್ಟವಾಗಿ ಆವರಿಸಿತು. 'ಸಾಹಿತ್ಯ ಮೊದಲಿಗೆ ಸಾಹಿತ್ಯವಾಗಿಯೂ ಇರಬೇಕಾದ್ದು ಅನಿವಾರ್ಯವಾಗಿದೆ. ಎಂಬುದನ್ನು ಮುಂದೆ ಮಾಡಿದ ನವ್ಯ ಸಾಹಿತಿಗಳು 'ಸಾಮಾಜಿಕ ಪ್ರಜ್ಞೆ' ಗಿಂತಲೂ ವ್ಯಕ್ತಿ ಪ್ರಜ್ಞೆಯೇ ಮುಖ್ಯವಾದುದು ಎಂಬುದನ್ನು ಸಾರಿದರು. ಧೋರಣೆಯಡಿಯಲ್ಲಿ ಸಾಹಿತ್ಯ ರಚನೆ ಮತ್ತು ಅದನ್ನು ಸಮರ್ಥಿಸುವ ನವ್ಯ ವಿಮರ್ಶೆ ಜೊತೆಯಲ್ಲಿಯೇ ಹುಟ್ಟು ಪಡೆದವು.* ಮೇಲಾಗಿ ವಸ್ತುವಿಗಿಂತಲೂ ಹೇಳುವ ಧಾಟಿಯಲ್ಲಿಯೇ 'ನವ್ಯತೆ'ಯನ್ನು ತರಲು ಪ್ರಯತ್ನಿಸಿದ ನವ್ಯ ಕಥೆಗಾರರು ವ್ಯಕ್ತಿ ಪ್ರಜ್ಞೆಯ ಹೆಸರಿನಲ್ಲಿ ವಿಷಯ ಲಂಪಟತೆಯನ್ನೇ ಬಹುವಾಗಿ ಚಿತ್ರಿಸಿದರು. 'ಲೇಖಕನ ಸಂವೇದನಾಶೀಲತೆ

---

*ಗಿರಡ್ಡಿ ಗೋವಿಂದರಾಜು ಅವರ ಸಣ್ಣಕತೆಯ ಹೊಸ ಒಲವುಗಳು, ಅಂಥ ಕೃತಿಗಳಲ್ಲಿ ಒಂದು

ಹೆಚ್ಚು ಜಾಗೃತ ಪ್ರಜ್ಞೆಯುಳ್ಳದ್ದೆಂದೂ ಅದಕ್ಕೆ ನಿರ್ಬಂಧ ಹಾಕಲಿಕ್ಕಾಗುವುದಿಲ್ಲವೆಂದೂ ಬರೆದ್ದನ್ನೆಲ್ಲ ಸಮರ್ಥಿಸುವ ವಿಮರ್ಶೆಯೂ ಜೊತೆಗೂಡಿ ಪ್ರಚಾರ ನಡೆಸಿದ್ದು ಈ ಕಾಲದಲ್ಲಿಯೇ.**

ನವೋದಯುದವರ ಭಾವ ಪ್ರಧಾನತೆ ಅದರಲ್ಲೂ ಅನುಕಂಪದ ಧಾಟಿ ಸಾಹಿತ್ಯದಲ್ಲಿ ಅವಾಸ್ತವ ಕಲ್ಪನೆಗಳಿಗೆ ಎಡೆಕೊಟ್ಟಿತು. ಪ್ರಗತಿಶೀಲರು ವಾಸ್ತವ ಸಮಸ್ಯೆಗಳ ದಾಖಲಾತಿಗೆ ಮಹತ್ವಕೊಡುವ ಅತುರದಲ್ಲಿ ಸಾಹಿತ್ಯವನ್ನು ತೀರಾ ಸರಳಗೊಳಿಸಿದರು ಎಂಬುದೂ ನಿಜ. ಅದರ ಈ ಎರಡೂ ಕಾಲ ಘಟ್ಟಗಳಲ್ಲಿ ಸಾಹಿತ್ಯ ಸಾಮಾಜಿಕ ಜವಾಬ್ದಾರಿಯಿಂದ ದೂರ ಸರಿದಿರಲಿಲ್ಲವೆಂಬುದೂ ಅಷ್ಟೇ ನಿಜ. ಮುಂದೆ ಬಂದ ನವ್ಯಸಾಹಿತ್ಯ ಮಾತ್ರ ಇದನ್ನು ಮುಂದುವರೆಸಲಿಲ್ಲ, ಬದಲಿಗೆ ಕಥೆಗಿಂತ ಹೇಳುವ ಧಾಟಿಗೇ ಹೆಚ್ಚಿನ ಆದ್ಯತೆಯನ್ನು ಪ್ರಕಟಿಸಿತು. ಅಷ್ಟೇ ಅಲ್ಲ ನವ್ಯರ ವ್ಯಕ್ತಿಪ್ರಜ್ಞೆ ಟೊಂಕದ ಕೆಳಗೇ ದೃಷ್ಟಿನಟ್ಟು ಸಾಮಾಜಿಕತೆಗೆ ಬೆನ್ನು ತೋರಿಸಿದುಡರ ಪರಿಣಾಮವೇ ದಲಿತ ಸಾಹಿತ್ಯದ ಹುಟ್ಟಿಗೆ ಒಂದು ಕಾರಣವಾಗಿ ಪರಿಣಮಿಸಿತು.

ದಲಿತ ಸಾಹಿತ್ಯ :

ದಲಿತ ಸಾಹಿತ್ಯದ ಮೊದಲ ದಾಖಲೆಯೆಂದು ಗುರುತಿಸಲಾದ ದೇವನೂರ ಮಹಾದೇವರ 'ದ್ಯಾವನೂರ' ಕಥಾ ಸಂಕಲನ ಪ್ರಕಟಗೊಂಡದ್ದು 1973ರಲ್ಲಿ. ಡಾ॥ ಸಿದ್ಧಲಿಂಗಯ್ಯನವರ 'ಹೊಲೆ ಮಾದಿಗರ ಹಾಡು' 1975ರಲ್ಲಿ ಪ್ರಕಟಗೊಂಡಿತು, ಇಂದಿಗೂ ದಲಿತ ಸಾಹಿತ್ಯದ ರಚನೆ ನಿಂತಿಲ್ಲ. ದಲಿತ ಸಾಹಿತ್ಯ ಕುರಿತು ದೇವನೂರು ಮಹಾದೇವರ ಅಭಿಪ್ರಾಯವನ್ನೂ ಇಲ್ಲಿ ಉದಾಹರಿಸಿದೆ ;

> ನಾನು ಅಂಥ ಕತ್ತಲ ರಾಜ್ಯದಿಂದ ಬಂದಂಥವನು. ಕಲಾ ಮಾಧ್ಯಮದಲ್ಲಿ ನಾನು ಕಂಡುಕೊಳ್ಳುತ್ತಿರುವುದು ಒಂದು ಆಕಸ್ಮಿಕವೇ. ನಾನೂ ಇದೂವರೆಗೆ ಬರೆದಿರುವುದು ನಮ್ಮ ರಾಜ್ಯದ ಮನುಷ್ಯನ ಆರೇಳು ಬೆರಳುಗಳು, ಹೆಚ್ಚೆಂದರೆ ಒಂದು ಹಸ್ತ ಇದ್ದೀತು. ಅದಷ್ಟೇ ಕನ್ನಡ ಸಾಹಿತ್ಯದ ಗತಿಯನ್ನು ಅಲ್ಲಾಡಿಸುವಲ್ಲಿ ತನ್ನ ಪ್ರಮಾಣಕ್ಕಿಂತ ಹೆಚ್ಚಾಗಿ ಅಲ್ಲಾಡಿಸಿದೆ. ಒಂದೆರಡು ಬೆರಳು ಹಸ್ತಕ್ಕೆ ಇಷ್ಟಾಗುವುದಾದರೆ ಕತ್ತಲ ರಾಜ್ಯದ ಇಡೀ ಮನುಷ್ಯ ಮಾತನಾಡುವುದಾದರೆ ಅದರಿಂದ ಉಂಟಾಗುವ ಬದಲಾವಣೆಯು ನನ್ನ ಕಲ್ಪನೆಗೆ ಎಟುಕದಷ್ಟಾಗಬಹುದು. ಆ ಬದಲಾವಣೆಗಾಗಿ ಈ ಮನುಷ್ಯನ ನುಡಿಗೆ ನುಡಿಕೂಡಲು ನೂರಾರು ಜನರು ಹುಟ್ಟಬೇಕಾದೀತು. ಒಂದು ಆಂದೋಲನ ಇದನ್ನು ಕಾಣಿಸಬಹುದೇನೋ.[1]

** ಅದೇ ಪುಟ 92.

1. ದೇವನೂರ ಮಹಾದೇವ, ಸಂಕ್ರಮಣ, 87-88 (1979)

ಕನ್ನಡ ಸಾಹಿತ್ಯಕ್ಕೆ ಅಜ್ಞಾತವಾಗಿ ಉಳಿದ ಕತ್ತಲರಾಜ್ಯದ ಬದುಕು ಸಾಹಿತ್ಯದಲ್ಲಿ ಪ್ರವೇಶ ಪಡೆಯಬೇಕು ಮತ್ತು ಇಂಥ ಕಾರ್ಯ ಒಂದು ಆಂದೋಲನದಿಂದ ಸಾಧ್ಯವಾದೀತು ಎಂಬ ಆಶಯ ಗಮನಾರ್ಹ. ಮೊದ ಮೊದಲು ಅಸ್ಪೃಶ್ಯ ಜನಾಂಗದ ಅನುಭವಗಳಿಗೆ ಮೀಸಲಾಗಿದ್ದ ದಲಿತ ಸಾಹಿತ್ಯ ತನ್ನ ಕ್ಷೇತ್ರವನ್ನು ವಿಸ್ತಾರಗೊಳಿಸಿಕೊಂಡಿತು. ಅಸ್ಪೃಶ್ಯತೆಯ ಅನುಭವ ಕೇವಲ ದಲಿತರಿಗೆ ಸೀಮಿತವಾದುದೇನೂ ಅಲ್ಲ. ಬ್ರಾಹ್ಮಣೇತರರೆಲ್ಲರೂ ಈ ಅವಮಾನಕ್ಕೆ ಒಳಗಾದವರೇ. ರಾಷ್ಟ್ರಕವಿ ಕುವೆಂಪು ಅವರೂ ಮೇಲು ಜಾತಿ ಜನಗಳ ಅನಾದರಣೆಗೆ ಗುರಿಯಾಗಿದ್ದರೆಂಬುದನ್ನು ನೋಡಿದರೆ ಅಸ್ಪೃಶ್ಯತೆಯ ಕಲಂಕವನ್ನು ದಲಿತರು ಮಾತ್ರ ಅನುಭವಿಸಿದವರು ಎಂದು ಹೇಗೆ ಹೇಳುವುದು. ಬ್ರಾಹ್ಮಣರಿಗೆ ಲಿಂಗಾಯತ ಒಕ್ಕಲಿಗರು ಶೂದ್ರರಾದರೆ, ಲಿಂಗಾಯತ ಒಕ್ಕಲಿಗರಿಗೆ ಕುರುಬರು ಶೂದ್ರರಾಗುತ್ತಾರೆ. ಹಾಗೆಯೇ ಈ ಶ್ರೇಣಿ ಮುಂದುವರಿಯುತ್ತದೆ. ಅತ್ಯಂತ ಕೆಳಗಿನ ಸ್ತರದಲ್ಲಿ ಹೊಲೆಯ, ಮಾದಿಗರು, ಒಕ್ಕಲಿಗರಂಥ ಜನಗಳಿದ್ದಾರೆ. ಜಾತಿ ವ್ಯವಸ್ಥೆಯ ಈ ಶ್ರೇಣಿಯಲ್ಲಿ ಎಲ್ಲರೂ ತಮಗಿಂತ ಕೆಳಗಿನವರ ಮೇಲೆ ದರ್ಪ ನಡೆಸುವುದೂ ಮೇಲಿನವರಿಗೆ ಗುಲಾಮರಾಗಿರುವುದು ಸಹಜವೆಂಬಂತೆ ಮುಂದುವರಿದಿದೆ. ಡಾ|| ಅಂಬೇಡ್ಕರ್ ಈ ಸಮಸ್ಯೆಯನ್ನು ಸರಿಯಾಗಿಯೇ ಅರ್ಥೈಸುವಂತೆ ಜಾತಿ ವ್ಯವಸ್ಥೆ ಕೇವಲ ಅಸ್ಪೃಶ್ಯ ಹಾಗೂ ಉಚ್ಚ ವರ್ಣಗಳನ್ನಷ್ಟೇ ನಿರ್ಮಿಸಿಲ್ಲ. ಎಲ್ಲಾ ವರ್ಣಗಳಲ್ಲಿ ಅನೇಕ ಜಾತಿ, ಉಪಜಾತಿ ಕೂಡ ನಿರ್ಮಿಸಿದೆ. ಇದು ಕೇವಲ ಅಸ್ಪೃಶ್ಯರನ್ನೇ ಗುಲಾಮರನ್ನಾಗಿಸಿಲ್ಲ. ಭಾರತೀಯರೆಲ್ಲರ ಮನಸ್ಸನ್ನು ಗುಲಾಮವಾಗಿಸಿದೆ[2]. ಶೂದ್ರತ್ವದ ಅನುಭವವೆಂದರೆ — ಸಾಮಾಜಿಕ ಕೀಳರಿಮೆಗೆ ಗುರಿಯಾದ ಯಾವತ್ತೂ ಜನತೆಯ ಅನುಭವಗಳು ಸಾಹಿತ್ಯದಲ್ಲಿ ದಾಖಲುಗೊಂಡಾಗ ಮಾತ್ರ ಸಾಹಿತ್ಯಕ್ಕೆ ಸಮಗ್ರತೆ ಒದಗೀತು. ಮನುಷ್ಯ ಕುಲಕ್ಕೆ ಅಂಟಿರುವ ಅಸ್ಪೃಶ್ಯತಾ ಕಲಂಕವನ್ನು ಅರ್ಥ ಮಾಡಿಕೊಳ್ಳಲು ಅಸ್ಪೃಶ್ಯನಾಗಿಯೇ ಹುಟ್ಟಬೇಕಿಲ್ಲ. ಯಾವ ಜಾತಿಯಲ್ಲಿಯೇ ಹುಟ್ಟಿರಲಿ ಆತ ಮನುಷ್ಯನಾಗಿ ಯೋಚಿಸಲು ಸಾಧ್ಯವಾದರೆ 'ಅಸ್ಪೃಶ್ಯತೆಯನ್ನು ಮಾನವ ಸಮಸ್ಯೆಯಾಗಿ ಗಮನಿಸಲು ಸಾಧ್ಯವಾಗುತ್ತದೆ. ಆಗ ಮನುಷ್ಯ–ಮನುಷ್ಯರ ನಡುವಿನ ಮೇಲು ಕೀಳರಿಮೆ ಭಾವದ ಅಡ್ಡಗೋಡೆಗಳನ್ನು ಕೆಡವಲು ಮುಂದಾಗುತ್ತಾನೆ. ಮರಾಠಿ ಲೇಖಕ 'ಬಾಬುರಾವ್ ಬಾಗುಲ್' ಅವರು ದಲಿತ ಸಾಹಿತ್ಯ ಕುರಿತು ಹೇಳಿದ ಮಾತುಗಳು ಇಲ್ಲಿ ಉಲ್ಲೇಖನೀಯವಾಗಿವೆ.[3]

---

2. ಉಲ್ಲೇಖ : ಡಾ|| ದತ್ತಾತ್ರೇಯ. ಪೂಜಾರಿ ಮತ್ತು ಡಾ|| ಗೀತಾ ಪೂಜಾರಿ. ಡಾ|| ಅಂಬೇಡ್ಕರ್ ಅವರ ಬಹಿಷ್ಕೃತ ಭಾರತದಲ್ಲಿನ ಸ್ಫುಟ ಲೇಖನಗಳು (1986) ಪ್ರಸ್ತಾವನೆ ಪುಟ 20.
3. ಉಲ್ಲೇಖ :ರಾಮಚಂದ್ರ ಉಚ್ಚಿಲ. ಮರಾಠಿಯಲ್ಲಿ ದಲಿತ ಸಾಹಿತ್ಯ ಚಿಕ್ಕಮಗಳೂರು ಸಾಹಿತ್ಯ ಸಮ್ಮೇಳನ — ಪು. 204

> ದಲಿತ ಸಾಹಿತ್ಯ ಹೇ ಮಾಣಸಾಲಾ ಕೇಂದ್ರ ಬಿಂದು ಮಾನತೇ. ಮಾಣಸಾ ಚಾ ಸುಖ ದುಃಖತ ಸಮರಸ ಹೋತೇ ವ ಮಾಣಸಾಲಾ ಸಮ್ಯಕ್ ಕ್ರಾಂತಿ — ಕಡೇ ಘೇವೂನ್ ಜಾತೇ, ಮಾಣಸಾ ಜಾ ಸಮೂಹಾಲಾ ಮಂಣ ಜೇ ಸಮಾಜಾಲಾ ಸಮತೇ ಜೇ ಶಿಃವಣದೇತೇ. ಮಾನಸಾಲಾ ಮಹಾನ್ ಮಾನತೇ. ದಲಿತ ಸಾಹಿತ್ಯ ಹೇ ಮಾಣಸಾ ಮಾಣಸಾಂತ ವೈರಭಾವ ಪಸರ್ವಿತಾ,
> ತೇ ಮಾಣಸಾ ಮಾಣಸಾತ್ ಪ್ರೇಮ ನಸರ್ವಿತೇ.

ದಲಿತ ಸಾಹಿತ್ಯ ಮನುಷ್ಯನನ್ನು ಕೇಂದ್ರ ಬಿಂದುವಾಗಿ ಮಾನ್ಯ ಮಾಡುತ್ತದೆ. ಮನುಷ್ಯರ ಸುಖ ದುಃಖಗಳನ್ನು ಸಮರಸಗೊಳಿಸುವ ಮೂಲಕ ಸಮ್ಯಕ್ ಕ್ರಾಂತಿಯ ಕಡೆಗೆ ಮುನ್ನಡೆಯುತ್ತದೆ. ಮನುಷ್ಯ ಸಮೂಹದಲ್ಲಿ ಸಮಾನತೆ ಕುರಿತು ತಿಳುವಳಿಕೆ ನೀಡುತ್ತದೆ. ಮನುಷ್ಯ ಮನುಷ್ಯನ ಮಧ್ಯೆ ವೈರಭಾವವನ್ನು ಬೆಳೆಸದೆ, ಅವರ ಮಧ್ಯೆ ಪ್ರೇಮ ಪಸರಿಸುತ್ತದೆ.

ಮೇಲಿನ ವ್ಯಾಖ್ಯೆ ದಲಿತ ಸಮಸ್ಯೆಯನ್ನು ಮಾನವ ಸಮಸ್ಯೆಯಾಗಿ ಗುರುತಿಸಿರುವುದು ಗಮನಾರ್ಹ. ಅಸ್ಪೃಶ್ಯತನದ ಕಳಂಕ ಹೊತ್ತು ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಶೋಷಣೆಗೆ ಗುರಿಯಾದವರು ದಲಿತರು ಎಂಬುದೇನೋ ನಿಜ. ಆದರೆ ಇದು ಕೇವಲ ದಲಿತರನ್ನು ಮಾತ್ರ ಸುತ್ತುವರೆದಿರುವ ಸಮಸ್ಯೆಯಲ್ಲ. ಜಾತಿ ಪದ್ಧತಿಯಿಂದ ಕೇವಲ ದಲಿತರು ಮಾತ್ರ ಗುಲಾಮರಾಗಿಲ್ಲ ; ಬ್ರಾಹ್ಮಣೇತರ ಎಲ್ಲಾ ಜಾತಿಗಳೂ ಇಂಥ ಗುಲಾಮಗಿರಿಗೆ ಒಳಗಾಗಿವೆ. ಅಷ್ಟೇ ಏಕೆ ಬ್ರಾಹ್ಮಣನು ತನ್ನನ್ನು ಇತರರಿಂದ ಪ್ರತ್ಯೇಕಿಸಿಕೊಳ್ಳುವಲ್ಲಿ ಆತ ತಾಳುವ ಮೇಲರಿಮೆಯೂ (Superiority Complex) ಕಳಂಕಿತವಾದುದೇ ಆಗಿದೆ. ಮನುಷ್ಯ ಮನುಷ್ಯರ ನಡುವೆ ಇರುವ ತರತಮ್ಯಗಳನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಸಾಹಿತ್ಯ ಹೆಜ್ಜೆ ಇರಿಸಬೇಕಾದಲ್ಲಿ ಮನುಷ್ಯನನ್ನು ಸುತ್ತುವರೆದಿರುವ ಕೋಟೆಗೆ ಲಗ್ಗೆ ಇಡಬೇಕಾಗುತ್ತದೆ. ಈ ಹೋರಾಟ ಎರಡೂ ನಿಟ್ಟಿನಲ್ಲಿ ತನ್ನನ್ನು ವಿಸ್ತರಿಸಿಕೊಳ್ಳುತ್ತದೆ. ಶೋಷಕ ಶೋಷಿತರಿಬ್ಬರನ್ನೂ ಒಂದೇ ನೆಲೆಯ ಮೇಲೆ ತರುವುದರ ಮುಖಾಂತರ ಸಮಾನತೆಯನ್ನು ನೆಲೆಗೊಳಿಸುವುದು ತೀರಾ ಅಗತ್ಯ. ಇಲ್ಲಿ ಇಂಥವರ ಪರ ಇಂಥವರ ವಿರೋಧ ಎಂಬುದಕ್ಕೆ ಬದಲಾಗಿ ಮನುಷ್ಯ ಪರ ಎಂಬ ನಿಲುವೇ ಪ್ರಸ್ತುತವಾದುದು. ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತ್ವಗಳ ಪ್ರತಿಪಾದನೆ ಸಾಹಿತ್ಯದ ಗುರಿಯಾಗಬೇಕಾದುದು ಈ ಹಿನ್ನೆಲೆಯಲ್ಲಿ. ಹುಟ್ಟಿನಿಂದ ದಲಿತರಾಗಿರದ ಶಿವರಾಮ ಕಾರಂತರು 'ಚೋಮನ ದುಡಿ'ಯಲ್ಲಿ ದಲಿತನೊಬ್ಬನ ಬದುಕು ಬವಣೆಗಳ ಚಿತ್ರ ಅನಾದೃಶ್ಯ, ಪುಟ್ಟಪ್ಪನವರ ಕಾದಂಬರಿಗಳಲ್ಲಿ ದೊರಕುವ ದಲಿತರ ಚಿತ್ರವಂತೂ ಕನ್ನಡ ಸಾಹಿತ್ಯದಲ್ಲಿಯೇ ಅಪೂರ್ವವಾದುದು. ಯಾವುದೇ ಲೇಖಕನಿಗೆ 'ಜಾತಿ' ಕೇವಲ ಆಕಸ್ಮಿಕ ಮಾತ್ರ. ಅದರ ಸೆರೆಯಿಂದ ಬಿಡಿಸಿಕೊಂಡಷ್ಟೂ ಆತ ಎತ್ತರವಾಗಿ ಬೆಳೆಯಲು ಸಾಧ್ಯ.

ವಸ್ತುಸ್ಥಿತಿ ಹೀಗಿದ್ದುದರಿಂದಲೇ ಹುಟ್ಟಿನಿಂದ ದಲಿತರಲ್ಲದ ಅನೇಕ ಲೇಖಕರು ತೇಜಸ್ವಿ, ಚನ್ನಣ್ಣ ವಾಲೀಕಾರ, ಬೆಸಗರಹಳ್ಳಿ ರಾಮಣ್ಣ, ಕಾಳೇಗೌಡ ನಾಗವಾರ, ಕುಂಬಾರ, ವೀರಭದ್ರಪ್ಪ ಮುಂ. ಸಾಹಿತ್ಯ ರಚನೆಯಲ್ಲಿ ಪಾಲ್ಗೊಳ್ಳುವಂತಾದುದೇ ಅಪರೂಪದ ಸಂಗತಿಯಾಗಿತ್ತು. ಇವರೆಲ್ಲ ತಮ್ಮ ಕೃತಿಗಳ ಮೂಲಕ ಪರಿಚಯಿಸಿದ್ದು ಅಕ್ಷರ ಮಾಧ್ಯಮದಲ್ಲಿ ದಾಖಲುಗೊಳ್ಳದ ಜಗತ್ತಿನ ಅನುಭವಗಳೇ. ಇದೆಲ್ಲ ಕುದುರಿ ಕೊಳ್ಳುವ ಹಂತದಲ್ಲಿ ಇರುವಾಗಲೇ ದಲಿತಪರ ಕಾಳಜಿಗಳನ್ನು ಮುಂದೊಡ್ಡಿ ಅಸ್ತಿತ್ವಕ್ಕೆ ಬಂದ ಬಂಡಾಯ ಸಾಹಿತ್ಯದ ಲೇಖಕರು ದಲಿತ ಸಾಹಿತ್ಯ ಕುರಿತು ವಿಭಿನ್ನವಾದಗಳನ್ನು ಮುಂದಿಟ್ಟರು. ಬರಗೂರು ರಾಮಚಂದ್ರಪ್ಪನವರ ಅಭಿಪ್ರಾಯವಿದು :

> "ಸಾಹಿತ್ಯದ ಮಟ್ಟಿಗೆ ಕೃತಿಯೊಂದರ ಅನುಭವ ಪ್ರಾಮಾಣ್ಯದ ಆಧಾರದಿಂದ ಹುಟ್ಟಿನಿಂದ ದಲಿತರಾದವರು ಸೃಷ್ಟಿಸಿದ ಪ್ರಗತಿಪರ ಸಾಹಿತ್ಯವನ್ನೂ ದಲಿತ ಸಾಹಿತ್ಯವೆಂದು ಪರಿಗಣಿಸಬಹುದು. ಬಂಡಾಯ ಎಂಬ ಪದ ಸಾಮೂಹಿಕ ಆಶಯವನ್ನು ಕುರಿತದ್ದೇ ಹೊರತು ವ್ಯಕ್ತಿಯ ಹುಟ್ಟನ್ನಲ್ಲ. ಈ ಕಾರಣ ದಿಂದಲೇ ಹುಟ್ಟಿನಿಂದ ದಲಿತನಾಗಿದ್ದು ಪ್ರತಿಗಾಮಿ ಆಶಯಗಳನ್ನು ಅಭಿವ್ಯಕ್ತಿ ಸಿದ ಸಾಹಿತಿ ಬಂಡಾಯ ಸಾಹಿತ್ಯದ ಪಟ್ಟಿಗೆ ಸೇರುವುದಿಲ್ಲ. ಮತ್ತೊಮ್ಮೆ ಸ್ಪಷ್ಟಪಡಿಸಬೇಕೆಂದರೆ ಪ್ರಗತಿಗಾಮಿ ದಲಿತ ಸಾಹಿತಿಗಳೆಲ್ಲ ಬಂಡಾಯ ಸಾಹಿತಿಗಳು, ಬಂಡಾಯ ಸಾಹಿತಿಗಳೆಲ್ಲರೂ ದಲಿತ ಸಾಹಿತಿಗಳಲ್ಲ".

ಈ ಅಭಿಪ್ರಾಯವನ್ನೂ ಬಹುಪಾಲು ಬಂಡಾಯ ಲೇಖಕರು ಒಪ್ಪುತ್ತಾರೆ. ಈ ವ್ಯಾಖ್ಯೆ ದಲಿತ ಬಂಡಾಯ ಸಾಹಿತ್ಯದ ಮಾರ್ಗಸೂಚಿಗಿಂತಲೂ ಅವುಗಳನ್ನು ಪ್ರತ್ಯೇಕಿಸುವಲ್ಲಿಯೇ ಸ್ಪಷ್ಟಗೆರೆ ಎಳೆದಂತಿದೆ. 'ಬಂಡಾಯ' ಎಂಬ ಪದ ಸಾಮೂಹಿಕ ಆಶಯವನ್ನು ಕುರಿತದ್ದಾದರೆ ದಲಿತ ಸಾಹಿತ್ಯ ಸಾಮೂಹಿಕ ಆಶಯವನ್ನೂ ಕುರಿತ ಸಾಹಿತ್ಯ ಸಾಮೂಹಿಕ ಆಶಯವನ್ನೂ ಕುರಿತದಲ್ಲವೆಂದೇ ಅರ್ಥವೆ. ದೇವನೂರ ಮಹಾದೇವರ 'ಒಡಲಾಳ' ಅರವಿಂದ ಮಾಲಗತ್ತಿಯವರ 'ಕಾರ್ಯ'ದಂತಹ ಕಾದಂಬರಿಗಳು ಕೇವಲ ದಲಿತರ ಹಿತವನ್ನಷ್ಟೇ ಲಕ್ಷಿಸಿಕೊಂಡ ಕಾದಂಬರಿಗಳಲ್ಲ. ಪ್ರತಿಯೊಬ್ಬ ಲೇಖಕನಿಗೂ ತಾನು ಬದುಕಿದ ಪರಿಸರವನ್ನೂ ತನ್ನ ಕೃತಿಗೆ ವಸ್ತುವಾಗಿ ಆಯ್ದುಕೊಳ್ಳುವುದು ಒಂದು ಅನಿವಾರ್ಯವೇ ಆಗಿದೆ. ಆ ಮೂಲಕವೇ ಆತನಿಗೆ ಇಡೀ ಜಗತ್ತನ್ನು ನೋಡಲು ಸಾಧ್ಯವಾಗುವದು. ಒಡಲಾಳದ 'ಸಾಕವ್ವ' ಕಾದಂಬರಿ ಯಲ್ಲಿ ದಲಿತ ಹೆಣ್ಣು ಮಾತ್ರವಾಗಿ ಚಿತ್ರಣಗೊಂಡಿದ್ದರೂ ಆಕೆ ಇಡೀ ಮಾನವ ಕುಲದ ಪ್ರತಿನಿಧಿಯಾಗಿ ಕಳೆದುಹೋದ ಬದುಕಿನ ಹುಡುಕಾಟಕ್ಕೆ ಸಂಕೇತವಾಗುತ್ತಾಳೆ. 'ದಲಿತ' ಎನ್ನುವ ಪದ ಹುಟ್ಟಿಗೆ ಸಂಬಂಧಿಸಿದ್ದು ಎನ್ನುವಾಗಲೂ ದಲಿತ ಸಾಹಿತಿ ರಚನೆ ಮಾಡಿದುದು ಸೀಮಿತ ಆಶಯವನ್ನು ಒಳಗೊಂಡಿರುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ರಾಮಾಯಣ ಮಹಾಭಾರತಗಳನ್ನು ರಚಿಸಿದವರು ದಲಿತರು ಎಂಬುದನ್ನು

ನೆನೆದರೆ ದಲಿತರಿಂದ ರಚನೆಗೊಂಡದು ಸಾಮೂಹಿಕ ಆಶಯವನ್ನು ಒಳಗೊಳ್ಳಲಾರದು ಎಂದು ಹೇಳಬಹುದೆ: ಸಾಹಿತಿ ಜಾತಿಯಿಂದ ಎಂದೂ ದೊಡ್ಡವನಾಗಲಾರ. ಸಾಹಿತ್ಯಕ್ಕೆ ಆಳ, ಅಗಲಗಳು ಪ್ರಾಪ್ತವಾಗುವುದು ಸಾಹಿತಿ ಹೊಂದಿರುವ ವಿಶಿಷ್ಟ ಸಂವೇದನೆ. ಉನ್ನತವಾದ ಭಾವನೆ ಮತ್ತು ದರ್ಶನಗಳಿಂದ. ಈ ನೆಲೆಯಲ್ಲಿ ದಲಿತ ಸಾಹಿತ್ಯವಾಗಲೀ, ಬಂಡಾಯ ಸಾಹಿತ್ಯವಾಗಲಿ ತನ್ನಷ್ಟಕ್ಕೇ ತಾನು ದೊಡ್ಡದಾಗ ಲಾರದು. ಯಾವುದೇ ಕಾಲಘಟ್ಟದ ಸಾಹಿತ್ಯ ತನ್ನ ಕಾಲದ ಅಗತ್ಯಗಳಿಗೆ ಸ್ಪಂದಿಸದೇ ಹೋದರೆ ಅದು ಬಹುಬೇಗ ತೆರೆಯ ಹಿಂದೆ ಸರಿಯುತ್ತದೆ. ಬಂಡಾಯ ಸಾಹಿತ್ಯ ವಿಶಾಲ ವ್ಯಾಪ್ತಿಯುಳ್ಳದ್ದು, ದಲಿತ ಸಾಹಿತ್ಯಕ್ಕೆ ಆ ವ್ಯಾಪ್ತಿ ಇಲ್ಲ; ಪ್ರಗತಿಗಾಮಿ ದಲಿತ ಸಾಹಿತಿಗಳಲ್ಲಿ ಬಂಡಾಯ ಸಾಹಿತಿಗಳು; ಬಂಡಾಯ ಸಾಹಿತಿಗಳೆಲ್ಲರೂ ದಲಿತ ಸಾಹಿತಿಗಳಲ್ಲ ಎಂಬ ಮಾತುಗಳೂ ಕೂಡ ದಲಿತ ಸಾಹಿತ್ಯ ಮತ್ತು ದಲಿತ ಸಾಹಿತಿಗಳನ್ನು ಪ್ರತ್ಯೇಕವಾಗಿರಿಸುವ ಕಡೆಗೇ ಮುಖ ಮಾಡಿವೆ. ಡಾ॥ ಅರವಿಂದ ಮಾಲಗತ್ತಿಯವರು ಈ ಕುರಿತು ಮೂಲಭೂತ ಪ್ರಶ್ನೆಗಳನ್ನೆ ಎತ್ತಿದ್ದಾರೆ:

"ಬಂಡಾಯ ಸಾಹಿತ್ಯದ ಒಂದು ಭಾಗ ದಲಿತ ಸಾಹಿತ್ಯ ಏಕಾಗಬೇಕು: ಯಾಕೆ ದಲಿತ ಸಾಹಿತ್ಯದ ಒಂದು ಭಾಗ ಬಂಡಾಯ ಸಾಹಿತ್ಯವಾಗಬಾರದು: ಯಾಕೆ ಪ್ರಗತಿಗಾಮಿ ದಲಿತ ಸಾಹಿತಿಗಳು ಬಂಡಾಯ ಸಾಹಿತಿಗಳಾಗುತ್ತಾರೆ: ಯಾಕಾಗಿ ಸಾಹಿತಿಗಳೆಲ್ಲ ದಲಿತ ಸಾಹಿತಿಗಳಾಗುವುದಿಲ್ಲ ?[4]

ಇಲ್ಲಿನ ಅಂತರ್ಯವನ್ನು ಗ್ರಹಿಸದ ಪುರುಷೋತ್ತಮ ಬಿಳಿಮಲೆಯವರು ಪ್ರಶ್ನೆಗೆ ಉತ್ತರ ಹೇಳುವ ವಿವೇಕ ತೋರದೆ 'ದಲಿತರೆಂದರೆ ಅಸ್ಪೃಶ್ಯರು ಎಂದು ತೀರ್ಮಾನಿಸಿದ ಮೇಲೆಯೂ ಯಾಕಾಗಿ ಬಂಡಾಯ ಸಾಹಿತಿಗಳೆಲ್ಲ ದಲಿತ ಸಾಹಿತಿ ಗಳಾಗುವುದಿಲ್ಲ ಎಂಬ ಕುಚೋದ್ಯದ ಪ್ರಶ್ನೆ ಎತ್ತಿದರೆ ಉತ್ತರಿಸುವುದಾದರೂ ಹೇಗೆ? ಎಂದು ಕೈತೊಳೆದುಕೊಂಡಿದ್ದಾರೆ.[5] ಅಸ್ಪೃಶ್ಯತೆ ಎಂಬುದು ಕೇವಲ ಹೊಲೆಯ ಮಾದಿಗರಿಗಷ್ಟೇ ಅಂಟಿದ ಕಳಂಕವೆಂದು ಪುರುಷೋತ್ತಮ ಬಿಳಿಮಲೆಯವರು ಭಾವಿಸಿ ದಂತಿದೆ. ಕುವೆಂಪು ಅಂಥವರೂ ಮೇಲ್ಜಾತಿಯವರಿಂದ ಅನುಭವಿಸಿದ ಅಪಮಾನ, ಯಾತನೆಗಳನ್ನು ಬಿಳಿಮಲೆಯವರು ಗಮನಿಸದಿರುವುದು ಸೋಜಿಗ. ಬಂಡಾಯ ಸಾಹಿತಿಗಳೆಲ್ಲ ದಲಿತ ಸಾಹಿತಿಗಳೆಂದು ಗುರುತಿಸಿಕೊಳ್ಳಲು ಹಿಂದೇಟು ಹಾಕುತ್ತಿರು ವುದನ್ನು ನೋಡಿದರೆ ತಾವೆಲ್ಲ ದಲಿತರಿಗಿಂತ ಮೇಲಿನವರು ಎಂಬ ಭ್ರಮೆಯಲ್ಲಿ ಇರುವಂತಿದೆ. ಮನುಷ್ಯ-ಮನುಷ್ಯರ ನಡುವಿನ ಈ ಮೇಲು ಕೀಳುಗಳ ತರತಮ

4. ಉಲ್ಲೇಖ: ಡಾ. ಪುರುಷೋತ್ತಮ ಬಿಳಿಮಲೆ. ಬಂಡಾಯ ದಲಿತ ಸಾಹಿತ್ಯ (1990) ಪುಟ 66.
5. ಅದೇ ಪು. 66.

ಭಾವ ಇಲ್ಲವಾಗದೆ ಸಮಾನತೆ ಸಾಧಿಸುವುದೆಂತು ! ಬಂಡಾಯ ಸಾಹಿತ್ಯ ಹುಟ್ಟು ಪಡೆದದ್ದೇ ಶತಮಾನಗಳ ಕಾಲ ಅಕ್ಷರಜ್ಞಾನದ ಸವಲತ್ತುಗಳಿಂದ ವಂಚಿತವಾಗಿದ್ದು ಮತ್ತು ಮೇಲಿನ ಎಲ್ಲಾ ವರ್ಗದವರುಗಳಿಂದ ತುಳಿತಕ್ಕೆ ಒಳಗಾಗಿದ್ದ ಸಮಾಜದ ಕೆಳಗಿನ ಸ್ತರವೊಂದು ಮಾತನಾಡಲು ಕಲಿತು ತನ್ನ ಪ್ರತಿಭಟನೆಯನ್ನು ಅಭಿವ್ಯಕ್ತ ಪಡಿಸತೊಡಗಿದಾಗ.[6] ಬ್ರಾಹ್ಮಣ ಸಂಸ್ಕೃತಿಯ ವೈಭವೀಕರಣಕ್ಕೆ ಹೊಡೆತ ಕೊಡುವಂತೆ ದಲಿತರು ಬರೆಯಲಾರಂಭಿಸಿದಾಗ ಮುಸ್ಲಿಮರಿಗೆ ಮೈ ಚಳಿ ಬಿಟ್ಟು ಮಾತಾಡಲು ಸಾಧ್ಯವಾಯಿತು.[7] ಮಹಿಳೆಯೂ ತನ್ನನ್ನು ಸುತ್ತುವರೆದಿರುವ ಕೋಟೆಗೆ ಲಗ್ಗೆ ಇಡಲಾರಂಭಿಸಿದಳು. ಹೀಗೆ ಹತ್ತೂ ಕಡೆಯಿಂದ ಶೋಷಿತರ ದನಿ ಮಾರ್ದನಿಗೊಡುತ್ತಿತ್ತು. ದಲಿತ ಸಾಹಿತ್ಯ ಮತ್ತು ಚಳುವಳಿಯ ಉದ್ದೇಶಗಳ ಹರವಿನಿಂದಲೇ ಆಘಾತಗೊಂಡ ಮೇಲು ವರ್ಗದ ಲೇಖಕರು ತಮ್ಮ ಅನುಭವಗಳ ಬಗ್ಗೆಯೇ ಸಂಕೋಚ ಬೆಳೆಸಿಕೊಳ್ಳುವವರ ಜೊತೆಗೆ, ತಾವು ಅದುವರೆಗೂ ತೋರುತ್ತಿದ್ದ ತಮ್ಮ ಜಾತಿ ವರ್ಗಗಳನ್ನು ಕುರಿತ ವಿಮರ್ಶಾತ್ಮಕ ದೃಷ್ಟಿಕೋನಕ್ಕೆ ಕೂಡ 'ಗುಡ್ ಬೈ' ಹೇಳಿಸಿ ತಮ್ಮ ಜಾತಿಗಳನ್ನು ಪ್ರೀತಿಸತೊಡಗಿದರು. ಜಾತಿ, ಮತ ಕೇಂದ್ರಿತ ಸಾಹಿತ್ಯ ಈಗಾಗಲೇ ಇತಿಹಾಸದ ಮೂಲೆ ಸೇರಿದೆ. ತಮ್ಮ ತಮ್ಮ ಜಾತಿಗಳನ್ನು ಎತ್ತಿಕಟ್ಟುವ ನೆಪದಲ್ಲಿ ಮಾನವತೆಗೆ ಧಕ್ಕೆಯಾಗಿರುವುದನ್ನು ಇಂದು ಅರಿಯಬೇಕಾಗಿದೆ. ಬಸವಣ್ಣ, ಹರಿಹರ, ಕುವೆಂಪು ಅವರಂಥ ಸಾಹಿತಿಗಳು ಹೇಗೆ ಮಾನವತೆಗೆ ಘನತೆ ತಂದರೋ ಆ ನಿಟ್ಟಿನಲ್ಲಿ ಇಂದಿನ ಎಲ್ಲಾ ಪಂಥಗಳ ಸಾಹಿತಿಗಳು ಮುನ್ನಡೆಯಬೇಕಿದೆ. ಈ ಹಿನ್ನೆಲೆಯಲ್ಲಿ ದಲಿತ ಸಾಹಿತ್ಯವೆಲ್ಲವೂ ಬಂಡಾಯ ಸಾಹಿತ್ಯವೇ. ಹಾಗೆಯೇ ಬಂಡಾಯ 'ಶೋಷಿತರ ಒಡಲಾಳದಿಂದ ಭುಗಿಲೇಳಬೇಕು. ಆಗ ದಲಿತ–ಬಂಡಾಯ'ವೆಂಬ ಅಖಂಡ ಪರಿಕಲ್ಪನೆ ಒಡಮೂಡುತ್ತದೆ.

---

6. ಡಾ. ಶಿವರುದ್ರಪ್ಪ ಜಿ. ಎಸ್. ಬಂಡಾಯ ಸಾಹಿತ್ಯ: ಕೆಲವು ಚಿಂತನೆಗಳು (1990).
7. ನಾಯಕ ಜಿ. ಎಚ್. ಸಂಕ್ರಮಣ (1991) 26–8: ಪುಟ 42.
8. ಸತ್ಯನಾರಾಯಣ ಕೆ. ಹೊಸ ಭೂಮಿಕೆಯ ಅಭಾವ : ಸಾಹಿತ್ಯ ವಿಮರ್ಶೆ 1988: ಪುಟ 56.

ದೇಶೀ ಸ್ತ್ರೀವಾದದ ಉದ್ಘಾಟಕಿ ಅತ್ತಿಮಬ್ಬೆ

ಡಾ॥ ಹಂಪ. ನಾಗರಾಜಯ್ಯ

ದಶದಿಗ್ವಿಜಯದೊಳಮಳಿನ
ಯಶಮೆಸೆವಿನಮತ್ತಿಮಬ್ಬೆ ಜಿನಧರ್ಮ ದಯಾ
ವಶವರ್ತಿ ನಿದಾನಂ ಪೂ
ಜೆ ಶೀಲಮುಪವಾಸಮೆಂಬಿನಂ ಪ್ರಕಟಿಸಿದಳ್ ॥

ಬುಧಜನವಂದಿತೆ ಧರ್ಮ
ಪ್ರಧಾನ ದರ್ಶನ ವಿಶುದ್ಧೆ ದಾನಗುಣೈಕಾಂ
ಬುಧಿಯೆನಿಸಿದ ಕವಿವರಕಾ
ಮಧೇನುವೆಂಬುದತ್ತಿಮಬ್ಬೆಯನೆ ಜಗಂ ॥

ಜಿನಪದ ಭಕ್ತೆ ಜಗತ್ರಯ
ಜನವಂದಿತೆ ಚಕ್ರವರ್ತಿ ಪೂಜಿತೆ ಜಿನಶಾ
ಸನರುಚಿ ಪಡೆವಳ ತೈಲಸ
ಜನನಿಯೆ ತೀರ್ಥಕರ ಜನನಿಯೆನ್ನದರೊಳರೇ ॥

ಉತ್ತಮ ಗೋತ್ರೋದ್ಭವೆ ಸ
ದ್ವೃತ್ತೆ ಮಹಾಸತಿ ವಿನೇಯ ಚೂಡಾಮಣಿ ತಾ
ನೆತ್ತುಟಿದರೆತ್ತ ಪಿಕ್ಕುವೊ
ಡತ್ತಿಯ ಪಣ್ಣತ್ತಿಮಬ್ಬೆಯಲ್ಲದರ ಗುಣಂ ॥

ರನ್ನಕವಿ, ಅಜಿತಪುರಾಣ ಕಾವ್ಯ

ಸಮಾಜೋ – ಸಾಂಸ್ಕೃತಿಕ ಅಧ್ಯಯನಕ್ಕೆ ಹೇಗೊ ಹಾಗೆ ಸಮಾಜೋ – ಚಾರಿತ್ರಿಕ ಅಧ್ಯಯನಕ್ಕೂ ಅತ್ತಿಮಬ್ಬೆಯ ಬದುಕು ಆಕರವಾಗಿದೆ. ಆಕೆಯ ವೈಯಕ್ತಿಕ ಹಾಗೂ ಕೌಟುಂಬಿಕ ವಲಯದಲ್ಲಿ ರಾಜಶಕ್ತಿಯ ಪ್ರಭಾವ ಗಾಢವಾಗಿ ವ್ಯಕ್ತವಾಗಿದೆ. ಅದರಂತೆ ಅತ್ತಿಮಬ್ಬೆಯ ಮತ್ತು ಆಕೆಯ ಮನೆತನದವರ ಪ್ರಭಾವ ಅಂದಿನ ರಾಜಸತ್ತೆಯ

ಮೇಲೆ ವಿಪುಲವಾಗಿ ಕಂಡುಬರುತ್ತದೆ. ಸ್ತ್ರೀಯಾದ ಅತ್ತಿಮಬ್ಬೆಯೂ ಅಂದಿನ ಪುರುಷರೊಂದಿಗೆ ಸರಿಸಮವಾಗಿ ರಾಜಕೀಯ ಪ್ರಭುತ್ವದ ಅಧಿಕಾರ ವಲಯದಲ್ಲೂ, ಸಾಂಸ್ಕೃತಿಕ ಕ್ಷೇತ್ರದಲ್ಲೂ ಗಣ್ಯ ಶಕ್ತಿಯಾಗಿ ಗೌರವಾರ್ಹವಾಗಿದ್ದುದು ಅಭ್ಯಾಸ ಯೋಗ್ಯವಾಗಿದೆ. ಅತ್ತಿಮಬ್ಬೆಯ ಇಡೀ ಕುಟುಂಬ ಸ್ತ್ರೀವಾದದ ಸಂವಾದಗಳಿಗೆ ಗಟ್ಟಿಯಾದ ಜೀವಂತ ದೃಷ್ಟಾಂತ ಒದಗಿಸುವ ಒಂದು ಆದರ್ಶದ ಸ್ಥಿತಿಯಲ್ಲಿ ಕಾಣುತ್ತದೆ. ಅತ್ತಿಮಬ್ಬೆಯು ಹುಟ್ಟಿ ಬೆಳೆದ ಹಾಗೂ ಸೇರಿ ಬಾಳಿದ ಮನೆಗಳ ಗಂಡಸರು ಸ್ತ್ರೀಯ ವಿಚಾರವಾಗಿ ನಡೆದುಕೊಂಡ ರೀತಿಯನ್ನು ನೋಡಬೇಕು. ಅತ್ತಿಮಬ್ಬೆಯ ತಾತ ನಾಗಮಯ್ಯ, ತಂದೆ ಮಲ್ಲಪಯ್ಯ, ಚಿಕ್ಕಪ್ಪ ಪುನ್ನಮಯ್ಯ, ಅಣ್ಣ ಗುಂಡಮಯ್ಯ, ತಮ್ಮಂದಿರಾದ ವಲ್ಲ, ಎಳಮಯ್ಯ, ಪುನ್ನಿಗ ಮತ್ತು ಆಹವಮಲ್ಲ, ಗಂಡನಾದ ನಾಗದೇವ, ಮಾವನಾದ ದಲ್ಲಪಯ್ಯ ಮತ್ತು ಮಗನಾದ ಅಣ್ಣಿಗದೇವ – ಇವರೆಲ್ಲರೂ ಸ್ತ್ರೀಯರ ವಿಚಾರದಲ್ಲಿ ಸಂಭಾವಿತರಾಗಿ, ಹೃದಯವಂತ ರಾಗಿ, ಸುಸಂಸ್ಕೃತರಾಗಿ ವರ್ತಿಸಿದರು ; ಮಹಿಳೆಯು ತಮ್ಮ ಹಿಡಿತದೊಳಗೆ ಹದ್ದು ಬಸ್ತಿನಲ್ಲಿ ಇರಬೇಕೆಂದು ನಿಯಂತ್ರಿಸಲಿಲ್ಲ.

ಗಂಡಸರು ಬರೆದಿರುವ ಸಾಹಿತ್ಯದಲ್ಲೂ ಶಾಸನಗಳಲ್ಲೂ ಚರಿತ್ರೆಯಲ್ಲೂ ಮಹಿಳೆಯಾದ ಅತ್ತಿಮಬ್ಬೆ ಗಳಿಸಿರುವ ಉನ್ನತೋನ್ನತ ಸ್ಥಾನವನ್ನು ಸ್ತ್ರೀವಾದಿ ಚಿಂತಕರು ಪರಿಗಣಿಸಬೇಕು. ಏಕೆಂದರೆ ಚರಿತ್ರೆಯ ಪುಟಗಳಲ್ಲಿ ಸ್ತ್ರೀ ಕಾಣಿಸುವುದೇ ಇಲ್ಲವೆಂಬ (ಆರೋಪವಲ್ಲದ) ವಾಸ್ತವ ಮಾತಿದೆ. ಈ ಮಾತು ಬಹಳ ಮಟ್ಟಿಗೆ ದಿಟವೂ ಹೌದು. ವಸ್ತುಸ್ಥಿತಿ ಹೀಗಿರುವಾಗ ಝಾನ್ಸಿ ಲಕ್ಷ್ಮೀಬಾಯಿ, ಕಿತ್ತೂರು ಚೆನ್ನಮ್ಮ, ರಾಣಿ ಎಲಿಜಬೆತ್ ಮುಂತಾದವರಿಗಿಂತ ಹಲವು ನೂರು ವರ್ಷಗಳ ಹಿಂದೆ ಇತಿಹಾಸದಲ್ಲಿ ಗೋಚರಿಸುವ ಧೀಮಂತ ಮಹಿಳೆ ಅತ್ತಿಮಬ್ಬೆಯು ಸ್ತ್ರೀವಾದಿ ಅಧ್ಯಯನಕ್ಕೆ ಆಕರ ಸ್ವರೂಪಿಯಾಗಿದ್ದಾಳೆ.

ಈಗಿನ ಆಂಧ್ರಪ್ರದೇಶಕ್ಕೆ ಸೇರಿರುವ ವೆಂಗಿ ಮಂಡಲದ ಕಮ್ಮೆನಾಡಿನ ಪುಂಗ ನೂರು ಅತ್ತಿಮಬ್ಬೆಯ ತೌರೂರು. ಪುಂಗನೂರಿನ ಗಣ್ಯ ಪೌರನೆಂದರೆ ಕೌಂಡಿನ್ಯ ಕುಲದ ನಾಗಮಯ್ಯ. ಆತನು ಶಾಸ್ತ್ರಪಾರಂಗತ, ಮಹಾದಾನಿ, ಜನಹಿತ ಕಾರ್ಯ ನಿರತ. ಗುಣಲಕ್ಷಣ ಕೀರ್ತಿವಂತನಾದ ನಾಗಮಯ್ಯನ ಮಗಂದಿರು ಇಬ್ಬರು. ವಿದ್ಯಾ ನಿಧಿಯಾದ ಮಲ್ಲಪನು ಹಿರಿಯಮಗ, ಅಣ್ಣನ ಪರಮ ಭಕ್ತನಾದ ಪುನ್ನಮಯ್ಯನು ಕಿರಿಯಮಗ. ಮಲ್ಲಪನು ರಾಜಶಾಸ್ತ್ರ ನಿಪುಣ, ಮಹಾಶೂರ, ಕೊಡುಗೈವೀರ. ಆಚಾರವಂತ ತಮ್ಮನಾದ ಪುನ್ನಮಯ್ಯ ಕೂಡ ಅಣ್ಣನ ವಹಿವಾಟನ್ನು ಮುಂದು ವರಿಸಿದನು. ಅಣ್ಣತಮ್ಮಂದಿರ ಮನೆ ಪಂಡಿತಮಂಡಳಿಗೆ ಚಾವಡಿ, ಕವಿಸಮುದಾಯಕ್ಕೆ ತವರುಮನೆ, ಶಾಸ್ತ್ರಜಿಜ್ಞಾಸುಗಳಿಗೆ ಇಕ್ಕೆದಾಣ, ಜ್ಞಾನದಲ್ಲಿ, ಔದಾರ್ಯದಲ್ಲಿ, ಸಾಹಸ

ದಲ್ಲಿ, ಸಾಹಿತ್ಯ ಪೋಷಣೆಯಲ್ಲಿ ಅಣ್ಣತಮ್ಮಂದಿರು ಆದರ್ಶಪ್ರಾಯರು. ಇವರ ಮನೆತನದ ಗುರುಗಳಾದ ಜಿನಚಂದ್ರಾಚಾರ್ಯರ ಸ್ಮರಣೆಗಾಗಿ ಈ ಸೋದರರು ಮಹಾ ಕವಿ ಪೊನ್ನನಿಂದ 'ಶಾಂತಿಪುರಾಣಂ' ಕಾವ್ಯವನ್ನು ಬರೆಸಿ ಹಂಚಿದರು.

ಪುನ್ನಮಯ್ಯನು ಯುದ್ಧವೀರ ಸೇನಾಧಿಪತಿ, ಚಾಳುಕ್ಯರ ಪರವಾಗಿ ಕಾವೇರಿ ನದಿಯ ತೀರದಲ್ಲಿ ಹೋರಾಡುತ್ತಿರುವಾಗ ಹಗೆಗಳಿಂದ ಕೊಲ್ಲಲ್ಪಟ್ಟನು; ಒಡಹುಟ್ಟಿದ ತಮ್ಮನ ಕೊಲೆಯಾಯಿತು. ಆದರೂ ಮಲ್ಲಪನ ಕುಟುಂಬದಲ್ಲಿ ರಾಷ್ಟ್ರಪ್ರೇಮದ ನಂದಾದೀವಿಗೆ ಆರಲಿಲ್ಲ. ಮಲ್ಲಪನ ಮಕ್ಕಳಾದ ಗುಂಡಮಯ್ಯ, ಎಳಮಯ್ಯ, ಪುನ್ನಮಯ್ಯ, ಆಹವಮಲ್ಲ ಮತ್ತು ವಲ್ಲ ಎಂಬ ಐದು ಜನರೂ ದೇಶಪ್ರೇಮಕ್ಕೆ ಕಂಕಣ ಕಟ್ಟಿದರು. ಮಲ್ಲಪಯ್ಯನಿಗೆ ಐದುಜನ ಗಂಡುಮಕ್ಕಳಲ್ಲದೆ ಅತ್ತಿಮಬ್ಬೆ ಗುಂಡಮಬ್ಬೆ, ನಾಗಿಯಬ್ಬೆ ಎಂಬ ಮೂವರು ಮಗಳುದಿರೂ ಇದ್ದರು.

ಮಲ್ಲಪಯ್ಯನಂತೆಯೇ ಚಾಳುಕ್ಯ ಚಕ್ರವರ್ತಿ ತೈಲಪನ ಬಳಿಯಿದ್ದ ಇನ್ನೊಬ್ಬ ಪ್ರತಿಷ್ಠಿತ ಅಧಿಕಾರಿ ದಲ್ಲಪಯ್ಯ, ವಾಜಿಕುಲ ಶ್ರೇಷ್ಠನಾದ ದಲ್ಲಪಯ್ಯನು ತೈಲಪ ಮಹಾರಾಜನ ಭುಜಾದಂಡವಾಗಿದ್ದನು. ದಲ್ಲಪಯ್ಯನ ಮಗನೇ ಮಹಾಪರಾಕ್ರಮಿ ನಾಗದೇವ. ನೂರಾರು ಸಮರಗಳ ವಿಜಯಿಯಾದ ನಾಗದೇವನಿಗೆ ಮಲ್ಲಪಯ್ಯನ ಇಬ್ಬರು ಮಗಳುದಿರಾದ ಅತ್ತಿಮಬ್ಬೆ-ಗುಂಡಮಬ್ಬೆ ಮಡದಿಯರಾದರು.

ವಾಜಿಕುಳ ತಿಳಕ, ತೇಜೋಭಾಸ್ಕರ, ವೀರ ತ್ರಿಣೇತ್ರ, ನನ್ನಿ ಮಹಾರ್ಣವ, ಕಂದುಕ ಪುರಂದರ-ಎಂದು ಮುಂತಾಗಿ ನಾಗದೇವನಿಗೆ ಹಲವು ಪ್ರಶಸ್ತಿಮಾಲೆ. ರಾಮ ಲಕ್ಷ್ಮಣರಿಗಿಂತ, ಪಂಚ ಪಾಂಡವರಿಗಿಂತ ಮೀರಿದ ಸಾಹಸ ನಾಗದೇವನದು-ಎಂದು ಸ್ತುತಿ ಪಾತ್ರನಾಗಿದ್ದನು. ಆಂಧ್ರಮಗಧ ಲಾಳ ಖಸ ಪಾಂಡ್ಯ ದೇಶಾಧೀಶರನ್ನು ಸೋಲಿಸಿದ ಶೌರ್ಯೋನ್ನತಿ ನಾಗದೇವನದು. ನಾಗದೇವ-ಅತ್ತಿಮಬ್ಬೆಯರ ಹಿರಿಯ ಮಗ ಅಣ್ಣಿಗದೇವ. 'ಪಡೆವಳತೈಲ'-ಎಂಬುದು ಅಣ್ಣಿಗದೇವನ ಬಿರುದು. ಈತನೂ ತನ್ನ ತಂದೆ ತಾತರ ಹಾಗೆ ಮಹಾಪರಾಕ್ರಮಿ, ಹಲವು ಸಮರಗಳ ವೀರ. ಅಣ್ಣಿಗನೂ ಚಾಳುಕ್ಯ ಸಾಮ್ರಾಜ್ಯದ ಮಹಾಸೇನಾನಿ.

ಅತ್ತಿಮಬ್ಬೆಯ ಬಾಳು ಸುಗಮವಾಗಿ ಸಾಗುತ್ತಿದ್ದುದು ಒಮ್ಮೆಲೇ ಸಾವಿನ ಬಿರುಗಾಳಿಗೆ ಸಿಲುಕಿ ತತ್ತರಿಸಿ ಹೋಯಿತು. ಆಕೆಯಪತಿ ನಾಗದೇವನು ರಾಷ್ಟ್ರಕ್ಕಾಗಿ ಹೋರಾಡುತ್ತಿರುವಾಗ ರಣರಂಗದಲ್ಲಿ ಹಗೆಗಳಿಂದ ಹತನಾದನು. ನಾಗದೇವನೊಂದಿಗೆ ಕಿರಿಯ ಮಡದಿ ಗುಂಡಮಬ್ಬೆ ಸಹಗಮನ ಮಾಡಿದಳು. ಅತ್ತಿಮಬ್ಬೆಯು ಪತಿ ನಾಗದೇವನನ್ನೂ, ಒಡಹುಟ್ಟಿದ ತಂಗಿಯೂ ಸವತಿಯೂ ಆದ ಗುಂಡಮಬ್ಬೆಯನ್ನೂ ಕಳೆದುಕೊಂಡಳು, ನಡುಪ್ರಾಯದಲ್ಲಿ ವಿಧವೆಯಾದಳು. ವಿಧವೆಯಾದರೂ ಆಕೆ

ಧೃತಿಗೆಡಲಿಲ್ಲ. ವೈಧವ್ಯದ ದಿನಗಳನ್ನು ಸಮಾಜ ಸೇವೆಯಲ್ಲಿ ಸಾರ್ಥಕ ಪಡಿಸಿದಳು. ಅನಂತರದ ದಿನಗಳ ತನ್ನ ಉದಾತ್ತ ಬದುಕಿನ ಸಿದ್ಧಿ ಸಾಧನೆಗಳ ಸಮೃದ್ಧಿಯಿಂದ ಆಕೆ ಚರಿತ್ರಾರ್ಹಳಾದಳು.

ಅತ್ತಿಮಬ್ಬೆ ಹುಟ್ಟಿದ್ದು ಆಗರ್ಭ ಶ್ರೀಮಂತ ಕುಟುಂಬದಲ್ಲಿ ಆಕೆಯ ತೌರುಮನೆ ತಲೆ ತಲಾಂತರಗಳಿಂದ ಖ್ಯಾತಿ ಪಡೆದಿತ್ತು. ಸಾಹಿತ್ಯ ಸಂಸ್ಕೃತಿ ಕಲೆಗಳಿಗೆ ಅವರ ಮನೆ ಆವಾಸ ಸ್ಥಾನ. ಆಗಮಾದಿ ಶಾಸ್ತ್ರ ಕೃತಿಪಠಣ ಪಾರಾಯಣ ಮನೆಯೊಳಗೆ ಅನುಕರಣನವಾಗುತ್ತಿತ್ತು. ಧಾರ್ಮಿಕ ಗುರುಗಳ ಆಗಮನ ನಿರ್ಗಮನವು ಆ ಗೃಹದ ಉಚ್ಛ್ವಾಸ ನಿಶ್ವಾಸವಾಗಿತ್ತು. ವಿಚಾರಗಳ ವಾದ ಸಂವಾದಗಳಿಗೆ ಅವರ ಮನೆಯ ಜಗಲಿಯು ವೇದಿಕೆಯಾಗಿತ್ತು. ಧಾರ್ಮಿಕ ಸಮನ್ವಯ ವಂಶದ ಹಿರಿಮೆಗಳಲ್ಲೊಂದು; ಅವರ ಕುಟುಂಬದಲ್ಲಿ ವೈದಿಕ-ಜೈನ ಪರಂಪರೆಗಳು ಮಿಳಿತಗೊಂಡಿದ್ದುವು. ದೇಶ ಭಕ್ತರಿಗೆ ಜನ್ಮಕೊಟ್ಟ ಪ್ರತಿಷ್ಠಿತ ಕುಟುಂಬ. ಆ ಮನೆಯೊಳಗೆ ಒಂದು ಕಡೆ ಸಾಮು ಮಾಡುವ ಗರಡಿ ಮನೆ. ಇನ್ನೊಂದು ಕಡೆ ಆಯುಧಾಗಾರ. ಮತ್ತೊಂದೆಡೆ ಆನೆ ಕುದುರೆಗಳ ಲಾಯ. ಮಗದೊಂದೆಡೆ ಸದಾ ಅಸ್ತ್ರ ಶಸ್ತ್ರ ತರಬೇತಿ. ಅತ್ತಿಮಬ್ಬೆಯ ತಂದೆ ಚಿಕ್ಕಪ್ಪ ಅಣ್ಣ ತಮ್ಮಂದಿರು-ಎಲ್ಲರೂ ಚಾಳುಕ್ಯ ಸೇನೆಯ ವೀರಭಟರು ಮತ್ತು ದಂಡ ನಾಯಕರು. ಅತ್ತಿಮಬ್ಬೆ ಬೆಳೆದದ್ದು ಇಂಥ ವೈರುಧ್ಯ, ವೈದೃಶ್ಯಗಳ ಕಲರವಗಳ ನಡುವೆ.

ಅತ್ತಿಮಬ್ಬೆ ತನ್ನ ಸಹೋದರರೊಂದಿಗೆ ಅವರಿಗೆ ಸರಿಸಮನಾಗಿ ಕಲಿತು ಬೆಳೆದಳು. ಗಂಡು ಮಕ್ಕಳಂತೆಯೇ ಧಾರ್ಮಿಕ ಲೌಕಿಕ ಶಿಕ್ಷಣ ಪಡೆದಳು. ಕುದುರೆ ಸವಾರಿ ಕಸರತ್ತು ನಾನಾ ಆಯುಧಗಳ ಬಳಕೆ ಕತ್ತಿವರಸೆ ಬಿಲ್ವಿದ್ಯೆಗಳಲ್ಲಿ ಪಳಗಿ ಪರಿಣತ ಳಾದಳು. ಯುದ್ಧದ ಪೋಷಾಕು ಹಾಕಿದಳು. ರಕ್ಷಾಕವಚ, ಉಕ್ಕಿನ ಶಿರಸ್ತ್ರಾಣ ತೊಟ್ಟಳು. ಕಾಳಗಗಳಲ್ಲಿ ಭಾಗವಹಿಸಿದಳು. ಗಜಬಲ, ಅಶ್ವಬಲ, ರಥ, ಪದಾತಿ (ಚತು ರಂಗ) ಬಲದಲ್ಲಿ ಹೊಕ್ಕು ಬಳಕೆಗಳಿಂದ ಯುದ್ಧ ಕಲೆಯಲ್ಲಿ ನೈಪುಣ್ಯಗಳಿಸಿದಳು. ಗಾಯಾಳುಗಳಿಗೆ ಔಷಧವಿತ್ತು ಉಪಚರಿಸಿದಳು. ಭಟರಿಗೆ ಉತ್ತೇಜನ ನೀಡಿದಳು. ಹೆಣ್ಣೆಂದರೆ ಪುಕ್ಕಲು ಸ್ವಭಾವದ ಅಂಜುಬುರುಕಿಯಲ್ಲ ಎಂಬುದನ್ನು ಪ್ರತ್ಯಕ್ಷವಾಗಿ ತೋರಿಸಿದಳು. ಸ್ತ್ರೀಪಡೆಗೆ, ಪುರುಷ ಪದಾತಿಗೆ ತಾನೇ ಸ್ವಯಮಾಚಾರ್ಯಳಾಗಿ ಆಯುಧಪಾಣಿಯಾಗಿ ಮುಂಚೂಣಿಯಲ್ಲಿ ನಿಂತಳು. ಸೈನ್ಯದಲ್ಲಿ ಓಡಾಡುವುದು, ಸಿಪಾಯಿಗಳೊಂದಿಗೆ ಚರ್ಚಿಸುವುದು, ಅಶ್ವಾರೋಹಣ ಇವು ಅತ್ತಿಮಬ್ಬೆಗಾಗಲಿ. ಆಕೆಯ ಮನೆಮಂದಿಗಾಗಲಿ ಮುಜುಗರವೆನಿಸಲಿಲ್ಲ; 'ಏನಿದಂ ಗಂಡು ಬೀರಿಯಂತೆ ಕತ್ತಿ ಕಠಾರಿ ಈಟಿ ಬಿಲ್ಲು ಬಾಣ ಹಿಡಿದು ಯುದ್ಧರಂಗಕ್ಕೆ ಹೋಗುತ್ತೀಯೇ' ಎಂದು ಮೂಗು ಮುರಿಯಲಿಲ್ಲ.

ಅತ್ತಿಮಬ್ಬೆ ಹುಟ್ಟೂರಿನ ಅನುಕೂಲ ಪರಿಸರದಲ್ಲಿ ಅಡೆತಡೆಗಳಿಲ್ಲದೆ ಹೀಗೆ ಬೆಳೆದು ದೊಡ್ಡವಳಾದಳು. ಅವಳಲ್ಲಿದ್ದ ವಿವಿಧ ಪೂರಕ ಜೀವನ ಕ್ಷೇತ್ರಗಳ ಪರಿಶ್ರಮ ಆಸಕ್ತಿಗಳು ಆಕೆಯ ಮದುವೆಯಲ್ಲಿ ಮುಕ್ತಾಯವಾಗಲಿಲ್ಲ ಎಂಬುದು ಅವಶ್ಯ ಪರಿಭಾವಿಸಬೇಕಾದ ವಿಚಾರ. ವೀರಪುರುಷನಂತೆ ಕಲಿಯಾಗಿ ಬೆಳೆದ ಹೆಣ್ಣನ್ನು ಮದುವೆಯಾಗಲು ಹಿಂಜರಿಕೆ ಕಾಣಲಿಲ್ಲ. ಅತ್ತಿಮಬ್ಬೆಯನ್ನು ಸೊಸೆಯಾಗಿ ಮನೆ ತುಂಬಿಸಿಕೊಂಡ ಕುಟುಂಬವೂ ಇಂತಹುದೇ ಆಗಿತ್ತು. ಅಲ್ಲಿ ಸಿರಿತನದೊಂದಿಗೆ ಉದಾರ ದೃಷ್ಟಿಯೂ ಜೀವಂತವಾಗಿತ್ತು. ಅದೊಂದು ಸುಸಂಸ್ಕೃತ ಕುಟುಂಬ. ಆಕೆಯ ಮಾವ ದಲ್ಲಪಯ್ಯ ಅದ್ವಿತೀಯ ಸಮರವೀರ, ಚಾಳುಕ್ಯ ಕಟಕಾಚಾರ್ಯ, ರಾಜಕೀಯ ಮುತ್ಸದ್ಧಿ, ರಾಜಮಂತ್ರ ಪ್ರವೀಣ.

ಅತ್ತಿಮಬ್ಬೆ ಬಾಲ್ಯದಿಂದ ಅಮ್ಮನ ಮನೆಯಲ್ಲಿ ಕಲಿತ ವಿದ್ಯೆಗಳಿಗೆ ಅತ್ತೆಯ ಮನೆಯಲ್ಲಿ ಮತ್ತೆ ಹೊಸ ಹರಿತ-ಮಸೆತ ಸಾಧ್ಯವಾಯಿತು. ಅಲ್ಲಿ ತಾಯಿ ತಂದೆ ಆಕೆಯ ಸರ್ವಂಕಷ ವಿಕಾಸಕ್ಕೆ ಇಂಬಾಗಿದ್ದರು. ಇಲ್ಲಿ ಅತ್ತೆ ಮಾವಂದಿರೂ, ಕೈ ಹಿಡಿದ ನಲ್ಲನೂ, ಅತ್ತಿಮಬ್ಬೆಯ ಕ್ಷಾತ್ರ ಹಾಗೂ ಧಾರ್ಮಿಕ ಸ್ವಭಾವಗಳ ಉತ್ಕರ್ಷಕ್ಕೆ ಅನುವಾದರು. ಗಂಡ ನಾಗದೇವ, ಹೆಂಡತಿ ಅತ್ತಿಮಬ್ಬೆ ಕಲಿಗಳಾಗಿ ಕವಿಗಳಾಗಿ ಸವ್ಯ ಸಾಚಿಗಳಾಗಿ ಹೆಣೆದುಕೊಂಡರು. ಪರಸ್ಪರ ಅರಿತರು, ಅನ್ಯೋನ್ಯ ದಾಂಪತ್ಯಕ್ಕೆ ಮಾದರಿಯಾದರು. ಸತಿಪತಿಯರೊಂದಾಗಿ ರಣರಂಗದಲ್ಲಿ ಭಾಗವಹಿಸಿದರು. ಅತಿರಥ ರೊಂದಿಗೆ ರಥದಲ್ಲಿ ಕುಳಿತು ಪತ್ನಿಯರು ಪ್ರೋತ್ಸಾಹಿಸುತ್ತಿದ್ದರೆಂದು ಒಮ್ಮೊಮ್ಮೆ ಪುರಾಣಗಳಲ್ಲಿ ಬರುವ ವರ್ಣನೆ ಕಲ್ಪನಾಲೋಕದ ಮುಗಿಲ ಮಲ್ಲಿಗೆಯ ಮಾತಾಗಿತ್ತು. ಆದರೆ ನಾಗದೇವ-ಅತ್ತಿಮಬ್ಬೆ ಜೋಡಿಯಲ್ಲಿ ಪುರಾಣವೂ ಪ್ರತ್ಯಕ್ಷವಾಗಿ ಸಂಭವಿಸಿತ್ತು.

ಒಮ್ಮೆ ಉದ್ವೃತ್ತನಾಗಿ ಸೈನ್ಯ ಸಮೇತ ಶತ್ರುವೊಬ್ಬನು ದಾಳಿ ಮಾಡಿದನು. ನಾಗದೇವನು ಬೇರೆ ಸ್ಥಳದಲ್ಲಿ ಯುದ್ಧ ನಿರತನಾಗಿದ್ದನು. ಅತ್ತಿಮಬ್ಬೆ ಚಲಿತಳಾಗ ಲಿಲ್ಲ. ಸೈನ್ಯದೊಂದಿಗೆ ತಾನೇ ಸೇನಾನಿಯಾಗಿ ಮುನ್ನುಗ್ಗಿ ಹೋರಾಡಿದಳು. ಶತ್ರು ವನ್ನು ಸಂಪೂರ್ಣವಾಗಿ ಸೋಲಿಸಿದಳು. ಶತ್ರು ಸೈನ್ಯವನ್ನು ಧೂಳೀಪಟ ಮಾಡಿದಳು. ತನ್ನ ಪಡೆಯ ಸೈನಿಕರನ್ನು ಸೋಲಿನಿಂದಲೂ ಸಾವಿನಿಂದಲೂ ಕಾಪಾಡಿದಳು. ಇಂಥ ಸಾಹಸಗಳಿಂದಾಗಿ ಚಾಳುಕ್ಯ ಚಕ್ರವರ್ತಿಗಳಿಂದ 'ಕಟಕ ಪವಿತ್ರೆ' ಎಂದು ಬಿರುದಾಂಕಿತ ಳಾದಳು. ರನ್ನ ಕವಿಯಂತೂ ಮೊಲೆವೆತ್ತ ಅತ್ತಿಮಬ್ಬೆಯ ಪಕ್ಕದಲ್ಲಿ ಮೀಸೆಹೊತ್ತ ಪುರುಷರು ಶೋಭಿಸಬಲ್ಲರೆ ಎಂದು ನಿಸ್ಸಂಕೋಚವಾಗಿ ಪ್ರಶ್ನಿಸಿದ್ದಾನೆ. ಅತ್ತಿಮಬ್ಬೆ ಮನೆಯೊಳಗೆ ದಾನಕಲಿಯಾಗಿ, ಮೊನೆಯೊಳಗೆ (ರಣರಂಗದಲ್ಲಿ) ವೀರ ಕಲಿಯಾಗಿ ಅಸದೃಶವಾದ ಕೀರ್ತಿ ಗಳಿಸಿದ್ದಳೆಂದು ಕವಿಗಳು ಚಿತ್ರಿಸಿದ್ದಾರೆ.

ಜೀವನವೆಂಬುದು ಸುಖದ ಸರಳ ರೇಖೆಯೂ ಅಲ್ಲ, ದುಃಖಗಳ ವಕ್ರರೇಖೆಯೂ ಅಲ್ಲ, ಬದುಕು ನೋವು ನಲಿವುಗಳ ಕಲಸುಮೇಲೋಗರ. ಅತ್ತಿಮಬ್ಬೆಯ ಬಾಳೂ ಈ ನಿಯಮಕ್ಕೆ ಹೊರತಾಗಿರಲಿಲ್ಲ. ಆಕೆ ತನ್ನ ಯೌವನದ ದಿನಗಳಲ್ಲಿ ಗಂಡನನ್ನು ಕಳೆದುಕೊಂಡಳು. ಮಗ ಅಣ್ಣಿಗದೇವನೂ ಚಿಕ್ಕವನು. ಇಂಥ ಪ್ರತಿಕೂಲ ಪರಿಸರ ನೀಡುವ ಹರಿತವಾದ ನೋವಿನ ಮುಖಾಮುಖಿಯಲ್ಲಿ ಅತ್ತಿಮಬ್ಬೆ ಎದೆಗುಂದಲಿಲ್ಲ. ದೌರ್ಭಾಗ್ಯವೇ ಮೇಲೇರಿ ಬಂದ ಈ ದುರ್ಭರ ಪ್ರಸಂಗದಲ್ಲಿ ಆಕೆ ಬದುಕಿನ ಸವಾಲುಗಳನ್ನು ಎದುರಿಸಿ ನಿಭಾಯಿಸಿದ ರೀತಿ ಅನನ್ಯ. ಅತ್ತಿಮಬ್ಬೆಯ ಜೀವನದ ಉತ್ತರಾರ್ಧವಂತೂ ಕರ್ನಾಟಕದ ಸಮಗ್ರ ಸಾಂಸ್ಕೃತಿಕ ಚರಿತ್ರೆಯಲ್ಲಿ ಅಪೂರ್ವ ದಾಖಲೆ. ಸಂಸಾರವನ್ನು ತ್ಯಜಿಸಲಿಲ್ಲ. ವೈರಾಗ್ಯ ಹೊಂದಿ ಸನ್ಯಾಸಿನಿ ಆಗಲಿಲ್ಲ. ಪಲಾಯನವಾದಕ್ಕೆ ಶರಣಾಗಲಿಲ್ಲ. ಸಂಸಾರ ಯೋಗದ ನೊಗಕ್ಕೆ ಹೆಗಲುಕೊಟ್ಟಳು. ತನ್ನ ಹೊಣೆಗಳನ್ನು ಒಪ್ಪಿಕೊಂಡಳು. ಬದುಕಿನ ವಾಸ್ತವಗಳಿಗೆ ಸೂಕ್ತ ರೀತಿಯಲ್ಲಿ ಸ್ಪಂದಿಸಿದಳು, ಈಸಿದಳು, ಈಸಿ ಜೈಸಿದಳು. ಚರಿತ್ರೆಯಲ್ಲಿ ಇಂಥ ನಿದರ್ಶನ ಇನ್ನೊಂದಿಲ್ಲ.

ಅತ್ತಿಮಬ್ಬೆ ಪಂಚಾಣುವ್ರತಗಳನ್ನು ಸ್ವೀಕರಿಸಿ ಆದರ್ಶ ಗೃಹಿಣಿ (ಶ್ರಾವಕಿ) ಎನಿಸಿದಳು. ಸತ್ಯ ಅಹಿಂಸೆ ಅಸ್ತೇಯ ಅಪರಿಗ್ರಹ ಬ್ರಹ್ಮಚರ್ಯ ಎಂಬ ಐಯ್ದು ಗೃಹಸ್ಥ ನಿಯಮಗಳನ್ನು ಧರಿಸಿದಳು, ಆಹಾರದಾನ ಅಭಯದಾನ ಔಷಧದಾನ ಶಾಸ್ತ್ರದಾನ–ಎಂಬ ನಾಲ್ಕು ರೀತಿಯ (ಚತುರ್ವಿಧ) ದಾನಗಳನ್ನು ಧಾರಾಳವಾಗಿ ನೀಡಿದಳು. ಧರ್ಮ ಗ್ರಂಥಗಳನ್ನು ನಿತ್ಯವಾಚನ ಮಾಡಿದಳು (ಸ್ವಾಧ್ಯಾಯ). ಎಲ್ಲ ಪರ್ವ ನೋಂಪಿಗಳಲ್ಲೂ ಉಪವಾಸವನ್ನು ಆಚರಿಸಿದಳು. ಪಂಚಣಮೋಕಾರ ಮಂತ್ರ ಪಠಣ ನಿರತಳಾದಳು (ತಪ). ಗುರುವಂದನೆ, ಜಿನವಂದನೆ, ತೀರ್ಥಕ್ಷೇತ್ರ ದರ್ಶನಗಳಲ್ಲಿ ದಿನಗಳನ್ನು ಕಳೆದಳು. ಸಾಮಯಿಕವನ್ನು ಆಚರಿಸಿದಳು. ಸೂರ್ಯೋದಯಾನಂತರ ಮತ್ತು ಸೂರ್ಯಾಸ್ತದೊಳಗೆ ಹಗಲಿನಲ್ಲಿ ಮಾತ್ರ ಆಹಾರ ಸ್ವೀಕರಿಸುವ ನಿಮಮ ಪಾಲಿಸಿದಳು. ಸಂಯಮದ ಜೀವನ, ಶಿಸ್ತುಬದ್ಧ ಬದುಕು. ಇದರಿಂದ ಅತ್ತಿಮಬ್ಬೆ ತಪಸ್ವಿನಿ ಎನಿಸಿದಳು. ಚಕ್ರವರ್ತಿಯಿಂದ ಸಾಮಾನ್ಯ ಪ್ರಜೆಯವರೆಗೆ ಎಲ್ಲರೂ ಆಕೆಗೆ ತಲೆ ಬಾಗಿದರು, ಕೈ ಮುಗಿದರು.

ಈ ರೀತಿ ಧಾರ್ಮಿಕ ಚೌಕಟ್ಟಿಗೆ ಒಳಪಟ್ಟು ಕಠಿಣ ಜೀವನ ನಡಸಿದರೂ ಅತ್ತಿಮಬ್ಬೆ ಲೌಕಿಕದ ರೀತಿ ರಿವಾಜುಗಳಿಗೆ ವಿಮುಖಿಳಾಗಲಿಲ್ಲ. ತನ್ನ ಮನೆತನದ ಹಿರಿಯರು ಸಲವತ್ತು ವರ್ಷಗಳ ಹಿಂದೆ ಪೊನ್ನಕವಿಯಿಂದ 'ಶಾಂತಿಪುರಾಣಂ' ಕಾವ್ಯವನ್ನು ಬರೆಸಿದ್ದರು ; ಕವಿಗಳಿಗೆ ಮುನಿಗಳಿಗೆ ಪಂಡಿತ ಮಂಡಳಿಗೆ ಗೌರವ ತೋರಿದ್ದರು. ಆಶ್ರಯ ನೀಡಿದ್ದರು. ಪ್ರೋತ್ಸಾಹ ಕೊಟ್ಟಿದ್ದರು. ಅತ್ತಿಮಬ್ಬೆ ಇದನ್ನು ಇತೋಪ್ಯತಿಶಯವಾಗಿಸಿದಳು, ಪೊನ್ನನ ಶಾಂತಿಪ್ರರಾಣ ಕಾವ್ಯದ ಒಂದು ಸಾವಿರ ಓಲೆಗರಿ ಪ್ರತಿಗಳನ್ನು ಮಾಡಿಸಿದಳು. ನೂರಾರು ಜನ ಹಸ್ತಪ್ರತಿಕಾರರಿಗೆ ಕೆಲಸ ಕಲ್ಪಿಸಿ

ಕೊಟ್ಟಳು. ಶಾಂತಿಪುರಾಣದ ಸಾವಿರ ಓಲೆಗರಿ ಗ್ರಂಥದ ಪ್ರತಿಗಳನ್ನು ಸಾಹಿತ್ಯಾಸಕ್ತ ಕುಟುಂಬಗಳಿಗೆ ಉಚಿತವಾಗಿ ಹಂಚಿದಳು. ಶಾಸ್ತ್ರದಾನದ ಪರಂಪರೆಗೆ ಮರುಹುಟ್ಟು ಕೊಟ್ಟಳು. ರನ್ನಕವಿಗೆ ಆಶ್ರಯ ನೀಡಿ 'ಅಜಿತಪುರಾಣ'ವನ್ನು ಬರೆಸಿದಳು. ರನ್ನ ಕವಿ ಆಕೆಯ ಬಾಳಿನ ಎತ್ತರ ಬಿತ್ತರಗಳನ್ನು ಹತ್ತಿರದಿಂದ ಕಂಡವನು. ಅತ್ತಿಮಬ್ಬೆಯ ವ್ಯಕ್ತಿತ್ವದ ಭವ್ಯ ಸ್ವರೂಪವನ್ನು ಕಾವ್ಯವಾಗಿ ಬಿಂಬಿಸಿದವನು. ರನ್ನನು ತನ್ನ ಮಗಳಿಗೆ ಅತ್ತಿಮಬ್ಬೆಯ ಹೆಸರಿಟ್ಟು ಗೌರವವನ್ನು ಜೀವಂತಗೊಳಿಸಿದನು.

ಅತ್ತಿಮಬ್ಬೆಯು ಕಾಮಧೇನುವೊ ಕಲ್ಪವೃಕ್ಷವೊ ಚಿಂತಾಮಣಿಯೊ ಎಂದು ಜನತೆ ಹುಬ್ಬೇರಿಸುವಂತೆ ದಾನಧರ್ಮಗಳನ್ನು ರಾಶಿರಾಶಿಯಾಗಿ ಮಾಡಿದಳು. 1500 ಜಿನಬಿಂಬಗಳನ್ನು ಮಾಡಿಸಿ ಹಂಚಿದಳು. ದೇವತಾಮೂರ್ತಿಗಳನ್ನು ಇಡಲು ಮರದ ಮಂದಾಸನ ಪೀಠಗಳನ್ನು ಮಾಡಿಸಿಕೊಟ್ಟಳು. ಪೂಜೆಯ ಕಾಲದಲ್ಲಿ ನುಡಿಸಲು ಜಯಗಂಟೆಗಳನ್ನು ವಿತರಿಸಿದಳು. ಪೂಜಾಮಂಟಪಗಳನ್ನು ಅಲಂಕರಿಸಲು ಬೆಳ್ಳಿಯ ತೋರಣ, ಬಳ್ಳಿಕಟ್ಟುಗಳನ್ನು ದಾನವಿತ್ತಳು.

ಅತ್ತಿಮಬ್ಬೆಯ ಸಾಧನೆಗಳಲ್ಲಿ ಶಿಖರಪ್ರಾಯವಾಗಿರುವುದು ಆಕೆ ನಿರ್ಮಿಸಿದ 1501 ಬಸದಿಗಳು. ಇದು ಊಹಾತೀತ ಅದ್ಭುತ ಸಾಧನೆ. ಒಬ್ಬ ವ್ಯಕ್ತಿಯ ಜೀವಿತ ಕಾಲದಲ್ಲಿ ಇಷ್ಟೊಂದು ಬೃಹತ್ ಪ್ರಮಾಣದ ವಾಸ್ತುಶಿಲ್ಪ ನಿರ್ಮಾಣ ಕಾರ್ಯ ಜಗತ್ತಿನ ಅಚ್ಚರಿಗಳ ಸಾಲಿಗೆ ಸೇರುವಂತಹುದು ; ಪ್ರಪಂಚದ ಚರಿತ್ರೆಯಲ್ಲಿಯೇ ಯಾವ ರಾಜ ರಾಣಿಯೂ ಮಾಡಿರದ ವಿಕ್ರಮ. ಇಂಥ ಮುರಿಯಲಾಗದ ದಾಖಲೆಯನ್ನು ಕರ್ನಾಟಕದ ಒಬ್ಬ ಸ್ತ್ರೀ ಸಾಧಿಸಿದಳೆಂಬುದು ನಾಡು ಹೆಮ್ಮೆಪಡುವ ಸಂಗತಿ.

ಅತ್ತಿಮಬ್ಬೆ ಕಟ್ಟಿಸಿದ 1501 ದೇವಸ್ಥಾನಗಳಲ್ಲಿ 1500 ಹಾಳಾಗಿವೆ. ಆಕೆ ಕ್ರಿ.ಶ. 1007 ರಲ್ಲಿ ಕಟ್ಟಿಸಿದ ಕಟ್ಟ ಕಡೆಯದಾದ ದೇವಸ್ಥಾನ ಮಾತ್ರ ಲಕ್ಕುಂಡಿಯಲ್ಲಿ ಇಂದಿಗೂ ಕಂಗೊಳಿಸುತ್ತಿದೆ. ತನ್ನ ಕುಲದ ಕುಲಗುರುವಾದ ಅರ್ಹಣಂದಿ ಪಂಡಿತ ದೇವ ಆಚಾರ್ಯರಿಗೆ ಈ ದೇವಸ್ಥಾನವನ್ನು ಸಮರ್ಪಿಸಿದ್ದಾಳೆ, ದೇಗುಲದ ಪೂಜಾದಿಗಳು ಸಾರೋದ್ಧಾರವಾಗಿ ನಡೆಯಲೆಂದು 'ಸುರುಕಿ' ಎಂಬ ಗ್ರಾಮವನ್ನು, ಅದರ ಸಮಸ್ತ ಆದಾಯವನ್ನು ಲಕ್ಕುಂಡಿಯ ಬ್ರಹ್ಮಜಿನಾಲಯಕ್ಕೆ ದಾನಕೊಟ್ಟಳು. ಚಾಳುಕ್ಯ ಚಕ್ರವರ್ತಿಯಾದ ಸತ್ಯಾಶ್ರಯ ಇರಿವ ಬೆಡಂಗನು ಅತ್ತಿಮಬ್ಬೆಯನ್ನು ತನ್ನ ಹೆತ್ತ ತಾಯಿಯಂತೆ ಭಕ್ತಿ ಗೌರವ ತೋರುತ್ತ ಬೆಳೆದವನು. ಆತನು ಲಕ್ಕುಂಡಿಯ ಬಸದಿಗೆ ಚಕ್ರವರ್ತಿ ದತ್ತಿಯಿತ್ತನು. ಅಲ್ಲದೆ ಈ ದೇವಾಲಯಕ್ಕೆ ಸುವರ್ಣ ಕಳಶವನ್ನು ತಾನೇ ಮಾಡಿಸಿದನು. ಪ್ರಸಿದ್ಧ ತಾಮ್ರಶಾಸನವನ್ನು ಅತ್ತಿಮಬ್ಬೆಯ ಹೆಸರಿಗೆ ಹಾಕಿಸಿಕೊಟ್ಟನು.

ಅತ್ತಿಮಬ್ಬೆ ಕವಿವರ ಕಾಮಧೇನುವಾಗಿದ್ದಳು. ಧರ್ಮಕ್ಕೂ ಸಾಹಿತ್ಯಕ್ಕೂ ಪುರಸ್ಕಾರ ನೀಡಿದಂತೆ ಅನ್ಯಜ್ಞಾನ ಶಾಖೆಗಳಿಗೂ ನೆರಳು ನೀಡಿದಳು. ಕಥಕರಿಗೆ (ಕಥೆ ಹೇಳುವವರಿಗೆ) ಗಾಯಕರಿಗೆ (Vocalists) ವಾದಕರಿಗೆ (Instrumentalists) ನಗ್ನರಿಗೆ ಭಗ್ನರಿಗೆ ನಟರಿಗೆ ಭಟರಿಗೆ ಅನಾಥರಿಗೆ ಶಿಷ್ಟರಿಗೆ ಇಷ್ಟರಿಗೆ – ಹೀಗೆ ಎಲ್ಲ ವರ್ಗದ ಪ್ರತಿಭೆಗಳಿಗೂ ಪತಿತರಿಗೂ ಪದದಲಿತರಿಗೂ ಬೇಡಿದುದನ್ನು ಸಮನಾಗಿ ದಾನವಿತ್ತು ಸಂತೋಷ ಪಡಿಸಿದಳೆಂದು ಶಾಸನ ನಿರೂಪಿಸಿದೆ. ಬಯಸಿದ ಜನರಿಗೆ ಬಯಸಿದುದನ್ನು ದಾನಕೊಡುವುದರಲ್ಲಿ ಆಕೆ ಹರ್ಷಿಸುತ್ತಿದ್ದಳು. ಆ ಕಾರಣದಿಂದ ಅತ್ತಿಮಬ್ಬೆಯನ್ನು ಸಮಕಾಲೀನ ಶಾಸನವು 'ಸಮಭಿಲಷಿತಾರ್ಥ ದಾನವಿನೋದೆ' ಎಂದು ಗೌರವಿಸಿದೆ.

ಅತ್ತಿಮಬ್ಬೆ ಚಕ್ರವರ್ತಿನಿಯಲ್ಲವಾದರೂ ಚಕ್ರವರ್ತಿ ಪೂಜಿತೆಯಾಗಿದ್ದಳು, ಕಲ್ಯಾಣಿ ಚಾಳುಕ್ಯ ಸಾಮ್ರಾಜ್ಯದ ಪ್ರಥಮ ಚಕ್ರವರ್ತಿಯಾದ ತೈಲಪನು ಆಕೆಯನ್ನು ಪೂಜ್ಯಳೆಂದು ಸಂಮಾನಿಸಿದನು. ತೈಲಪನ ಮಗನಾದ ಸತ್ಯಾಶ್ರಯ ಇರಿವಬೆಡಂಗನೂ ತನ್ನ ತಂದೆಯು ತೋರಿದ ರಾಜಮರ್ಯಾದೆಯನ್ನು ದ್ವಿಗುಣಿಸಿದನು. ಅವನ ಅನಂತರ ಚಕ್ರವರ್ತಿಗಳಾದ ಅಯ್ಯನೆಯ ವಿಕ್ರಮಾದಿತ್ಯ, ಅಯ್ಯಣದೇವ, ಹಾಗೂ ಜಗದೇಕ ಮಲ್ಲ ಜಯಸಿಂಹ – ಇವರೆಲ್ಲರೂ ಅತ್ತಿಮಬ್ಬೆಯನ್ನು ಹೆತ್ತ ತಾಯಿಗೆ ಸರಿಮಿಗಿಲೆಂದು ತಲೆ ಬಾಗಿದರು. ಹೀಗೆ ಐದು ಜನ ಚಕ್ರವರ್ತಿಗಳಿಂದ ಪೂಜೆ ಪುರಸ್ಕಾರ ಪ್ರಶಸ್ತಿಗಳನ್ನು ಪಡೆದ ಏಕಮೇವ ಅದ್ವಿತೀಯಸ್ತ್ರೀ, ಜಗತ್ತಿನ ಚರಿತ್ರೆಯಲ್ಲಿ, ಅತ್ತಿಮಬ್ಬೆ ಒಬ್ಬಳೇ! ಆ ವೀರ ಮಹಿಳೆ ಕನ್ನಡಿತಿ ಎಂಬುದು ಅಭಿಮಾನವನ್ನು ಉಕ್ಕಿಸುವ ಸಂಗತಿ.

ಅತ್ತಿಮಬ್ಬೆ ಜೀವಿತ ಕಾಲದಲ್ಲಿಯೇ ಮಹಾಮಹಿಮಾನ್ವಿತ ಸಾಧನೆಗಳಿಂದಾಗಿ ಪವಾಡಸ್ತ್ರೀ ಎಂದೆನಿಸಿದಳು. ಅವಳ ಒಂದೊಂದು ಸಾಧನೆಯೂ ಅಂದಿನ ಜನತೆಗೆ ಅಚ್ಚರಿಯಾಗಿತ್ತು. ಇಂದಿನ ಕಾಲಕ್ಕೂ ಆಕೆಯ ಸಾಕಲ್ಯ ವ್ಯಕ್ತಿತ್ವ ಬೆರಗು ಮೂಡಿಸುತ್ತದೆ. ಮಹಾವ್ಯಕ್ತಿಗಳ ಹಿರಿಮೆ ಸಾರಲು ಅವರಿಗೆ ಪವಾಡಗಳನ್ನು ಆರೋಪಿಸುವುದು ಲೋಕ ರೂಢಿ. ಆದರೆ ಅತ್ತಿಮಬ್ಬೆಯು ಇನ್ನೂ ಬದುಕಿರುವಾಗಲೇ ಏಳು ಮಹಿಮೆಗಳನ್ನು ಆಕೆ ಪ್ರದರ್ಶಿಸಿದಳೆಂಬ ಪ್ರತೀತಿ ಶಾಸನಗಳಲ್ಲಿ ಪ್ರಚಾರ ಪಡೆದಿವೆ :

1. ಉನ್ನತ ಕುಕ್ಕುಟೇಶ್ವರನಾದ ಗೊಮ್ಮಟ ಸ್ವಾಮಿಯನ್ನು ಕಾಣುವವರೆಗೂ ಅನ್ನವನ್ನು ತೊರೆದಳು. ನಿರಾಹಾರಿಯಾಗಿ ಬೆಟ್ಟವನ್ನು ಹತ್ತುವಾಗ, ಆಕೆಯ ಬಳಲಿಕೆಯನ್ನು ಹೋಗಲಾಡಿಸಲು, ಅಕಾಲದಲ್ಲಿಯೂ ಮಳೆಬಿದ್ದಿತು.

2. ತೈಲಪ ಚಕ್ರವರ್ತಿಯ ಸೈನ್ಯ ಹೊರಟಾಗ, ಗೋದಾವರಿ ನದಿಯಲ್ಲಿ ಪ್ರವಾಹದಿಂದ. ನದಿದಾಟುವುದು ಅಸಾಧ್ಯವಾಯಿತು. ಆಗ ಚಕ್ರವರ್ತಿಯು ಅತ್ತಿಮಬ್ಬೆಯನ್ನು ಸಹಾಯಕ್ಕಾಗಿ ಬೇಡಿದನು. ಆಕೆ ಜಿನಬಿಂಬವನ್ನು ತಲೆಯಲ್ಲಿ ಹೊತ್ತು ತುಂಬಿ ಹರಿಯುತ್ತಿದ್ದ ನದಿಗೆ ಇಳಿದಳು. ಒಡನೆಯೇ ಪ್ರವಾಹ ತಗ್ಗಿತು.

3. ಮದಿಸಿದ ಆನೆಯು ತನ್ನನ್ನು ಕಟ್ಟಿಹಾಕಿದ್ದ ಹಗ್ಗಸರಪಳಿಯನ್ನು ಹರಿದು ಮುರಿದು ಮುನಿಸಿನಿಂದ ಜನರ ಮೇಲೆ ಮುನ್ನುಗ್ಗಿತು. ಆದರೆ ಅತ್ತಿಮಬ್ಬೆಯನ್ನು ಕಂಡೊಡನೆಯೇ ಭಕ್ತಿಯಿಂದ ಕಾಲಿಗೆ ನಮಸ್ಕರಿಸಿತು.

4. ಅತ್ತಿಮಬ್ಬೆ ನಿತ್ಯ ಪೂಜಿಸುತ್ತಿದ್ದ ದೇವರ ಬಿಂಬವು ಕೈಜಾರಿ ನದಿಯೊಳಗೆ ಬಿದ್ದು ಹೋಯಿತು. ಆ ಜಿನಬಿಂಬ ಮತ್ತೆ ಕೈಗೆ ಬರುವವರೆಗೆ ಆಹಾರ ಬಿಟ್ಟಳು. ಎಂಟನೆಯ ದಿನಕ್ಕೆ ಆ ದೇವತಾ ಮೂರ್ತಿ ಮತ್ತೆ ಕೈಗೆ ಬಂದಿತು.

5. ಪ್ರಳಯಾಗ್ನಿಯಂತೆ ಸೈನ್ಯವನ್ನು ಆವರಿಸುತ್ತಿದ್ದ ಬೆಂಕಿಯು, ಅತ್ತಿಮಬ್ಬೆ ನಿರ್ಮಲವಾದ ಜಿನಗಂಧೋದಕವನ್ನು ಚಿಮುಕಿಸಿದ ಕೂಡಲೆ ನಂದಿತು.

6. ಅತ್ತಿಮಬ್ಬೆಯ ಸವತಿಯು ದೋಣಿಯಿಂದ ಅತ್ತಿಮಬ್ಬೆಯನ್ನು ನದಿಗೆ ನೂಕಲು ಪ್ರಯತ್ನಿಸಿದಳು. ದೋಣಿ ಗಿರ್ರನೆ ಸುತ್ತಲಾರಂಭಿಸಿತು. ಹೆದರಿದ ಸವತಿಯು ಅತ್ತಿಮಬ್ಬೆಯ ಅಡಿಗೆರಗಿ ಮನ್ನಿಸಲ್ಪಟ್ಟಳು.

7. ನರ್ಮದಾ ನದಿಯ ದಡದ ದೇವಾಲಯದಲ್ಲಿ ದೇವರ ಬಿಂಬವನ್ನು ದರ್ಶನ ಮಾಡುವವರೆಗೂ ಆಹಾರ ಮುಟ್ಟಲಿಲ್ಲ. ಈ ಉಪವಾಸ ಆಕೆಯ ಜೀವಿತದವರೆಗೂ ಪ್ರಸಿದ್ಧವಾಯಿತು.

ಈ ಏಳು ಮಹಿಮೆಗಳು ಆ ಕಾಲದ ಜನತೆ ಪಟ್ಟ ವಿಸ್ಮಯ ಭಾವದ ಪ್ರತಿಧ್ವನಿ. ಸಮಕಾಲೀನ ಚಾಳುಕ್ಯ ಸಾಮ್ರಾಜ್ಯದ ಪ್ರಜಾಕೋಟಿ ಅತ್ತಿಮಬ್ಬೆಯ ವಿಚಾರದಲ್ಲಿ ಅತ್ಯಂತ ಪೂಜ್ಯ ಭಾವನೆ ತಳೆಯಲು ಇಂತಹ ಸಂಗತಿಗಳು ಬಾಯ್ದೆರೆಯಲ್ಲಿ ಪಡೆದ ಉತ್ಪ್ರೇಕ್ಷೆಯೂ ಕಾರಣ. ಇವೆಲ್ಲದರ ಪರಿಣಾಮವಾಗಿ ಅತ್ತಿಮಬ್ಬೆ ಜೀವಂತವಾಗಿರುವಾಗಲೇ ದೈವತ್ವದ ನೆಲೆಗೇರಿದ್ದಳು, ಜಾತಿಮತ ವರ್ಣಲಿಂಗ ವಯೋಭೇದಗಳಿಲ್ಲದೆ, ಮಹಾರಾಜ ಮಹಾರಾಣಿಯರಿಂದ ಮೊದಲು ಮಾಡಿ ಸಾಮಾನ್ಯ

ಪ್ರಜೆಗಳವರೆಗೆ, ಎಲ್ಲರ ಮುಂದೆ ಬಾಗಿದುವು. ಇದು ಆಕೆಯ ಪ್ರಖರ ವ್ಯಕ್ತಿತ್ವದ ಪ್ರಭಾವಳಿ, ಅತ್ತಿಮಬ್ಬೆಯಂತಹ ಅಸಾಧಾರಣ ಸ್ತ್ರೀಯೊಬ್ಬಳು ವಾಸ್ತವವಾಗಿ ಜೀವಿಸಿದ್ದಳೆಂಬುದನ್ನು ನಾವಿಂದು ಯೋಚಿಸುವುದೇ ಕಷ್ಟವೆಂಬಂಥ ಔನ್ನತ್ಯದ ವ್ಯಕ್ತಿತ್ವ ಆಕೆಯದಾಗಿತ್ತು.

ಅತ್ತಿಮಬ್ಬೆ ತನ್ನ ಜೀವಿತ ಕಾಲದಲ್ಲಿ ಮಾಡಿದ ಈ ಏಳು ಪವಾಡಗಳನ್ನು ವಿಶಿಷ್ಟವೆನ್ನಲು ಕಾರಣಗಳಿವೆ. ಬುದ್ಧ ಮಹಾವೀರ ಏಸುಕ್ರಿಸ್ತ ಬಸವಣ್ಣ ಮೊದಲಾದ ಮಹಾಪುರುಷರ ಚರಿತ್ರೆಯಲ್ಲಿ ಅವರು ತೋರಿದ ಹಲವು ಮಹಿಮೆ ಗಳನ್ನು ಹೇಳಲಾಗಿದೆ. ಆದರೆ ಒಬ್ಬ ಸ್ತ್ರೀಯ ಜೀವನದಲ್ಲಿ ಸಂಭವಿಸಿದ ಪವಾಡಗಳು ಹೀಗೆ ನಿರೂಪಿತವಾಗಿರುವುದು ಅದ್ವಿತೀಯವಾದುದು. ಈ ಪವಾಡ ಗಳ ಹಿಂದಿರುವ ಧಾರ್ಮಿಕತೆ ವೈಚಾರಿಕತೆ ಉತ್ಪ್ರೇಕ್ಷೆ ವಾಸ್ತವತೆ ಕುರಿತು ಪ್ರತ್ಯೇಕ ಜಿಜ್ಞಾಸೆಯನ್ನು ನಾವು ನಡಸಬಹುದು, ಅದು ಬೇರೆಯ ಮಾತು. ಆದರೆ ಒಬ್ಬ ಮಹಿಳೆಯನ್ನೂ ಆಕೆಯ ಅಸಾಧಾರಣ ಶೃಂಗ ವ್ಯಕ್ತಿತ್ವದ ಮಹಿಮೆಯನ್ನು ಉಳಿದ ಮಹಾ ಪುರುಷರ, ಪವಾಡ ಪುರುಷರ ಸಾಲಿನಲ್ಲಿ ನಿಲ್ಲಿಸಿ ವರ್ಣಿಸಿರುವುದು ಗಮನಿಸ ಬೇಕಾದ ಸಂಗತಿ. ಜಗತ್ತಿನ ಸ್ತ್ರೀಯರ ಚರಿತ್ರೆಯಲ್ಲಿ ಇಂಥ ನಿರೂಪಣೆ ಅತಿ ವಿರಳ.

ಅತ್ತಿಮಬ್ಬೆಯ ಪಾತ್ರ ಸ್ತ್ರೀವಾದ ಸಿದ್ಧಾಂತಗಳಿಗೆ ಸಮೃದ್ಧ ಭಂಡಾರ ವಾಗುವಂಥ ಪಾತ್ರವಾಗಿರುವುದರಿಂದ ಆಕೆಯ ಎಲ್ಲ ಸಾಧನೆಗಳ ಶಿಖರಗಳನ್ನು ವಿವರ ವಾಗಿ ಅರಿಯುವ ಅಗತ್ಯವಿದೆ. ಕರ್ನಾಟಕದಲ್ಲಿ ಮಾತ್ರವಲ್ಲದೆ ಸಮಗ್ರ ಭಾರತದಲ್ಲಿ ಪ್ರಾಚೀನ ಮಹಿಳೆಯ ಮತ್ತು ಮಧ್ಯಕಾಲೀನ ಮಹಿಳೆಯ ಸಾಮಾಜಿಕ ಸ್ಥಾನ ಮಾನಗಳ ವಿಶ್ಲೇಷಣೆಗೆ ತೊಡಗಲು ಅತ್ತಿಮಬ್ಬೆ ಮುಖ್ಯ ಮಾದರಿಯಾಗಿ ಕಾಣುತ್ತಾಳೆ. ಮಹಿಳೆಯ ಪರಿಣತಿ, ಪ್ರತಿಭೆ, ದೃಷ್ಟಿಕೋನ, ಸಾಮರ್ಥ್ಯ, ವೈಚಾರಿಕತೆ, ಅನು ಭಾವಿಯ ನಿಲವು, ನಿಶ್ಶಬ್ದ ಹೋರಾಟ, ಆಧ್ಯಾತ್ಮಿಕ ಜೀವನ, ಲೌಕಿಕ ಜೀವನ ಮೊದಲಾದ ಆಯಾಮಗಳನ್ನು ಆವರಿಸಿದ ತನ್ನ ಜೀವನದ ಮೂಲಕ ಸ್ತ್ರೀಯನ್ನು ಸಮಾಜ ಗಂಭೀರವಾಗಿ ಸ್ವೀಕರಿಸಬೇಕೆಂಬ ಎಚ್ಚರವನ್ನು ತೋರಿಸಿ ಕೊಟ್ಟಾಕೆ ಅತ್ತಿಮಬ್ಬೆ.

ಆಧುನಿಕ ವಿಮರ್ಶೆಯ ಪರಿಭಾಷೆಯಲ್ಲಿ ಮಂಡಿಸುವುದಾದರೆ, ಸ್ತ್ರೀವಾದಕ್ಕೆ ಚೈತನ್ಯ ತುಂಬಿ ಚಾಲನೆ ಕೊಡುವ ಕುತೂಹಲಕರ ಸಂಗತಿಗಳು ಅತ್ತಿಮಬ್ಬೆಯ ಬದುಕಿನಲ್ಲಿ ವಾಸ್ತವವಾಗಿ ಘಟಿಸಿವೆ. ಅತ್ತಿಮಬ್ಬೆಯ ಒಟ್ಟು ಜೀವಿತಕಾಲ ಕ್ರಿ.ಶ. 950 ರಿಂದ 1018. ಸಾವಿರ ವರ್ಷದ ಹಿಂದೆ, ಅಂದಿನ ಪುರುಷ ಪ್ರಧಾನತೆಯ ಸಾಂಸ್ಕೃತಿಕ ಗ್ರಹಿಕೆಗಳಲ್ಲಿ, ಅತ್ತಿಮಬ್ಬೆಗೆ ಆದ್ಯತೆಯ ಅಗ್ರಪಟ್ಟ ಕಟ್ಟಿರುವುದು ವಿಶೇಷ ಗಮನಿಕೆಗೆ ತಕ್ಕ ವಿಷಯ.

ಸ್ತ್ರೀವಾದಿ ಆಲೋಚಕರ ವ್ಯಾಖ್ಯಾನ ವಿಮರ್ಶೆಗಳಿಗೆ ಅತ್ತಿಮಬ್ಬೆಯ ಜೀವನ ಮತ್ತು ಸಾಧನೆ ಪ್ರಧಾನ ವಸ್ತುವಾಗಿ, ಅಧ್ಯಯನ ಯೋಗ್ಯವಾಗಿ ಕಾಣುತ್ತದೆ. ಆಕೆಯ ಬದುಕಿನಲ್ಲಿ ಸ್ತ್ರೀಪುರುಷತ್ವದ ಲಿಂಗ ಭೇದವು ಗೌಣ. ಆಕೆ ಬಾಳಿದ ಕುಟುಂಬವನ್ನು ಹೆಣ್ಣು ಗಂಡೆಂಬ ತಾರತಮ್ಯ ಇಬ್ಭಾಗಿಸದೆ ಒಂದು ಸರಿಸಮಾನ ದೃಷ್ಟಿ ಕ್ರಿಯಾ ಶೀಲವಾಗಿದೆ. ಸ್ತ್ರೀಪುರುಷ ಪ್ರತ್ಯೇಕೀಕರಣದ ಭಿನ್ನತೆಯಾಗಲಿ, ಲಿಂಗ ಭೇದದ ಕೀಳರಿಮೆಯಾಗಲಿ ನಿರ್ಮಾಣವಾಗದ ಸಮಾನತೆಯ ನೆಲೆಯಲ್ಲಿ ಮಹಿಳೆ ಯೊಬ್ಬಳು ಹೀಗೆ ಮಾನ್ಯಳಾದ ದೃಷ್ಟಾಂತಗಳು ಚರಿತ್ರೆಯಲ್ಲಿ ವಿರಳ.

ಕಾವ್ಯ ಪ್ರಪಂಚ, ಪುರಾಣ ಪ್ರಪಂಚ, ಮತ್ತು ಕಥೆ ಕಾದಂಬರಿಗಳ ಸಾಹಿತ್ಯ ಲೋಕದಲ್ಲಿ ಮರ್ಯಾದಿತ ಸ್ಥಾನವನ್ನು ಪ್ರತಿಪಾದಿಸಿ ಸಮುಗದ್ದುಗೆಯಲ್ಲಿ ನಿಲ್ಲಿಸಿದ ಕಾಲ್ಪನಿಕ ವರ್ಣನೆಗಳಿವೆ. ಅವು ಅತಿರಂಜಿತ ಸಾಪೇಕ್ಷ ವರ್ಣನೆಗಳು. ಆದರೆ ವಾಸ್ತವ ಪ್ರಪಂಚದ ಸ್ಥಿತಿಗತಿಗಳು ಹೀಗಿಲ್ಲ, ದೈನಂದಿನ ವ್ಯವಹಾರಗಳಲ್ಲಿ ಸ್ತ್ರೀಯು ಗೌಣಳು, ಅಲಕ್ಷಿತಳು, ವರ್ಜ್ಯಳು, ಪುರುಷನ ಗೃಹೀತ ಸಂರಚನೆಯಲ್ಲಿ ಸ್ತ್ರೀ ನಿರ್ಲಕ್ಷಿತಳು. ಆಕೆಗೆ ಸ್ವಾತಂತ್ರ್ಯಕನಸು. ನಸ್ತ್ರೀ ಸ್ವಾತಂತ್ರ್ಯಮರ್ಹತಿ ಎಂಬ ಮಂತ್ರ ಪಠಣ ಸಮಾಜದ ಉದ್ದಗಲಗಳಲ್ಲಿ ಅನುರಣನ. ಅಪುತ್ರೋ ಗತಿರ್ನಾಸ್ತಿ ಎಂಬ ನಂಬಿಕೆ ಜೀವಂತವಾಗಿದ್ದು, ಹೆಣ್ಣು ಗಂಡುಮಗುವನ್ನು ಹೆರುವ ಮಾನಸಿಕ ಒತ್ತಡಗಳಲ್ಲಿ ನರಳಬೇಕಿತ್ತು. ಪುರುಷ ಪ್ರಾಧಾನ್ಯದ ದಬ್ಬಾಳಿಕೆ ಎಷ್ಟೆಂದರೆ ಮಹಿಳೆ ಪುರುಷನ ಅಂಕೆ ಅಧೀನದಲ್ಲಿರಬೇಕು.

ಕುಟುಂಬ ಪರಿಕಲ್ಪನೆಯಲ್ಲೂ ಗಂಡಸು ಯಜಮಾನ. ಹೆಣ್ಣು ತಾನೇ ತೀರ್ಮಾನ ತೆಗೆದುಕೊಳ್ಳುವಂತಿಲ್ಲ, ಸಂಸಾರದಲ್ಲಿ ಹಣದ ವಹಿವಾಟಿಕೆ ಹೆಣ್ಣು ವಾರಸು ದಾರಳಲ್ಲ. ತನಗೆ ತಿಳಿದಂತೆ ಖರ್ಚು ವೆಚ್ಚ ಮಾಡಲು, ಕೊಳ್ಳಲು ಮಾರಲು ಆಕೆಗೆ ಹಕ್ಕಿಲ್ಲ. ದಾನದತ್ತಿಗಳನ್ನು ಪುರುಷರು ಇಷ್ಟಬಂದಂತೆ ಮಾಡಬಹುದು. ಹೆಣ್ಣು ಮೂಕಪ್ರೇಕ್ಷಕಳೇ ಹೊರತು ಪಾಲುದಾರಳಲ್ಲ. ಕಾಸುಕಾಸಿಗೂ ಆಕೆ ಕೈಚಾಚಬೇಕು. ಮನೆಯವರ ಅಣತಿಯಿರದ ಹೊರತು ಹೊಸ್ತಿಲುದಾಟಲಾಗದು. ಸ್ತ್ರೀ ಮತ್ತು ಸಾರ್ವಜನಿಕ ಸಂಪರ್ಕ ಎಂಬ ಪರಿಕಲ್ಪನೆ ಎರಡು ಧ್ರುವಗಳು! ಗಂಡಸರೊಂದಿಗೆ, ಅದೂ ಸಾರ್ವಜನಿಕವಾಗಿ ಮಾತನಾಡುವುದು ನಿಷಿದ್ಧ, ನಾಟಕದವರೊಂದಿಗೆ ಸಂಗೀತ ಗಾರರೊಂದಿಗೆ ಪರಿಚಯ ಹೊಂದಿರುವುದು ಕೂಡ ಸ್ತ್ರೀಯ ವಿಚಾರವಾಗಿ ಗುಮಾನಿಗೆ ಎಡೆಕೊಡುವ ಸೂಕ್ಷ್ಮ ವಿಚಾರ. ಸೈನಿಕರನ್ನು ನೋಡುವುದೇ ಕಷ್ಟ; ಅವರೊಂದಿಗೆ ಮಾತನಾಡುವುದು ಓಡಾಡುವುದು ಸಾಹಸವೇ ಸರಿ. ಸ್ತ್ರೀ ಹಾಗೇನಾದರೂ ಮಾಡಿ ದರೆ ಆಕೆಯ ಶೀಲ ಶಂಕಿಸುವುದು ಮೊದಲನೆಯ ಪ್ರತಿಕ್ರಿಯೆ. ರಣರಂಗವು ವನಿತೆ ಯರ ಕನಸಿನಲ್ಲಿಯೂ ಬರುವಂತಿಲ್ಲ. ಯುದ್ಧವೆಂಬುದು ಪುರುಷರ ಕ್ಷೇತ್ರ, ಸ್ತ್ರೀಗೆ

ಅದು ನಿಷಿದ್ಧವಲಯ (prohibited area). ಉನ್ನತಸ್ತರದ ಶಿಕ್ಷಣವನ್ನೂ ಸಹ ಸ್ತ್ರೀಗೆ ಅನಗತ್ಯವೆಂಬ ಭಾವನೆ. ಸ್ತ್ರೀಯ ಆಚಾರ ವಿಚಾರಗಳಲ್ಲಿ ಇಂಥ ಪೂರ್ವಗ್ರಹಿಕೆ ಗಳಿಗೆ ಕೊರತೆಯಿಲ್ಲ.

ಮಹಿಳೆಯರ ಪಾಲಿಗೆ ಇತಿಹಾಸದ ಬಾಗಿಲು ಮುಚ್ಚಿರುವುದೇ ಹೆಚ್ಚು. ಸ್ತ್ರೀಯರ ವಂಶಾವಳಿಯನ್ನು ಹೇಳುವುದು ಅಪರೂಪ. ಪುರುಷನಿಗೆ ಇರುವಂತೆ ಸ್ತ್ರೀಗೂ ಒಂದು ಪರಂಪರೆಯಿದೆ ಎಂಬುದನ್ನು ಬಹುತೇಕ ಕಡೆಗಣಿಸಲಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಗತ ಚಿಂತನೆ ಭೂಗತವಾಗಿದೆ. ಸಾಹಿತ್ಯದಲ್ಲೂ ಸ್ತ್ರೀ ಪರವಾದ ನಿರೂಪಣೆಯು ಕಡಮೆ, ಕರ್ನಾಟಕ ಸಂಸ್ಕೃತಿ ಎಂಬುದೂ ಭಾರತೀಯ ಸಂಸ್ಕೃತಿಯ ನೀಲಿನಕಾಶೆ, ಇದರ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣಿಗೆ ಎರಡನೆಯ ಸ್ಥಾನ, ಬಂಜೆಯಾದರಂತೂ ಆಕೆಯ ತಲೆಯಮೇಲೆ ಕಷ್ಟದಹೊರೆ; ಮಕ್ಕಳಾದರೂ ಗಂಡು ಮಗುವನ್ನು ಹಡೆದರೆ ಸಮಾಧಾನ, ಇನ್ನು ಅಕಸ್ಮಾತ್ ಆಕೆ ವಿಧವೆ ಯಾದರಂತೂ ಅಲ್ಲಿಗೆ ಮುಗಿಯಿತು ಆಕೆಯ ಇಹಜೀವನ; ಬಾಳಿನುದ್ದಕ್ಕೂ ದಾರುಣ ಬವಣೆ ತಪ್ಪಿದ್ದಲ್ಲ.

ಗಂಡನಿಲ್ಲದ ದಿನಗಳನ್ನು ದೂಡುವುದು ಯಮಯಾತನೆ. ಅದು ನಿತ್ಯ ನರಕ ಹೊಕ್ಕುಬಂದ ಹಾಗೆ, ಮದುವೆಗೆ ಮುನ್ನ ತಂದೆಯ, ಸೋದರರ ಅಧೀನ. ವಿವಾಹಾ ನಂತರ ಅತ್ತೆಮಾವಂದಿರ, ಮೈದುನ ಭಾವಂದಿರಲ್ಲಿ ಊಳಿಗತನ, ಪತಿಯ ನೆರಳಾಗಿದ್ದು, ಆದರ್ಶಸ್ತ್ರೀಯ ಪಟ್ಟ ಕಟ್ಟಿಸಿಕೊಳ್ಳಲು ಅವಕಾಶ ಯಥೇಚ್ಛ. ಉಸಿರು ಇರುವ ತನಕ ಪುರುಷ ಪರಿಧಿಯ ಬೇಲಿಯೊಳಗೆ ಸುತ್ತಬೇಕು. ಅಹಲ್ಯೆ ತಾರಾ ಮಂಡೋದರಿ ಸೀತೆ ಪಾರ್ವತಿ ದ್ರೌಪದಿ ಅರುಂಧತಿ ಮುಂತಾದ ಪುರಾಣದ ಕಾಲ್ಪನಿಕ ಸ್ತ್ರೀಯರೇ ನಾರಿಯರಿಗೆ ದೃಷ್ಟಾಂತ. ಇದಿಷ್ಟೂ ಸಾವಿರಾರು ವರ್ಷಗಳಿಂದ ಸ್ತ್ರೀಗೆ ಇರುವ ಆದರ್ಶ ಪಾಠಗಳು.

ಈ ನಿರ್ಬಂಧಗಳ ಹಿನ್ನೆಲೆಯಲ್ಲಿ ಅತ್ತಿಮಬ್ಬೆ ಜೀವಿಸಿದ ರೀತಿಯನ್ನಿಟ್ಟು ತೂಗಿ ನೋಡಬೇಕು. ಆಕೆ ಈ ನೆಲದ ಮಣ್ಣಿನ ಮಗಳು. ಚಾರಿತ್ರಿಕವಾಗಿಯೇ ಆಗಿ ಹೋದ ಪಂಚೇಂದ್ರಿಯಗಳಿದ್ದ ವ್ಯಕ್ತಿ. ಪುರಾಣ ಪ್ರಪಂಚದ ಆದರ್ಶೀಕೃತ ಸತಿ ಸಾಧ್ವಿಯರನ್ನು ಮಸುಳಿಸಿದ, ಚರಿತ್ರೆಯಲ್ಲಿ ಹೊಸ ಅಧ್ಯಾಯ ತೆರೆದ ಸಾಹಸಿ, ತನ್ನ ಕಾಲದ ಮತ್ತು ಅನಂತರದ ತಲೆಮಾರಿನ ಸ್ತ್ರೀಯರಿಗೆ ಅತ್ತಿಮಬ್ಬೆಯು ತನ್ನ ತಿಳಿವಳಿಕೆ ನಡೆವಳಿಕೆಗಳಿಂದ ಮೇಲ್ಪಂಕ್ತಿಯಾದಳು. ಇತಿಹಾಸದ ಮತ್ತು ಸ್ತ್ರೀವಾದಿ ಪರಂಪರೆಯ ಧ್ವನಿ ದಾಟಿ ದಿಕ್ಕುಗಳನ್ನು ಬದಲಿಸಿದ ಧೀರೆ ಅತ್ತಿಮಬ್ಬೆ. ಆಕೆ ಪುರುಷರೊಂದಿಗೆ ಪೈಪೋಟಿಗೆ ಇಳಿಯಲಿಲ್ಲ. ಪುರುಷವರ್ಗವನ್ನು ಸ್ತ್ರೀಯರ ಶತ್ರು ಗಳೆಂದು ಪ್ರತಿಪಾದಿಸಲಿಲ್ಲ. ಪುರುಷರು ಸ್ತ್ರೀಯರ ಮಿತ್ರರು, ಸಮಾನರು, ಸಹಾಯಕರು ಎಂಬ ಆರೋಗ್ಯ ಮನೋಧರ್ಮದಿಂದ ವರ್ತಿಸಿದಳು.

ಅತ್ತಿಮಬ್ಬೆಗೆ ವಿದ್ಯಾಭ್ಯಾಸದ ಕೊರತೆಯಾಗಲಿಲ್ಲ. ಸಾರ್ವಜನಿಕ ರಂಗದ ಸಂಪರ್ಕಕ್ಕೆ ತಡೆಗಳಿರಲಿಲ್ಲ. ಅಡುಗೆ ಮನೆಗೆ ಸೀಮಿತಳಾಗಿ ಮನೆಯ ನಾಲ್ಕು ಗೋಡೆಗಳ ನಡುವೆಯೇ ಇರಬೇಕೆಂಬ ಕಟ್ಟುಪಾಡುಗಳು ಇರಲಿಲ್ಲ. ಬಡತನದ ಅಡಚಣೆ ಇರಲಿಲ್ಲವಾದ್ದರಿಂದ ಉಳಿದ ಸ್ವಾತಂತ್ರ್ಯ ಸಾಧ್ಯವಾಯಿತೆಂದು ಅರ್ಥೈಸ ಬಾರದು. ಸಹಸ್ರಾರು ಸಿರಿವಂತ ಕುಟುಂಬಗಳಲ್ಲಿ ಮಹಿಳೆಗೆ ಮಿತಿಗಳ ಸರಪಳಿ ತೊಡಿಸಿರುತ್ತಾರೆ. ಶ್ರೀಮಂತ ಸಂಸಾರಗಳಲ್ಲಿಯೇ ಸ್ತ್ರೀಗೆ ಶೃಂಖಲೆ ಅಧಿಕ. ಹೇರಳ ವಾದ ಸಂಪತ್ತು ಇರುವ ಮನೆಗಳಲ್ಲಿ ಪುರುಷನ ಅಧಿಕಾರದ ಪೈಪೋಟಿ; ಇಡೀ ಆಸ್ತಿಯ ಮೇಲೆ ತನ್ನದೇ ಒಡೆತನವಿರಬೇಕೆಂಬ ಪ್ರತಿಷ್ಠೆ. ಅವಿಭಕ್ತ ಕುಟುಂಬಗಳಲ್ಲಿ ಇನ್ನೂ ಅಪಾಯಗಳಿರುತ್ತವೆ.

ಆದರೆ ಅತ್ತಿಮಬ್ಬೆ ತನ್ನ ಸಮತೋಲನದ ನಡೆ–ನುಡಿಗಳ ಮೂಲಕ ಸಮಕಾಲೀನ ಸಮಾಜವನ್ನೂ ಸಾಮ್ರಾಜ್ಯವನ್ನೂ ಗೆದ್ದಳು. ತನ್ನ ಸ್ವಾಭಿಮಾನವನ್ನು ಉಳಿಸಿ ಕೊಂಡು ಬಾಳಿದಳು. ತನ್ನ ಆತ್ಮ ಪ್ರತ್ಯಯವನ್ನು ಯಾವ ಹಂತದಲ್ಲೂ ಕಳೆದು ಕೊಳ್ಳಲಿಲ್ಲ. ನಾಗರಿಕ ಸ್ತ್ರೀ ಆದೊಡನೆ ತನ್ನತನವನ್ನು (identity) ಕಳೆದುಕೊಳ್ಳುವುದು ಎಂಬುದಲ್ಲ ಎಂದು ತನ್ನ ನಡೆವಳಿಕೆಯಿಂದಲೂ ತೋರಿಸಿಕೊಟ್ಟಳು. ಆಧ್ಯಾತ್ಮಿಕ ಳಾಗಿಯೂ ಲೌಕಿಕಕ್ಕೆ ವಿಮುಖಳಾಗದೆ ಸಮನ್ವಯವನ್ನು ಸಾಧಿಸಿದಳು. ಮಾತೃ ಭಾಷಾಪ್ರೇಮ, ಸಾಹಿತ್ಯಾಸಕ್ತಿ, ಸಾಹಿತ್ಯ ಸಂರಕ್ಷಣೆ, ಪಾಂಡಿತ್ಯ ಪೋಷಣೆ, ರಾಷ್ಟ್ರ ಪ್ರೇಮ, ಧರ್ಮಪರತೆ, ದಾನಗುಣ, ಅನಾಥರಿಗೆ ಆಶ್ರಯ–ಇವು ಆಕೆ ಕಂಡುಕೊಂಡ ವಿಮೋಚನೆಯ ಹೆದ್ದಾರಿ. ಜನಪರವೂ ಜನಮುಖಿಯೂ ಆದ ಪ್ರಗತಿಪರ ಧೋರಣೆ ಯಿಂದ ಅತ್ತಿಮಬ್ಬೆ ಮಿಂಚಿದಳು.

ಸ್ತ್ರೀ ಮತ್ತು ಧರ್ಮ – ಈ ಸಂಬಂಧ ನಿಕಟವಾದದ್ದು. ಎಲ್ಲ ಧರ್ಮಗಳಲ್ಲೂ ಧಾರ್ಮಿಕ ಪ್ರವೃತ್ತಿಯು ಸ್ತ್ರೀಯರಲ್ಲೇ ಅಧಿಕವಾಗಿ ಕಂಡುಬರುತ್ತದೆ. ಅತ್ತಿಮಬ್ಬೆಯೂ ಇದಕ್ಕೆ ಹೊರತಾಗಿಲ್ಲ. ಭೌತಿಕ ಜಗತ್ತು ಮತ್ತು ಅಧ್ಯಾತ್ಮಿಕ ವಲಯ – ಇವೆರಡು ಭೂಮಿಕೆಯಲ್ಲೂ ಆಕೆಯ ಸಾಧನೆಗಳು ಗಣ್ಯವಾಗಿ ಕಾಣುತ್ತವೆ. ಸ್ವಧರ್ಮದಲ್ಲಿ ನಿಷ್ಠೆ, ಪರಧರ್ಮದಲ್ಲಿ ಸಹನೆ – ಇವು ಆಕೆಯ ಮನೋಧರ್ಮ. 1501 ದೇವಾಲಯ ಗಳನ್ನು ಕಟ್ಟಿಸಿದರು. ವ್ರತನೋಂಪಿಗಳನ್ನು ಆಚರಿಸಿದಳು. ಆದರೆ ಆಕೆ ದೇವರು ಧರ್ಮ ದೇವಾಲಯ ಎಂದು ಸದಾ ಗುಡಿಯೊಳಗೇ ಸೇರಿಕೊಳ್ಳಲಿಲ್ಲ. ಲೌಕಿಕ ಹಾಗೂ ಪಾರಮಾರ್ಥಿಕ ಎರಡರ ಸಮನ್ವಯಕ್ಕೆ ಆಕೆ ಅರ್ಪಿತಳಾದಳು. ಅತ್ತಿಮಬ್ಬೆ ಸಮನ್ವಯ ವಾದಿ. ಸ್ವಧರ್ಮ–ಅನ್ಯಧರ್ಮ, ಲೌಕಿಕ–ಆಗಮಿಕ, ಪುರುಷ–ಸ್ತ್ರೀ, ರಾಜಕೀಯ–ಧರ್ಮ, ಯುದ್ಧ–ಶಾಂತಿ–ಇವುಗಳಲ್ಲಿ ಸಮನ್ವಯದ ಸುವರ್ಣ ಮಾಧ್ಯಮವನ್ನು ಪಾಲಿಸಿದಳು. ಲೋಕದ ವಿಚಾರದಲ್ಲಿ ಪುರುಷನ ದೃಷ್ಟಿಕೋನ ಮೌಲ್ಯಗಳಲ್ಲಿ

ಕೆಲವನ್ನು ಸ್ವೀಕರಿಸಿದಳು. ಯುದ್ಧ ಆಯುಧ ಸೈನ್ಯ ಆನೆ ಕುದುರೆ ಸವಾರಿ– ಇವು ಹೆಂಗಸಿನ ಕ್ಷೇತ್ರವಲ್ಲ ಎಂಬ ಸ್ಥಾಪಿತ ಗ್ರಹಿಕೆಯನ್ನು ಪಲ್ಲಟಗೊಳಿಸಿದರು. ಸೈನ್ಯದಲ್ಲಿ, ಸವಾರಿಯಲ್ಲಿ, ದಾನದಲ್ಲಿ, ದೇವಾಲಯ ನಿರ್ಮಾಣದಲ್ಲಿ, ಕಲೆ ಸಾಹಿತ್ಯ ಪೋಷಣೆಯಲ್ಲಿ ಎಲ್ಲೆಲ್ಲೂ ಅತ್ತಿಮಬ್ಬೆಯೇ ರಾರಾಜಿಸಿದಳು.

ಸ್ತ್ರೀ ಸ್ವಭಾವಕ್ಕೆ ಅಡಿಗೆ ಮನೆಯ ಕಾರ್ಯ, ಮಕ್ಕಳ ಪಾಲನೆ ದೇವರ ಭಜನೆ– ಇವು ಹೇಳಿ ಮಾಡಿಸಿದ ಆಯ್ಕೆಯ ಕ್ಷೇತ್ರಗಳೆಂಬ ಸಾಂಪ್ರದಾಯಿಕ ನಡೆವಳಿಕೆಗೆ ಆಕೆ ಅಪವಾದಗಳನ್ನು ತೋರಿಸಿದಳು. ಹೆಣ್ಣು ಸ್ವಾಭಿಮಾನ ಶೂನ್ಯತೆಯ ಮಾಂಸದ ಮುದ್ದೆ ಅಲ್ಲ ಎಂಬುದಕ್ಕೆ ಮತ್ತು ಪುರುಷರ ಮಡಿವಂತಿಕೆ ಇಲ್ಲದಿರುವಿಕೆಗೆ ಅತ್ತಿಮಬ್ಬೆ ನಿದರ್ಶನವಾದಳು. ಚಾಳುಕ್ಯ ಸಾಮ್ರಾಜ್ಯದ ಚರಿತ್ರೆಯ ಗತಿಯಲ್ಲಿ ಸ್ತ್ರೀಯ ಪಾತ್ರಕ್ಕೆ ಎಷ್ಟು ಪ್ರಾಮುಖ್ಯವಿದೆ ಎಂಬುದನ್ನು ತಿಳಿಸಿಕೊಟ್ಟಳು. ಲಿಂಗ ಆಧಾರಿತ ಕಾರ್ಯ ವಿಭಜನೆ ಯಲ್ಲಿ, ಅಧಿಕಾರ ನಿಯೋಜನೆಯಲ್ಲಿ ಅರ್ಥವಿಲ್ಲವೆಂಬುದಕ್ಕೆ ಆಕೆ ದೃಷ್ಟಾಂತವಾದಳು. ಸಾಕ್ಷಾತ್ ಸಾಮ್ರಾಟನೇ ಆಕೆಯ ಸಹಾಯವನ್ನು ಯಾಚಿಸಿದನು. ಚಕ್ರವರ್ತಿಗಳು ಆಕೆಯಮೇಲೆ ಪ್ರಶಸ್ತಿಗಳ ಮಳೆಗರೆದರು. ಇಷ್ಟಾಗಿಯೂ ಅಧಿಕಾರ ಮತ್ತು ಇತರ ಯಜಮಾನ್ಯ (ಹೆಜಿಮೊನಿ) ಗಳಿಗೆ ಒಲಿಯಲಿಲ್ಲ. ಸಮಾಜೋ–ರಾಜಕೀಯ ಆಯಾಮ ಆಕೆಯ ಜೀವನ ಸಾಧನೆಯಲ್ಲಿ ಪ್ರಧಾನವಾದ ಅಂಶ. ಆಕೆಯ ಸಾಮಾಜಿಕ ಕಾಳಜಿ ಗಳಲ್ಲಿ ಸಂಘರ್ಷಕ್ಕೆ ಇಳಿಯುವ ಧೋರಣೆಯಿಲ್ಲ. ಆಕೆಯದು ಸ್ವಂತಿಕೆಯನ್ನು ಬಿಟ್ಟು ಕೊಡದೆ ಸಮನ್ವಯವನ್ನು ಸಾಧಿಸುವ ದಾರಿ. ಸ್ತ್ರೀ ಮತ್ತು ಶಿಕ್ಷಣ ದೃಷ್ಟಿಯಿಂದಲೂ ಅತ್ತಿಮಬ್ಬೆ ಆದರ್ಶಪ್ರಾಯಳಾಗಿದ್ದಾಳೆ. ಆಕೆಯ ಸಾಂಸ್ಕೃತಿಕ ಅಭಿರುಚಿಗಳಲ್ಲಿ ಪಕ್ವತೆ ಕಾಣುತ್ತದೆ. ಕಲೆ, ವಾಸ್ತು, ಶಿಲ್ಪ, ಸಂಗೀತ, ನಾಟ್ಯ, ನಟನೆ, ಕಥನಕಾರಿಕೆ, ವಾದನ ಗಾಯನ–ಎಲ್ಲದಕ್ಕೂ, ಎಲ್ಲರಿಗೂ ಸಮನಾದ ಪ್ರೋತ್ಸಾಹ ಧನಸಹಾಯದಿಂದ ಆಕೆ ಬಹುದೊಡ್ಡ ಕಲಾಪೋಷಕಿ. ಸಾಹಿತ್ಯ ಸಂರಕ್ಷಕಿಯಾಗಿ ಅತ್ತಿಮಬ್ಬೆ ಮಾತೃಭಾಷೆಯ ಆಯ್ಕೆಯನ್ನು ಪ್ರತಿಪಾದಿಸಿದಳು. ಮಾತೃಭಾಷೆಯ ಅಭಿಮಾನದ ಜತೆಗೆ ಓದುವ ವರ್ಗವನ್ನೂ ಬೆಳಸಿದಳು, ಓದುವ ಸಾಮಗ್ರಿಯನ್ನು ಉಚಿತವಾಗಿ ಒದಗಿಸಿದಳು. ದಿಕ್ಕಿಲ್ಲದ, ತುತ್ತು ಕೂಳಿಲ್ಲದ ಅಸ್ಥಿರಹಿತರಿಗೆ ಅನ್ನ ಆಸರೆ ಅಭಯವಿತ್ತಳು : ಅನಾಥರ ಮೇಲೆ ಅನುಕಂಪವನ್ನು ವರ್ಷಿಸಿದಳು.

ಅತ್ತಿಮಬ್ಬೆಯ ಸಾಧನೆಗಳು ಹಲವು ಮತ್ತು ಎಲ್ಲವೂ ದೊಡ್ಡವು. ಆಕೆಗೆ ಧಾರ್ಮಿಕ–ಲೌಕಿಕ ಎರಡೂ ಶಿಕ್ಷಣದೊಂದಿಗೆ ಸಾಹಿತ್ಯಕ-ಸೈನಿಕ ಶಿಕ್ಷಣ ತರಬೇತು ಆಗಿತ್ತೆಂದು ಮೇಲೆ ಆಗಲೇ ವಿವರಿಸಿದೆ. ಅವರ ಮನೆತನದ ನಾಲ್ಕು ತಲೆಮಾರಿನ ಚರಿತ್ರೆಯಲ್ಲಿ ಸ್ತ್ರೀಗೆ ಸಮಾನ ಶಿಕ್ಷಣ, ಅಧಿಕಾರ, ವ್ಯವಹಾರ ಸ್ವಾತಂತ್ರ್ಯಗಳಿದ್ದು ವೆಂಬುದೂ ಗಮನಾರ್ಹ. ಸಾಮಾನ್ಯವಾಗಿ ಆರ್ಥಿಕ ಸಂರಚನೆಯಲ್ಲಿ, ಸ್ತ್ರೀಯ ಸ್ಥಾನ ನಿರ್ದೇಶನ ಗೌಣ ನೆಲೆಯದು. ಆದರೆ ಅತ್ತಿಮಬ್ಬೆಯು ಈ ವಿಚಾರದಲ್ಲಿ ಗಣ್ಯಸ್ಥಾನ

ಹೊಂದಿದ್ದಳು. ಸಾಂಪ್ರದಾಯಿಕ ಭಾರತೀಯ ಸಮಾಜದಲ್ಲಿ ಸ್ತ್ರೀಯ ಸ್ಥಾನಮಾನದ ರಾಚನಿಕ ಅಧ್ಯಯನವನ್ನು ಕೈಗೊಳ್ಳಲು ಅತ್ತಿಮಬ್ಬೆಯು ಒಳ್ಳೆಯ ಆಕರ ಹಾಗೂ ಪ್ರಮಾಣವಾಗಿ ಗಮನ ಸೆಳೆದಿರುವುದು ಯಾಕೆಂಬುದಕ್ಕೆ ಇದುವರೆಗಿನ ವಿವರಣೆ ಸಮರ್ಥನೆ ಒದಗಿಸಿದೆ. ಆಕೆಯ ಕುಟುಂಬದ ನಾಲ್ಕು ತಲೆಮಾರಿನ ಮಾಹಿತಿಗಳು ಸಿಗುವುದರಿಂದ ಒಂದು ಸಂಸಾರದ ನೂರು ವರ್ಷಗಳ ಚರಿತ್ರೆ ಲಭ್ಯವಾಗಿದೆ. ಈ ಮನೆತನದ ಅಧ್ಯಯನದಿಂದ ಅತ್ತಿಮಬ್ಬೆಯ ಕುಟುಂಬದಲ್ಲಿ ಉದ್ದಕ್ಕೂ ಪುರುಷ ಅಥವಾ ಪಿತೃ ಪ್ರಧಾನ ವ್ಯವಸ್ಥೆಯ ಸಂಸಾರವೆನಿಸುವುದಿಲ್ಲ. ಪರಸ್ಪರ ಅರಿವು ಮತ್ತು ಗೌರವ ಸಮಾನವಾಗಿ ಇದ್ದುದು ಕಾಣುತ್ತದೆ.

ಅತ್ತಿಮಬ್ಬೆಯ ಹಾಗೆ ಒಬ್ಬ ಸ್ತ್ರೀ, ಶ್ರೇಷ್ಠರಾದ ಪುರುಷ ಕವಿಗಳಿಗೆ ಆಶ್ರಯ ಕೊಟ್ಟು, ಮಹತ್ವದ ಸಾಹಿತ್ಯ ಕೃತಿಗಳನ್ನು ಬರೆಸಿದ್ದು ಸಾಹಿತ್ಯ ಚರಿತ್ರೆಯಲ್ಲಿಯೇ ವಿರಳ. 1501 ದೇವಸ್ಥಾನಗಳನ್ನು ಕಟ್ಟಿಸಿ ಸಹಸ್ರಾರು ಜನ ಶಿಲ್ಪಿಗಳಿಗೆ ಬಡಗಿ ಒಡ್ಡರಿಗೆ ಕೈತುಂಬ ಕೆಲಸ, ಹೊಟ್ಟೆ ತುಂಬ ಅನ್ನ, ಮೈ ತುಂಬ ಬಟ್ಟೆ ಸಿಗುವ ಹಾಗೆ ಉದ್ಯೋಗದ ಹೆಬ್ಬಾಗಿಲು ತೆರೆದ ದಾನ ಚಿಂತಾಮಣಿ ಅತ್ತಿಮಬ್ಬೆ ಒಬ್ಬ ಸುಧಾರಣಾ ವಾದಿಯಾಗಿಯೂ ಅನ್ಯಾದೃಶಳು. ಇಂಥ ಪ್ರಗತಿಪರವಾದ ಜನಪರ ಚಿಂತನೆ ಮತ್ತು ಕಾರ್ಯಕ್ರಮಗಳ ಮೂಲಕ ಆಕೆ ಮಹಿಳೆಯ ದೃಷ್ಟಿಕೋನವೊಂದನ್ನು ಸ್ಥಾಪಿಸಿದಳು. ಲಿಂಗಾಧಾರಿತ ಜೀವ ಪ್ರಭೇದವನ್ನು ಇಕ್ಕಿ ಮೆಟ್ಟಿ ನಿಂತ ನಿಲವು ಆಕೆಯದು. ಜೈವಿಕ ವಾಸ್ತವವಾಗಿರುವ ಸ್ತ್ರೀ ಪುರುಷ ಪ್ರತ್ಯೇಕೀಕರಣವನ್ನು ಕೊರತೆಯೆಂದೆಣಿಸದೆ, ಪುರುಷ ಸಮಾಜದಲ್ಲಿ ತನ್ನನ್ನು ಸಂಘಟಿಸಿಕೊಂಡಳು. ಸಾಂಸ್ಕೃತಿಕವಾಗಿ ಬೆಳೆಯುತ್ತ ಹೋದಳು. ಅಂದಿನ ಆಳುವ ವರ್ಗದ ರಾಜಸತ್ತೆಯೂ ಅತ್ತಿಮಬ್ಬೆಯನ್ನು ಅಪಾರವಾಗಿ ಗೌರವಿಸಿದ್ದು ಉಚಿತ ಉಪಕ್ರಮ. ಚಾಳುಕ್ಯ ಚಕ್ರವರ್ತಿಗಳು ಸ್ತ್ರೀವಾದ ಪುರಸ್ಕರ್ತರು. ಇವೆಲ್ಲವನ್ನೂ ಪ್ರತ್ಯಕ್ಷ ದರ್ಶಿಯಾಗಿ ಕಂಡು ಕಾವ್ಯಬಂಧದಲ್ಲಿ ದಾಖಲು ಮಾಡಿದ ಪ್ರಪ್ರಥಮ ಮೌಲಿಕ ಸ್ತ್ರೀವಾದಿ ಲೇಖಕ ಮತ್ತು ವಿಮರ್ಶಕ; ಈ ಅಂಶವನ್ನು ಮತ್ತೆ ಚರ್ಚಿಸಲಾಗುವುದು.

ಅತ್ತಿಮಬ್ಬೆಯ ಎರಡೂ ಕಡೆಯ ಕುಟುಂಬಗಳವರು ಶ್ಲಾಘ್ಯರು. ಅವರು ತಮ್ಮ ಸ್ತ್ರೀಯರನ್ನು ಯೋಗ್ಯವಾಗಿ ನಡೆಸಿಕೊಂಡರು. ತಮ್ಮಂತೆಯೇ ಮಹಿಳೆಯರಿಗೂ ವಿದ್ಯಾಭ್ಯಾಸ ನೀಡಿದರು. ಆಚಾರ ವ್ಯವಹಾರದಲ್ಲಿ ಸ್ತ್ರೀಗೂ ಸಮಾನ ಹಕ್ಕು ಕೊಟ್ಟರು. ತಮಗಿರುವ ಎಲ್ಲ ಸ್ವಾತಂತ್ರ್ಯ ಮತ್ತು ಅವಕಾಶ ಅಧಿಕಾರಗಳನ್ನು ಆಕೆಗೂ ಇತ್ತರು. ಹೆಣ್ಣಿನ ಆಯ್ಕೆ ಮತ್ತು ತೀರ್ಮಾನಗಳಿಗೆ ತಲೆ ಹಾಕಲಿಲ್ಲ, ತಡೆ ಒಡ್ಡಲಿಲ್ಲ. ವಿಧವೆ ಎಂದು ಹೀಯಾಳಿಸಲಿಲ್ಲ. ಮೂಲೆಗೆ ತಳ್ಳಲಿಲ್ಲ. ವಿಧವೆ ಯಾದ್ದರಿಂದ ಅತ್ತಿಮಬ್ಬೆ ಮುದುಡಿಕೊಂಡು, ಗಂಡಸರ ನೆರಳಿಗೆ ಹೆದರಿ ಬಾಳ ಬೇಕೆಂದು ಕಟ್ಟಪ್ಪಣೆ ಮಾಡಲಿಲ್ಲ. ಸಾಮಾಜಿಕ ಧಾರ್ಮಿಕ ರಾಜಕೀಯ ಸಾಂಸ್ಕೃತಿಕ

ಚಟುವಟಿಕೆಗಳಲ್ಲಿ ಮುಕ್ತವಾಗಿ ಭಾಗವಹಿಸಲು ಅನುವು ಮಾಡಿದರು, ಉತ್ತೇಜಿಸಿದರು. ಫಲವಾಗಿ ಅತ್ತಿಮಬ್ಬೆಗೆ ಉಸಿರು ಕಟ್ಟಿಸುವ ಆರ್ಥಿಕ ಪಾರತಂತ್ರ್ಯ ಪ್ರಾಪ್ತವಾಗಲಿಲ್ಲ. ಆಶ್ರಿತ ಸ್ಥಿತಿ ತಪ್ಪಿ ಸ್ವಾಯತ್ತ ನಿರಾಳ ಸ್ಥಿತಿಯಲ್ಲಿ ಬಾಳುವುದು ಸಾಧ್ಯವಾಯಿತು.

ಅತ್ತಿಮಬ್ಬೆಗೆ ಸೋದರ ವಾತ್ಸಲ್ಯವಿತ್ತು. ತೌರಿನ ಬಾಂಧವ್ಯವಿತ್ತು. ಗಂಡನ ಮನೆಯ ಪ್ರೀತಿಯ ವಾತಾವರಣವಿತ್ತು. ಮಗನ ಮಾತೃಭಕ್ತಿಯಿತ್ತು. ಅಣ್ಣಿಗ ದೇವನೂ ತನ್ನ ತಂದೆ ಸತ್ತ ಮೇಲೆ ಅಪ್ಪನ ಆಸ್ತಿಯ ಅಧಿಕಾರದ ದಾಸನಾಗಲಿಲ್ಲ. ತನ್ನ ತಾಯಿಯ ಬೇಕು ಬೇಡಗಳನ್ನು ನಿಯಂತ್ರಿಸಲು ಹೋಗಲಿಲ್ಲ. ಇಡೀ ಬೆಟ್ಟದಷ್ಟು ಆಸ್ತಿಯನ್ನು ದಾನಧರ್ಮಗಳಿಗೆ ವಿಧವೆಯಾದ ತನ್ನ ತಾಯಿ ವಿನಿಯೋಗಿಸಿದ್ದಕ್ಕೆ ಪ್ರತಿಭಟಿಸಲಿಲ್ಲ. ತಾಯಿಯ ತೀರ್ಮಾನಗಳನ್ನು ಬೆಂಬಲಿಸಿದನು, ಗೌರವಿಸಿದನು.

ಪ್ರಾಚೀನ ಕಾಲಕ್ಕಿಂತ ಹೆಚ್ಚಾಗಿ ಅತ್ತಿಮಬ್ಬೆ ಇದ್ದ ಮಧ್ಯಯುಗದ ಸಮಾಜದಲ್ಲಿ ಸತಿ ಪದ್ಧತಿ ಪ್ರಚಲಿತವಾಗಿತ್ತು. ಬ್ರಾಹ್ಮಣರಲ್ಲೂ ಅಬ್ರಾಹ್ಮಣರಲ್ಲೂ ಭಾರತದ ಎಲ್ಲ ರಾಜ್ಯಗಳಲ್ಲೂ ಇದು ರೂಢಿಯಲ್ಲಿತ್ತು. ಸ್ಮೃತಿಕಾರರಾದ ಮನು ಯಾಜ್ಞ್ಯವಲ್ಕ್ಯರು ಸಹಗಮನಕ್ಕೆ ಅನುಮತಿಸಿಲ್ಲ. ಬಾಣಕವಿಯೂ, ತನ್ನ ಕಾದಂಬರಿ ಕಾವ್ಯದ ಒಂದು ಸಂದರ್ಭದಲ್ಲಿ, ಸತಿಪದ್ಧತಿಯನ್ನು ತಿರಸ್ಕರಿಸಿ, ಮಹಾಶ್ವೇತೆಯು ಸತಿ ಹೋಗಲೂ, ಚಿತೆ ಹತ್ತಲೂ ಪ್ರಯತ್ನಿಸಿದ್ದನ್ನು ತಪ್ಪಿಸಿದ್ದಾನೆ. ಸತಿ ಹೋದವರು ಮಹಾಸತಿಯರೆನಿಸಿ, ಗ್ರಾಮದೇವತೆಗಳೆನಿಸಿ ಪೂಜೆಗೊಳ್ಳುತ್ತ ಜನಪದ ಸಾಹಿತ್ಯದಲ್ಲಿ ಸೇರಿಹೋಗಿದ್ದಾರೆ. ಕರ್ನಾಟಕದಲ್ಲಿ ಮಾರಮ್ಮ, ಆಂಧ್ರದಲ್ಲಿ ನಾರಾಯಣಮ್ಮ ನಲರಾಜಮ್ಮರ ಅಗ್ನಿ ಪ್ರವೇಶವು ಜನಪದ ಸಾಹಿತ್ಯದಲ್ಲಿ ವೈಭವೀಕರಿಸಲ್ಪಟ್ಟಿದೆ. ಯುದ್ಧದಲ್ಲಿ ಹತರಾದ ಯೋಧರ ಪತ್ನಿಯರು ಸತಿ ಹೋದದ್ದುಂಟು. ರಾಜರ ಮರಣಗಳಿಂದಾಗಿ ರಾಣಿಯರ ಸಹಗಮನ ಚರಿತ್ರೆಯಲ್ಲಿ ದಾಖಲಾಗಿದೆ. ಸತಿ ಹೋಗಲು, ವಿಧವೆಯಾದ ಸ್ತ್ರೀಯನ್ನು, ಬ್ರಾಹ್ಮಣರು ಪುಸಲಾಯಿಸುತ್ತಿದ್ದರು. ಸತಿ ಆಚರಿಸುವ ಸ್ತ್ರೀಯು ಅಡಿಯಿಂದ ಮುಡಿಯವರೆಗೆ ಎಲ್ಲ ಆಭರಣಗಳನ್ನು ತೊಟ್ಟು ಚಿತೆಗೆ ಬೀಳುತ್ತಿದ್ದಳು, ಅನಂತರ ಆ ಆಭರಣಗಳೆಲ್ಲ ಬ್ರಾಹ್ಮಣರಿಗೆ ಸೇರುತ್ತಿತ್ತು: "At first the poor girl, herself goaded on by the Brahmin priests, was prepared to undergo this act, but when flames actually reached her, she struggled to get up and escape from the torture" [V. Lalitha, Sati in the Deccan, 'Proceedings of the Indian History Congress.' 51st Session Calcutta, 1990-91, p. 510]. ಚಿತೆಯಿಂದ ಎದ್ದು ಬರಲು ಬ್ರಾಹ್ಮಣರು ಆಕೆಗೆ ಅವಕಾಶ ಕೊಡುತ್ತಿರಲಿಲ್ಲ. ಬಿದಿರುಗಳ ಹಿಡಿದು ಆಕೆಯನ್ನು ಚಿತೆಯೊಳಕ್ಕೆ ದೂಡುತ್ತಿದ್ದರು. ಸತಿ ಹೋಗುವುದು ವೇದ ವೇದಾಂಗಗಳಂತೆ ಗಂಗೆಯಂತೆ ಪವಿತ್ರವೆಂದು ಪುಸಲಾಯಿಸುತ್ತಿದ್ದರು.

ಅತ್ತಿಮಬ್ಬೆಯೂ, ಗಂಡ ಸತ್ತ ಮೇಲೆ ಮುಂದೇನು ಎಂಬ ನಿರ್ಣಾಯಕ ಚಾರಿತ್ರಿಕ ಕ್ಷಣಗಳಲ್ಲಿ, ತನ್ನ ಪ್ರಗತಿ ಪಥದ ಹೆಜ್ಜೆ ದಿಕ್ಕುಗಳನ್ನು ನಿರ್ಧರಿಸಿದ ರೀತಿ ಸಹ ವಿಶಿಷ್ಟವಾದದ್ದು; ಗೋಳುಗರೆಯುತ್ತಾ ಬಾಳನ್ನು ಕಣ್ಣೀರಲ್ಲಿ ತೋಯಿಸುವ ಉನ್ಮಾದಗಳಿಲ್ಲದ ಇಂಥ ಒಂದು ಹದ ಮಾಗಿದ ಆ ಪಕ್ವ ಚೇತನಕ್ಕೆ ಸಹಜವಾದದ್ದು. ಆಕೆ ಸತಿ ಪದ್ಧತಿಗೆ ವಿದಾಯ ಹೇಳಿದಳು. ಸಾವಿಗೆ ಬೆನ್ನು ತೋರಿಸಿದಳು. ಬದುಕಿಗೆ ಮುಖ ಮಾಡಿದಳು. ಅತಿಭಾವುಕ ಗೀಳುಗಳಿಂದ ತನ್ನನ್ನು ಬಿಡಿಸಿಕೊಂಡಳು. ಸನ್ನಿಗಳಿಲ್ಲದ ಸಮತೋಲನದ ಚಿತ್ತಸ್ವಾಸ್ಥ್ಯದಿಂದ ಹೀಗೆ ಕ್ರಿಯಾಶೀಲವಾದದ್ದು ಆಕೆಯ ಆತ್ಮಸ್ಥೈರ್ಯದ ಕುರುಹು, ಬಾಳುವ ಛಲ, ಪರಂಪರೆಯ ಸ್ತ್ರೀ ವಿರೋಧಿ ಆಚರಣೆಯನ್ನು ನಿರಾಕರಿಸಿ ಅತ್ತಿಮಬ್ಬೆ ಚರಿತ್ರಾರ್ಹಳಾದಳು. ಇದು ದುಷ್ಟ ಪದ್ಧತಿಗೆ ಅತ್ತಿಮಬ್ಬೆ ತೋರಿದ ಗಂಭೀರ ಕ್ರಾಂತಿಕಾರಿ ಮೌನ ಪ್ರತಿಭಟನೆ, ಸಾಮಾಜಿಕ ಕರ್ಮಠತೆಯ ನಿರಾಕರಣೆ.

ಛಿದ್ರಕಾರಿ ಬಿಕ್ಕಟ್ಟುಗಳಿಗೆ ಮುಖಾಮುಖಿಯಾದಾಗ ಅತ್ತಿಮಬ್ಬೆ ಕುಸಿಯಲಿಲ್ಲ. ತನ್ನ ಗಂಡನನ್ನು ಶತ್ರುಗಳು ಕೊಲೆಮಾಡಿದರೆಂದು ಚಿತ್ತೋದ್ರೇಕದಿಂದ ಮತಿಭ್ರಮಣೆಗೊಳ್ಳಲಿಲ್ಲ. 'ನಮ್ಮ ಚಿಕ್ಕಪ್ಪ ಪುನ್ನಮಯ್ಯನನ್ನು ಕೊಂದರು, ನನ್ನ ಪತಿಯನ್ನು ಕೊಂದರು, ರಾಕ್ಷಸರು ಚಂಡಾಲರು'–ಎಂದು ಚಿತ್ತಕ್ಷೋಭೆಯ ಸುಳಿಯಲ್ಲಿ ಬಡಬಡಿಸುತ್ತಾ ಕೂಡಲಿಲ್ಲ. ಅತ್ತಿಮಬ್ಬೆಗೆ ದುಃಖ ಇದೆ. ಬೆಚ್ಚನೆಯ ಭಾವನೆಗಳಿವೆ. ಆದರೆ ಹಾಗೆಂದು ಅತಿಭಾವುಕತೆಯ ಗಾಣಕ್ಕೆ ತನ್ನ ಬುದ್ಧಿ ಭಾವಗಳನ್ನು ಒಪ್ಪಿಸಲಿಲ್ಲ. ಆಕೆ ವಾಸ್ತವವಾದಿ, ಸ್ಥಿತಪ್ರಜ್ಞೆ, ವೈಚಾರಿಕ ಮೊನಚಿ, ಹೆಂಡತಿಯನ್ನು ಕಳೆದುಕೊಂಡು ಒಬ್ಬ ಸುಸಂಸ್ಕೃತ ಧೀಮಂತ ಹೇಗೆ ಬಾಳಬಹುದೊ ಹಾಗೆ, ಗಂಡನನ್ನು ಕಳೆದುಕೊಂಡ ಅತ್ತಿಮಬ್ಬೆ ಬಾಳಿದ್ದಾಳೆ.

ಹೆಣ್ಣು ಚಂಚಲೆ, ವಿಧವೆಯು ಮೂರ್ತಿವೆತ್ತ ಅಪಶಕುನ ಎಂಬಿತ್ಯಾದಿ ಪೂರ್ವಗ್ರಹ ಪೀಡಿತರಿಗೆ ಅತ್ತಿಮಬ್ಬೆ ದಿಗ್ಭ್ರಮೆ ಹುಟ್ಟಿಸಿದಳು, ವೈಧವ್ಯವು ವಿಧಿಕೊಟ್ಟ ಶಾಪವೆಂಬ ಕೀಳರಿಮೆಯಿಂದ ಪಾರಾಗಿ, ಆತ್ಮ ಸ್ಥೈರ್ಯದಿಂದ, ವಿಶ್ವಾಸದಿಂದ ಬದುಕನ್ನು ಸ್ವೀಕರಿಸಿದಳು. ಮಾನಸಿಕವಾಗಿ ಗಟ್ಟಿಯಾದ ಮೇಲೆ ಉಳಿದ ಸವಾಲುಗಳನ್ನು ಎದುರಿಸಲು ಧೃತಿ ಬರುತ್ತವೆ. ಸ್ತ್ರೀವಾದದ ಮಾನದಂಡದಿಂದ ಅಳೆದಾಗ, ಯಾವನಿಟ್ಟಿನಿಂದ ನೋಡಿದರೂ, ಅತ್ತಿಮಬ್ಬೆಯ ಕ್ರಿಯಾಮಾದರಿಯಲ್ಲಿ ಸ್ತ್ರೀವಾದ ಸಂಬಂಧಿವಾಗ್ವಾದಗಳಿಗೆ, ಚಾರಿತ್ರಿಕ ಹಾಗೂ ಪ್ರತ್ಯಕ್ಷ ಆಧಾರಗಳಿವೆ ; ಇಂದಿಗೂ ಪ್ರಸ್ತುತವೆನಿಸುವ ನಾಯಕತ್ವದ ಮಾದರಿಗಳಿವೆ. ಮನೆಯ ನಾಲ್ಕು ಗೋಡೆಗಳ ನಡುವೆ ನಿರ್ಬಂಧಿತ ಜೀವನವನ್ನು ನಡೆಸಬೇಕೆಂಬ ವಿನಾಶಕಾರಿ ಮೌಲ್ಯವನ್ನು ಆಕೆ ಆರಾಧಿಸಲಿಲ್ಲ, ಧಿಕ್ಕರಿಸಿದಳು. ಸಾಮಾಜಿಕ ಘಟಕವಾದ ಕುಟುಂಬ ಎಂಬ ಸಂಸ್ಥೆಯೊಳಗೆ ಗೌಣನೆಲೆಗೆ ಸರಿದು ಕರಗಿಹೋಗಲಿಲ್ಲ. ಅಂತರಿಕ ಬಲದೊಂದಿಗೆ ತನ್ನ

ವಿಚಾರದಲ್ಲಿ ತಳೆದ ಅಚಲ ವಿಶ್ವಾಸ (Self-Confidence) ಆಕೆಗೊಂದು ಧೀಮಂತ ವ್ಯಕ್ತಿತ್ವವನ್ನು ತಂದುಕೊಟ್ಟಿತು. ಯಾವ ಅಬ್ಬರ ಆಡಂಬರಗಳಿಲ್ಲದ ಸರಳ ನಿರಾಡಂಬರ ಮೌನಕ್ರಾಂತಿ ಎಸಗಿದ ಸಾಂಸ್ಕೃತಿಕ ನಾಯಕಿ ಅತ್ತಿಮಬ್ಬೆ. ಅಂತರ್ಮುಖತೆ ಇದ್ದೂ ಸಹ ಸಂಪೂರ್ಣ ಲೋಕ ವಿಮುಖತೆ ತೋರದೆ ಲೋಕೋಪಯೋಗಿ ಚಟುವಟಿಕೆಗಳಿಗೆ ಸ್ಪಂದಿಸಿ ತನ್ನ ವ್ಯಕ್ತಿತ್ವಕ್ಕೆ ಇರುವ ಬಹು ಮುಖತೆಯನ್ನು ಪ್ರಕಟಿಸಿದ್ದಾಳೆ ಕನ್ನಡ ಸಾಹಿತ್ಯ ಪರಂಪರೆಯನ್ನೂ, ಶಿಷ್ಟ ಕಾವ್ಯ ಪದ್ಧತಿಯನ್ನೂ, ಜೈನ ಧಾರ್ಮಿಕ ತಾತ್ವಿಕ ನಿಲವುಗಳನ್ನೂ ಮೀರಿ ನಿಂತು, ಸ್ತ್ರೀಪರವಾದ ಮಾನವೀಯ ನೆಲೆಯಲ್ಲಿ ಅತ್ತಿಮಬ್ಬೆಯ ಪಾತ್ರವನ್ನು ಚಿತ್ರಿಸಿ ರನ್ನ ಕವಿ ಹೊಸ ಹಾದಿಯನ್ನು ತುಳಿದಿದ್ದಾನೆ.

ಒಬ್ಬ ಧೀಮಂತ ಪ್ರತಿಭಾಶಾಲಿ ಸ್ತ್ರೀಯ ಅನುಭವ ಲೋಕವನ್ನು ಹೀಗೆ ವಿಸ್ತಾರವಾದ ಭಿತ್ತಿಯಲ್ಲಿ ಸಮರ್ಥವಾಗಿ ಹಿಡಿದಿಟ್ಟಿರುವ ರನ್ನಕವಿಯ ಪ್ರಯತ್ನ ಪರಿಭಾವನಾರ್ಹವಾಗಿದೆ. ಅತ್ತಿಮಬ್ಬೆಯ ಜೀವನ, ಸಾಧನೆ, ಬೌದ್ಧಿಕ ಎತ್ತರ ಮತ್ತು ಅನುಭವದ ವ್ಯಾಖ್ಯಾನ ಮಾಡಿರುವುದು ಸಾವಿರ ವರ್ಷವಾದ ಮೇಲೂ ಅನನ್ಯವಾಗಿಯೇ ಉಳಿದಿದೆ. ಅನುಕರಣೀಯ ಯೋಗ್ಯವಾಗಿ ಮುಂದುವರಿದಿದೆ. ಅತ್ತಿಮಬ್ಬೆಯ ಕಥನದಲ್ಲಿ ರನ್ನನು ಒಡಮೂಡಿಸಿರುವ ಆಕೆಯ ಸ್ತ್ರೀತ್ವದ ನಿರ್ಮಾಣದ ಆಯಾಮಗಳು ಯಾವುವೆಂಬುದನ್ನು ಮನಗಾಣಬೇಕು. ಕೇವಲ ನಖಶಿಖಮುಖಾದಿ ಅಂಗಾಂಗಗಳ ವಿನ್ಯಾಸ, ಮೈಮಾಟಗಳ ವಿನ್ಯಾಸ, ಮೈಮಾಟಗಳ ವೈಭವೀಕೃತ ವರ್ಣನೆಗೆ ಹೆಣ್ಣನ್ನು ತರುವ ಚಾಳಿಗೀಳು ತುಂಬಿ ತುಳುಕುವ ಸಾಹಿತ್ಯ ಪರಂಪರೆಯ ಪರಿಸರದಲ್ಲಿ ಇದ್ದವನು ರನ್ನ. ಆದರೆ ರನ್ನನು ಅಂಥ ಸಮೆದ ಜಾಡಿನಿಂದ ಸಿಡಿದಿದ್ದಾನೆ. ರನ್ನನದು ಸ್ತ್ರೀಯನ್ನು ರೊಮ್ಯಾಂಟಿಕ್ ಆಗಿ ನೋಡುವ ಸವಕಳಿ ಪ್ರತಿಭೆಯಲ್ಲ. ವಾಸ್ತವದ ವೇದಿಕೆಯ ಮೇಲೆ ನಿಂತ, ಅತ್ತಿಮಬ್ಬೆಯ ದೇಹ ವಿವರಗಳಿಗೆ ತೊಡಗದೆ, ಆಕೆಯ ಗುಣ-ಮಹತ್ ಸಾಧನೆಗಳನ್ನು ಅದ್ಭುತವಾಗಿ ಮಂಡಿಸಿದ್ದಾನೆ. ಸಮಕಾಲೀನ ಚರಿತ್ರೆಯ ನಡುವೆ ಅತ್ತಿಮಬ್ಬೆಯದು ಸ್ವತಂತ್ರವಾದ, ಆದರೆ ಅಪೂರ್ವವಾದ ಮಹತ್ವದ ದೀಪಸ್ತಂಭ ಎಂಬಂತೆ ನಿಲ್ಲಿಸಿದ್ದಾನೆ. ಅತ್ತಿಮಬ್ಬೆ ಒಂದು ಪಾತ್ರ ಮಾತ್ರವಾಗಿ ಮುಗಿಯದೆ ಮೌಲ್ಯಗಳ ಪ್ರತೀಕವಾಗಿ ಉಳಿಯುತ್ತಾಳೆ.

ಇಡೀ ಅಜಿತ ಪುರಾಣ ಕಾವ್ಯವನ್ನು ನಿಯಂತ್ರಿಸುವ ಕೇಂದ್ರ ಬಿಂದುವಾಗಿ, ಆಳುವ ಕೇಂದ್ರ ಪ್ರಜ್ಞೆಯಾಗಿ ಅತ್ತಿಮಬ್ಬೆಯನ್ನು ಸ್ಥಾಪಿಸಿರುವುದು ರನ್ನನ ಸಾಧನೆ. ತಾನು ಬರೆಯುತ್ತಿರುವುದು ತೀರ್ಥಂಕರನ ಚರಿತೆಯಾದರೂ, ಆ ಪುರಾಣದ ಕಥಾ ಭಿತ್ತಿಯಲ್ಲಿ ಅತ್ತಿಮಬ್ಬೆಯ ಜೀವನ ಸಾಧನೆಯ ಚಿತ್ರಗಳನ್ನು ಕೆತ್ತುತ್ತ ಕಡೆಕಡೆಗೆ ಕಥಾ ಕೇಂದ್ರಕ್ಕೇನೆ ಜಗ್ಗುತ್ತಾನೆ. ತೀರ್ಥಂಕರನ ಮತ್ತು ಚಕ್ರವರ್ತಿಯ ತಾಯಿಯ ಸ್ಥಾನಕ್ಕೆ ಅತ್ತಿಮಬ್ಬೆಯನ್ನು ತಂದು ನಿಲ್ಲಿಸಿದ ರನ್ನನ ಸಾಧನೆ ದೊಡ್ಡದು. ಸ್ತ್ರೀಯನ್ನು

ವ್ಯಾಖ್ಯಾನಿಸುವ ಸವಕಳಿಯಾದ ಸಿದ್ಧಮಾದರಿಗಳಿಂದ (ಸ್ಟೀರಿಯೊಟೈಪ್) ರನ್ನನ್ನು ತನ್ನ ಕಾವ್ಯಶಕ್ತಿಯನ್ನು ಬಿಡಿಸಿದ್ದಾನೆ. ಪರಂಪರೆಯ ಕ್ಲೀಷೆಯ ಚೌಕಟ್ಟಿನಿಂದ ತಾನೂ ಬಿಡಿಸಿಕೊಂಡು ಸ್ತ್ರೀಯನ್ನೂ ಪಾರುಮಾಡಿದ್ದಾನೆ. ಸ್ತ್ರೀವಾದಿ ಪರಂಪರೆಯ ಚರಿತ್ರೆಯನ್ನು ಅತ್ತಿಮಬ್ಬೆಯ ಪಾತ್ರ ಚಿತ್ರಣದ ಮೂಲಕ ರನ್ನನು ಸಮರ್ಥವಾಗಿ ಸ್ತ್ರೀ ಶಕ್ತಿಯ ಆತ್ಯಂತಿಕ ವೈಭವವನ್ನು ರನ್ನಕವಿ ಅತ್ತಿಮಬ್ಬೆಯಲ್ಲಿ ಕಂಡಿದ್ದಾನೆ, ಕಂಡರಿಸಿದ್ದಾನೆ.

ಸಹಜ ಕವಿಯಾದ ರನ್ನನು ಕಲ್ಪನಾವಾದಿಯಾಗಿರುತ್ತ (idealist) ಏಕಕಾಲದಲ್ಲಿ ಅನುಭವವಾದಿಯೂ (empiricist) ಆಗಿರುವುದು ರನ್ನನ ದೊಡ್ಡ ಸಾಧನೆ. ಆದರ್ಶ ಮತ್ತು ವಾಸ್ತವಗಳ ಸಮನ್ವಯವಾದಿಯಾಗಿದ್ದ ರನ್ನನು ಅತ್ತಿಮಬ್ಬೆಯ ನಿಡುಬಾಳಿನ ಸ್ವೋಪಜ್ಞತೆಯನ್ನು ಮನಗಂಡನು; ಅತ್ತಿಮಬ್ಬೆಗೇ ವಿಶಿಷ್ಟವಾದ ಅಸಾಧಾರಣ ಲಕ್ಷಣಗಳನ್ನು ಗುರುತಿಸಿದನು. ಈ ಅರಿವಿನ ಫಲವಾಗಿ ರನ್ನನಿಗೆ ಅತ್ತಿಮಬ್ಬೆಯ ಜೀವನ ಸಾರವನ್ನು ವಿಶಿಷ್ಟವಾಗಿ ಅಭಿವ್ಯಕ್ತಿಸುವುದು ಸಾಧ್ಯವಾಯಿತು. ಲಿಂಗಭೇದವನ್ನು ಹಿನ್ನೆಲೆಗೆ ಸರಿಸಿ, ಒಬ್ಬ ವ್ಯಕ್ತಿಯ ಬಹುರೂಪಿ ಅವಿಷ್ಕಾರದ ಸಂಕೀರ್ಣತೆಯನ್ನು ಸೂಕ್ಷ್ಮವಾಗಿ ಬಿಂಬಿಸಿದ್ದಾನೆ. ಈ ಕಥನದ ಉದ್ದಕ್ಕೂ ನಿರ್ಮಮಕಾರದ ನೆಲೆಯಲ್ಲೇ ರನ್ನ ಹೆಜ್ಜೆ ಹಾಕಿದ್ದಾನೆಂದೇನೂ ಅಲ್ಲ; ಆದರೆ, ಆತ ಮಮಕಾರ ತೋರಿರುವ ಸಂದರ್ಭಗಳೂ ಸಹ ಅರ್ಥವಾಗುವಂಥವು. ಉದಾಹರಣೆಗೆ, ರನ್ನನು ಅತ್ತಿಮಬ್ಬೆಯಲ್ಲಿ ತಾಯ್ತನದ ಅಸೀಮ ಔದಾರ್ಯ ಗುರುತಿಸಿದ್ದಾನೆ. ಜಿನಜನನಿ, ಚಕ್ರವರ್ತಿಯ ತಾಯಿ, ಅಣ್ಣಿಗನ ಅಬ್ಬೆ–ಎಂದು ಕರೆದಿರುವ ಸಂದರ್ಭವನ್ನು ಗಮನಿಸಬೇಕು. ಕ್ಲಾಸಿಕಲ್ ಪಿತೃರೂಪೀ ಕೌಟುಂಬಿಕ ವ್ಯವಸ್ಥೆಯೊಳಗೆ ಇದ್ದೂ ರ್‍ಯಾಡಿಕಲ್ ಮನೋಧರ್ಮದ ಅತ್ತಿಮಬ್ಬೆಯು ಮಾತೃರೂಪಿ ಗುಣಗಳನ್ನು ಹೊಂದಿದ್ದು ಸಮಾಜದ ಗೌರವ ಗಳಿಸಿದಳು. ಪುರುಷರಿಗೆ ಸ್ತ್ರೀಯಲ್ಲಿ ಶೀಲಗುಣಸಮೃದ್ಧಿಯ ಅಬ್ಸೆಷನ್ ಇರುತ್ತದೆ. ರನ್ನನು ಅತ್ತಿಮಬ್ಬೆಯಲ್ಲಿ ಮಾತೃತ್ವ ಮತ್ತು ಶೀಲಗುಣಾರಾಧನೆಗಷ್ಟೇ ವಿರಮಿಸಲಿಲ್ಲ. ಆಕೆಯ ಪ್ರವೃತ್ತಿಶೀಲ ಚಲನೆಗಳನ್ನು ಗಮನಿಸಿದ್ದಾನೆ, ವ್ಯಕ್ತಿತ್ವಸಾಧನೆಯ ಬಹುಮುಖತೆಯನ್ನು ಗುರುತಿಸಿದ್ದಾನೆ. ರನ್ನನು ತೋರುವ ಈ ಕಾಳಜಿಗಳಲ್ಲಿ ದೋಷಗ್ರಹಿಕೆಗಳಿಲ್ಲ. ಪುರುಷಸಹಜ ಪೂರ್ವಗ್ರಹಿಕೆಗಳು (prejudices) ಇಲ್ಲದ ನೆಲೆಯಲ್ಲಿ ಅತ್ತಿಮಬ್ಬೆಯ ಸಾಂಸ್ಕೃತಿಕ ಕಾರ್ಯಕ್ಷೇತ್ರದ ಅಸಾಧಾರಣ ಸಾಧನೆಗಳ ಪಾತಳಿಗಳನ್ನು ಪರಿಚಯಿಸಿದ್ದಾನೆ.

ಇದರ ಫಲವಾಗಿ, ಕಾಲ್ಪನಿಕ ಲೋಕದಲ್ಲಿ ಕಡೆದು ಮೂಡಿಸುತ್ತಿದ್ದ ಸ್ತ್ರೀಯ ಭಿತ್ತಿಚಿತ್ರಕ್ಕೆ ಅತ್ತಿಮಬ್ಬೆಯ ಮೂಲಕ ಕಾಯಕಲ್ಪವಾಯಿತು, ಪ್ರಾಣಸಂಚಾರವಾಯಿತು. ಸ್ವಾವಲಂಬಿ ದೇಶಿಯ ಸ್ತ್ರೀವಾದವೊಂದರ ಸಮರ್ಥ ಉದ್ಘಾಟಕಳು ಅತ್ತಿಮಬ್ಬೆಯೇ ಎಂದು ಇದುವರೆಗೆ ಹೇಳಿರುವುದು ಈ ಹಿನ್ನೆಲೆಯಿಂದ :

* ಸ್ತ್ರೀಗೂ ಒಂದು ಸ್ವತಂತ್ರ ಅಸ್ತಿತ್ವವಿದೆ, ವ್ಯಕ್ತಿತ್ವವಿದೆ.

* ಮಹತ್ತರವಾದ ಘನಕಾರ್ಯಗಳನ್ನು ಆಕೆ ಮಾಡಬಲ್ಲಳು.

* ಲೋಕ ಸೈ ಎನ್ನುವಂತೆ ಹೆಣ್ಣು ಸ್ವತಂತ್ರವಾಗಿ ಬದುಕಬಲ್ಲಳು.

* ಪಿತ್ರಾರ್ಜಿತ ಆಸ್ತಿಯನ್ನು ಆಕೆ ಸೂಕ್ತ್ತಕಂಡಂತೆ ವಿನಿಯೋಗಿಸಬಲ್ಲಳು.

—ಈ ಬಗೆಯ ಲಕ್ಷಣಗಳಿಗೆ ಅತ್ತಿಮಬ್ಬೆ ಅರ್ಹ–ಜೀವಂತ ಲಕ್ಷ್ಯವಾದಳು. ಆಚರಣೆಯಲ್ಲಿ ಸದೃಢವಾಗಿ ಈ ಆಶಯಗಳನ್ನು ಮೈಗೂಡಿಸಿರುವ ಅತ್ತಿಮಬ್ಬೆಯು ಸ್ತ್ರೀಪರವಾದಿಗಳ ಆತ್ಮಬಲವನ್ನು ಹೆಚ್ಚಿಸಿದ್ದಾಳೆ, ಮತ್ತು ನೈತಿಕ ಧೀಮಂತಿಕೆಯು ಪ್ರಭಾವಿನಿಯಾಗಿದ್ದಾಳೆ. ಪರಾಧೀನತೆಯ ನರಳಿಕೆ ಬಿಕ್ಕುಗಳಲ್ಲಿ ಮುದುಡಿಹೋಗದೆ ಸ್ತ್ರೀವಾದ ವಾಗ್ವಾದಗಳಿಗೆ ಸಮೃದ್ಧ ಮಾದರಿಗಳನ್ನು ಒದಗಿಸಿದ್ದಾಳೆ.

‘ಸಾಸಲಿ’ನ ಬೃ.ಶಿ.ಯುಗದ ಸ್ಮಾರಕಗಳು ಮತ್ತು ರೇಖಾ ಚಿತ್ರಗಳು

ಎಂ. ಜಿ. ಮಂಜುನಾಥ
ಸಾಸಲು ಜೆ. ವಿಶ್ವನಾಥ್

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ಸಾಸಲು ಎಂಬ ಗ್ರಾಮದ ಬಳಿ ಬೃಹತ್ ಶಿಲಾಯುಗಕ್ಕೆ (ಮೆಗಾಲಿಥಿಕ್ ಏಜ್) ಸೇರಿದ 5 ನಿಲುವು ಗಲ್ಲುಗಳು (Menhir) ಮತ್ತು ಹಲವಾರು ರೇಖಾಚಿತ್ರಗಳು ನಮ್ಮ ಇತ್ತೀಚಿನ ಕ್ಷೇತ್ರಕಾರ್ಯದ ವೇಳೆಯಲ್ಲಿ ಪತ್ತೆಯಾದವು

ಸಾಸಲು ಗ್ರಾಮದ ಉತ್ತರಕ್ಕೆ 1.5 ಕಿ.ಮೀ ದೂರದಲ್ಲಿ 5 ಅಡಿ ಎತ್ತರ ಹಾಗೂ 2.5 ಅಡಿ ಅಗಲದ ಒಂದು ನಿಲುವುಗಲ್ಲಿದೆ. ಇದರ ಮೇಲೆ 5–6 ರೇಖಾ ಚಿತ್ರಗಳಿವೆ. ಇವುಗಳಲ್ಲಿ ಕೆಲವು ಯಾವುದೇ ಅರ್ಥವನ್ನು ಸೂಚಿಸದಂತಹ ವಿಚಿತ್ರವಾದ ಚಿತ್ರಗಳು, ಮತ್ತು ಚೌಕಳಿ ಮನೆಗಳಂತಹ ಒಂದು ಚಿತ್ರವಿದೆ. ಸಸಾಲಿನ ದಕ್ಷಿಣ ದಿಕ್ಕಿನಲ್ಲಿ 1.5 ಕಿ.ಮೀ ದೂರದಲ್ಲಿನ ‘ತೋಡಲು ಬಂಡೆ’ ಎಂಬ ಗುಡ್ಡದ ಪೂರ್ವ ದಿಕ್ಕಿನಲ್ಲಿ 3 ನಿಲುವು ಗಲ್ಲುಗಳಿವೆ. ಇವುಗಳಲ್ಲಿ ಮೊದಲನೆಯದು 12 ಅಡಿ ಎತ್ತರ, 3 ಅಡಿ ಅಗಲವಾಗಿದೆ. ಎರಡನೆಯದು 10 ಅಡಿ ಎತ್ತರ, 2.5 ಅಡಿ ಅಗಲವಾಗಿದೆ. ಮೂರನೆಯದು 8 ಅಡಿ ಎತ್ತರ ಮೂರು ಅಡಿ ಅಗಲವಾಗಿದೆ. ಇಲ್ಲಿಂದ ಉತ್ತರಕ್ಕೆ 1.5 ಕಿ.ಮೀ. ದೂರದಲ್ಲಿ ಮತ್ತೊಂದು ನಿಲುವುಗಲ್ಲಿದೆ. ಇದು 19 ಅಡಿ ಎತ್ತರ ಹಾಗೂ 6 ಅಡಿ ಅಗಲವಾಗಿದೆ. ಈ ನಿಲುವುಗಲ್ಲಿನ ಹತ್ತಿರದಲ್ಲಿಯೇ ಶಿಲಾವೃತ್ತಗಳುಳ್ಳ 10 ಸಮಾಧಿಗಳಿವೆ.

ಕರ್ನಾಟಕದಲ್ಲಿ ಹಲವಾರುಕಡೆ ಬೃಹತ್ ಶಿಲಾಯುಗದ ಸಮಾಧಿಗಳು ಪತ್ತೆಯಾಗಿದ್ದರೂ ಸಹ ನಿಲುವುಗಲ್ಲುಗಳು (Menhir) ಹೆಚ್ಚಿನ ಸಂಖ್ಯೆಯಲ್ಲಿ ಪತ್ತೆಯಾಗಿಲ್ಲ. ಇವು ತೀರಾ ಅಪರೂಪಕ್ಕೆ ಕಾಣಸಿಗುತ್ತವೆ. ಬೃಹತ್ ಶಿಲಾಯುಗದ ಜನರು ತಮ್ಮ ಜನಗಳ ಸಮಾಧಿಗಳ ಮೇಲ್ಭಾಗದಲ್ಲಿ ಬೃಹತ್ ಗಾತ್ರದ ನಿಲುವುಗಲ್ಲುಗಳನ್ನು ಅಪರೂಪವಾಗಿ ನಿಲ್ಲಿಸುತ್ತಿದ್ದರು. ಈ ರೀತಿಯ ನಿಲುವು ಗಲ್ಲುಗಳು ಬೆರಳೆಣಿಕೆಯಷ್ಟು ಸಂಖ್ಯೆಯಲ್ಲಿ ಪತ್ತೆಯಾಗಿವೆ. ಕರ್ನಾಟಕದ ದಕ್ಷಿಣ ಭಾಗದಲ್ಲಿ ತೀರಾ ಅಪರೂಪವೆನ್ನಿಸುವಷ್ಟು ಕಡಿಮೆ ಸಂಖ್ಯೆಯಲ್ಲಿ ಇವು ಲಭ್ಯವಾಗಿವೆ. ಬೆಂಗಳೂರು ಜಿಲ್ಲೆಯಲ್ಲಿ ಇದುವರೆಗೂ ಒಂದೂ ಪತ್ತೆಯಾಗಿರಲಿಲ್ಲ. ಮೊಟ್ಟ ಮೊದಲ ಬಾರಿಗೆ ಸಾಸಲಿನಲ್ಲಿ ಈ ರೀತಿಯ ನಿಲುವುಗಲ್ಲಿರುವುದಾಗಿ ಪತ್ತೆಯಾಗಿದೆ.

ಸಾಸಲು ಗ್ರಾಮದ ಈಶಾನ್ಯ ದಿಕ್ಕಿನ ಕದರಿ ಕಂಭದ ಗುಟ್ಟೆಯಲ್ಲಿನ ಬಂಡೆಗಳ ಮೇಲೆ 12 ರೇಖಾಚಿತ್ರಗಳಿವೆ. ಇವು 3–4 ಚದರಡಿಯ ಬಂಡೆಗಲ್ಲುಗಳ ಮೇಲೆ ಚಿತ್ರಿತವಾಗಿವೆ. ಈ ಚಿತ್ರಗಳಲ್ಲಿ ನವಿಲು, ಆನೆ, ಜಿಂಕೆ, ಮನುಷ್ಯ ಮುಂತಾದ ಚಿತ್ರಗಳಲ್ಲದೆ ಕೆಲವು ಸರಿಯಾಗಿ ಅರ್ಥೈಸಲಾರದಂತಹ ಚಿತ್ರಗಳೂ ಇವೆ.

ಪ್ರಾಗೈತಿಹಾಸಿಕ ಯುಗದ ಆದಿ ಶಿಲಾಯುಗ (ಪೇಲಿಯೋಲಿಥಿಕ್ ಏಜ್) ಕ್ರಿ.ಪೂ. 5 ಲಕ್ಷ ವರ್ಷಗಳಿಂದ ಕ್ರಿ.ಪೂ. ಹತ್ತು ಸಾವಿರದವರೆಗೆ, ಸೂಕ್ಷ್ಮ ಶಿಲಾಯುಗ (ಮೈಕ್ರೋಲಿಥಿಕ್ ಏಜ್) ಕ್ರಿ.ಪೂ. ಹತ್ತು ಸಾವಿರದಿಂದ ಕ್ರಿ.ಪೂ. ಮೂರು ಸಾವಿರದ ವರೆಗೆ, ಶಿಲಾತಾಮ್ರಯುಗ (ಚಾಲ್ಕೋಲಿಥಿಕ್ ಏಜ್) ಕ್ರಿ.ಪೂ. ಮೂರು ಸಾವಿರ ದಿಂದ ಕ್ರಿ.ಪೂ. ಒಂದು ಸಾವಿರದ ಇನ್ನೂರರವರೆಗೆ. ಬೃಹತ್ ಶಿಲಾಯುಗ (ಮೆಗಾಲಿಥಿಕ್ ಏಜ್) ಅಥವಾ ಕಬ್ಬಿಣಯುಗ (ಐರನ್ ಏಜ್) ಕ್ರಿ.ಪೂ. ಒಂದು ಸಾವಿರದ ಇನ್ನೂರರಿಂದ ಕ್ರಿ.ಪೂ. ಮೂರನೇ ಶತಮಾನದವರೆಗೂ ಅಸ್ತಿತ್ವದಲ್ಲಿತ್ತು. ಪ್ರಸ್ತುತ ಪತ್ರೆಯಾಗಿರುವ ನಿಲುವುಗಲ್ಲುಗಳು, ರೇಖಾಚಿತ್ರಗಳು, ಶಿಲಾವೃತ್ತಗಳುಳ್ಳ ಸಮಾಧಿಗಳು ಇವುಗಳೆಲ್ಲವೂ ಬೃಹತ್ ಶಿಲಾಯುಗಕ್ಕೆ (ಮೆಗಾಲಿಥಿಕ್ ಏಜ್) ಸೇರಿದವುಗಳಾಗಿದ್ದು ಸುಮಾರು ಕ್ರಿ.ಪೂ. 1200ರ ಕಾಲದ್ದೆಂದು ನಿರ್ಧರಿಸ ಬಹುದಾಗಿದೆ.



ಸಾಸಲಿನಲ್ಲಿರುವ ರೇಖಾಚಿತ್ರಗಳುಳ್ಳ ನಿಲುವುಗಲ್ಲು (Menhir)



ಹಾಸನದಲ್ಲಿರುವ 19 ಅಡಿ ಎತ್ತರದ ನಿಲುವುಗಲ್ಲು



ಸಾಸಲಿನಲ್ಲಿರುವ ಜಿಂಕೆಯ ರೇಖಾಚಿತ್ರ

ಕೆರೆಹಳ್ಳಿಯ ಮಹಿಷಮರ್ಧಿನಿಯ ಅಪೂರ್ವ ಶಿಲ್ಪ

ಕೆಂಗೇರಿ ಚಕ್ರಪಾಣಿ

ಮೈಸೂರು ಜಿಲ್ಲೆಯ ಚಾಮರಾಜನಗರ ತಾಲ್ಲೂಕಿಗೆ ಸೇರಿದ ಕೆರೆಹಳ್ಳಿ ಎಂಬ ಗ್ರಾಮದ ಹೊರವಲಯದ ಕೆರೆ ಏರಿಯ ಬಳಿಯಲ್ಲಿರುವ ಅರಳೀಮರದಕೆಳಗೆ ಪ್ರಾಚೀನವಾದ ಒಂದು ಮಹಿಷಾಸುರಮರ್ಧಿನಿಯ ಶಿಲ್ಪವು ನನ್ನ ಕ್ಷೇತ್ರಕಾರ್ಯದ ವೇಳೆಯಲ್ಲಿ ದೊರೆಯಿತು.

ಗಡುಸಾದ ಕಣಶಿಲೆ (ಗ್ರಾನೈಟ್)ಯಲ್ಲಿ ನಿರ್ಮಿತವಾದ ಈ ಶಿಲ್ಪವು ಐದು ಅಡಿ ಎತ್ತರ, ಹಾಗೂ ಎರಡು ಅಡಿಗಳಷ್ಟು ಅಗಲವಾಗಿದ್ದು ಉಬ್ಬುಶಿಲ್ಪ (ಕ್ಯಾಲಿಗ್ರಫಿ) ರೀತಿಯದ್ದಾಗಿದೆ.

ಚತುರ್ಭುಜೆಯಾದ ಮಹಿಷಮರ್ಧಿನಿಯು ತನ್ನ ಬಲಗಾಲನ್ನು ಮಹಿಷದ ನೆತ್ತಿಯಮೇಲೆ ಊರಿ ನಿಂತು, ಕೆಳ ಎಡಗೈಯಲ್ಲಿ ಮಹಿಷದ ಬಾಲವನ್ನು ಬಲವಾಗಿ ಹಿಡಿದು, ಕೆಳಬಲಗೈಯಲ್ಲಿ ಶೂಲದಿಂದ ಇರಿಯುತ್ತಿದ್ದಾಳೆ. ಮೇಲ್ಭಾಗದ ಎಡಗೈಯಲ್ಲಿ ಶಂಖ, ಹಾಗೂ ಬಲಗೈಯಲ್ಲಿ ಪ್ರಯೋಗ ಚಕ್ರವನ್ನು ಹಿಡಿದಿದ್ದಾಳೆ. ಶಿರಸ್ಸಿನಲ್ಲಿ ಕರಂಡಮುಕುಟ, ಕಿವಿಗಳಲ್ಲಿ ಮಕರಕುಂಡಲ, ಕೈಗಳಲ್ಲಿ ಕಡಗ, ಕೊರಳಲ್ಲಿ ಕಂಠಿಹಾರ, ಮುಂತಾದ ಆಭರಣಗಳನ್ನು ಧರಿಸಿರುವ ಮಹಿಷಮರ್ಧಿನಿಯು ಸೊಂಟದಿಂದ ಕಟೀವಸ್ತ್ರವು ಇಳಿಬಿದ್ದಿರುವಂತೆ ಶಿಲ್ಪಿಯು ಜಾಣ್ಮೆಯಿಂದ ನಿರ್ಮಿಸಿದ್ದಾನೆ.

ಮಹಿಷಾಸುರನು ತಪ್ಪಿಸಿಕೊಂಡು ಓಡಿಹೋಗದಂತೆ ತನ್ನ ಬಲಗಾಲಿನಲ್ಲಿ ನೆತ್ತಿಯನ್ನು ತುಳಿಯುವಾಗ ಆ ಒತ್ತಡದಿಂದ ಮುಂಗಾಲುಗಳನ್ನು ಬಾಗಿಸಿ ಕೆಳಕ್ಕೆ ಕುಸಿದಿರುವ ಕೋಣದ ಬಾಲವನ್ನು ಎಡಗೈಯಿಂದ ಮೇಲೆತ್ತಿ ಹಿಡಿದು ಶೂಲದಿಂದ ಚುಚ್ಚುತ್ತಿರುವುದನ್ನು ಗಮನಿಸಿದಾಗ, ಇಲ್ಲಿ ಕ್ರಿಯೆ (Action) ಮತ್ತು ಚಲನೆ (Movement) ಗಳನ್ನು ಶಿಲ್ಪಿ ಮನೋಜ್ಞವಾಗಿ ಹೊರಹೊಮ್ಮಿಸುವುದರಲ್ಲಿ ಯಶಸ್ವಿಯಾಗಿದ್ದಾನೆಂದು ಹೇಳಬಹುದು.

ಈ ಶಿಲ್ಪವು ಗಂಗರ ಕಾಲದ ಉಬ್ಬುಶಿಲ್ಪಗಳ ಮಾದರಿಯ ಉತ್ತಮ ಶಿಲ್ಪಗಳಲ್ಲೊಂದು ಎಂದು ಹೇಳಬಹುದು. ಗಂಗರ ಕಾಲದಲ್ಲಿ ಮಾತೃದೇವತಾರಾಧನೆಯು ಹೆಚ್ಚಾಗಿ ಪ್ರಚಲಿತದಲ್ಲಿತ್ತು. ಮಾತೃದೇವತೆಗಳಿಗೋಸ್ಕರವೇ ಹಲವಾರು ದೇವಾಲಯ

ಗಳನ್ನು ಆ ಕಾಲದಲ್ಲಿ ನಿರ್ಮಿಸಿದುದಕ್ಕೆ ಹಲವಾರು ನಿದರ್ಶನಗಳು ದೊರೆಯುತ್ತದೆ. ಅಲ್ಲದೆ ಪರಿವಾರ ದೇವತೆಗಳಾಗಿಯೂ ಮಾತೃದೇವತೆಗಳ ಮೂರ್ತಿಗಳು ಇದ್ದುದು ಕಂಡುಬರುತ್ತದೆ. ಪ್ರಸ್ತುತ ದೊರೆತಿರುವ ಮಹಿಷಮರ್ಧಿನಿಯ ವಿಗ್ರಹವಿರುವ ಕೆರೆ ಹಳ್ಳಿಯು ಮೂಲತಃ ಗಂಗವಾಡಿ 96000ಕ್ಕೆ ಸೇರಿದ್ದ ಪ್ರದೇಶವೇ ಆಗಿದ್ದು ಇಲ್ಲಿ ನೀತಿಮಾರ್ಗ ಎರೆಯಪ್ಪನ ಕ್ರಿ.ಶ. 900ರ ಒಂದು ತಾಮ್ರ ಶಾಸನವೂ ದೊರೆತಿದೆ. ಹಾಗೂ ಗಂಗರ ಕಾಲದ ದೇವಾಲಯವೊಂದರ ಅವಶೇಷಗಳೂ ಸಹ ಇಲ್ಲಿ ಕಂಡು ಬರುತ್ತವೆ. ಬಹುಶಃ ಪ್ರಸ್ತುತ ದೊರೆತಿರುವ ಮಹಿಷಮರ್ಧಿನಿಯ ಶಿಲ್ಪವು ಆ ದೇವಾಲಯದಲ್ಲಿದ್ದ ಶಿಲ್ಪವಾಗಿರಬಹುದು ಎಂದು ಊಹಿಸಬಹುದು.

ಈ ಶಿಲ್ಪದ ಲಕ್ಷಣಗಳ ಆಧಾರದಿಂದ ಇದು ಸುಮಾರು ಕ್ರಿ.ಶ. 900ರ ಕಾಲದ ಶಿಲ್ಪವೆಂದು ನಿರ್ಣಯಿಸಬಹುದು. ಇಂತಹ ಉತ್ತಮವಾದ ಹಾಗೂ ಪ್ರಾಚೀನವಾದ ಶಿಲ್ಪವು ಬಿಸಿಲು, ಮಳೆಗಳಿಗೆ ಸಿಕ್ಕಿ ಹಾಳಾಗುತ್ತಿರುವುದು ನಮ್ಮ ದೌರ್ಭಾಗ್ಯವೇ ಸರಿ. ಈಗಲಾದರೂ ಇದನ್ನು ಯಾವುದಾದರೂ ಮ್ಯೂಸಿಯಂನಲ್ಲಿ ಸಂರಕ್ಷಿಸಬೇಕಾದುದು ನಮ್ಮ ಆದ್ಯ ಕರ್ತವ್ಯ.



ಕೆರೆಹಳ್ಳಿಯ ಮಹಿಷಮರ್ಧಿನಿಯ ಶಿಲ್ಪ

ಮೌನ ಪಿಸುಗುಟ್ಟುತ್ತದೆ

ತಮಿಳ್ ಸೆಲ್ವಿ

ನನಸುಗಳ ಮಿಲನಕ್ಕೆ
ನೂರು ಕನಸುಗಳ ಹಾರಬಿಟ್ಟು
ಟಿಸಿಲೊಡೆದ ಬದುಕ ರೆಂಬೆಯು ತೇದು
ಕಡೆಗೆ
ತೇಯುಲಾರದೆ ಸೋತು
ಸಾವಿನೊಡನೆ ಸೆಣಸಾಟಕ್ಕಿಳಿದಾಗ
ಬೆಂದೂ ಬೇಯದಂತಿರುವ ಬದುಕಿನಲ್ಲಿ
ಕರಟಿದಾಸೆಗಳಿಗೆ ನಿರಾಸೆಯು ಕಾಳ್ಗಿಚ್ಚು ಬೆಸೆದು......
ಸೀಗೆ ಬೇಲಿಯು ನಡುವೆ ನುಸುಳಿ
ಹೊರಬರಲಾರದೆ
ಚಡಪಡಿಸಿ ಅಲ್ಲಿಯೇ ಮುದುರಿ ನಿಂತು
ನಿಲ್ಲುವ ಶಕ್ತಿ ಉಡುಗಿ ಕಾಲುಗಳು ಕುಸಿದಾಗ
............ಮೌನ ಪಿಸುಗುಟ್ಟುತ್ತದೆ.

ಬದುಕ ಪಯಣದಲ್ಲಿ
ತೇಲು ಮೋಡಗಳ ಹೊತ್ತ ನೀಲಗಗನವ ನೆನೆದು
ಅದರ ಬಿಂಬವ ತೋರುವ
ಮನದ ಕಡಲಿನಾಳವ ಕಂಡು
ಆಕಾಶ ಮುಟ್ಟಿ
ಚುಕ್ಕಿಯಾದ ಹಕ್ಕಿಯನ್ನು ಹಿಂಬಾಲಿಸುವ
ಪಾತಳಿಯು ದೃಷ್ಟಿಗೆ
ಕಾಲಿಟ್ಟೆಡೆಯಲ್ಲೆಲ್ಲ ವಿಷಸರ್ಪಗಳೆ ಕಂಡಾಗ
............ಮೌನ ಪಿಸುಗುಟ್ಟುತ್ತದೆ.

ಸ್ಪರ್ಶಜ್ಞಾನವಿರದ ಬರೀ ಚಿತ್ರಗಳ ತೋರಿಸುವ
ರಂಗುರಂಗಿನ ಕನಸುಗಳ ಹುಡುಕಾಟಕ್ಕೆ
ನರ ನರಗಳೂ ಇಂಬುನೀಡಿ
ಪ್ರಕ್ಷುಬ್ಧ ವಾತಾವರಣದ ಅನಿವಾರ್ಯತೆಯಲ್ಲಿ
ಅಸಹಾಯಕಳಾಗಿ
ಮಂದಿಯ ಸಂಗಬಿಟ್ಟು
ಒಬ್ಬಂಟಿಗಳಾಗಿ ನಿಂತು ಗಂಭೀರಳಾದಾಗ

ತಕ್ಷಣದ ನಿರ್ವಾಣಕ್ಕೆ......
ಅದರಾಚಿನ ಅನೂಹ್ಯ ವಿಕಾಸಕ್ಕೆ......
ಬದುಕಿನಾಗಸ ಬೆಳಗಿಸುವ
ಭ್ರಮೆಯ ಚಂದ್ರನ ಬೆಳಕು ಮೂಡಿದಾಗ
.........ಮೌನ ಪಿಸುಗುಟ್ಟುತ್ತದೆ.

ಕಳೆದ ದಿನಗಳ ಎಣಿಸಿ
ಉಳಿದ ದಿನಗಳ ಗುಣಿಸಿ ಬದುಕನಂಗಲಾಚುವಾಗ
ಆರ್ತನಾದ ಹೊಮ್ಮಿಸುವ ಕ್ರೋಧದ ಜೊತೆಗೆ
ನೋವಿನ ಅಂತರಾಳದ ಮೌನ ಪಿಸುಗುಟ್ಟುತ್ತದೆ......
'ನಮ್ಮ ಬೆವರನ್ನೆ ಕುಡಿದು
ನಗೆಯ ಕಾರಂಜಿ ಪುಟಿಯುವ
......ಚಾರಗಳ ಚೌಕಟ್ಟಿನಲ್ಲಿ
ಉರಿಬಿಸಿಲು ಸುಡುತ್ತಿದ್ದರೂ ತಾಳಿಕೊಳ್ಳುತ್ತೇವೆ
ಮೌಢ್ಯತೆಯ ಮಹಾವೃಕ್ಷದ ನೆರಳಲ್ಲಿ ನಿಂತು...'

ಕನಸಿನ ಮನಸು
ತನ್ನ ರೆಕ್ಕೆಪುಕ್ಕ ಕಳೆದುಕೊಂಡು
ತರಗೆಲೆಯಂತೆ ನೆಲಕಚ್ಚುವ ಮುನ್ನ
ಮನಕ್ಕಂಟಿ ಗಟ್ಟಿಗೊಂಡ ನಂಬಿಕೆಯ ಮೌಢ್ಯ
ಕಳಚಿ ಬೆತ್ತಲಾದೀತೇ ಎನ್ನುವ ನಿರೀಕ್ಷೆಯಲ್ಲಿರುವಾಗ
ಸ್ವಾಧೀನತೆಯ ಭದ್ರಕೋಟೆಗೆ ಲಗ್ಗೆಯಿಟ್ಟಂತೆ
ಗೆಜ್ಜೆ ಕಟ್ಟಿದ ಮನಸು
ಕಾಲ ನರ್ತಿಸಿದಂತೆ ಹಲವಾರು ಹೆಜ್ಜೆಗಳ
ಗುರುತು ಮೂಡಿಸಿದ್ದನ್ನು

ಅಳಿಸುವಾಸೆಯಿಂದ
ನನ್ನುದರದೊಳಗಿನ ಬೆಳಕ ಕಾಣದ
ಯೋಚನೆಗಳ ಭ್ರೂಣವನ್ನು
ಹೊರತರುವ ಪ್ರಯತ್ನ ನಡೆಸಿದಾಗ
.........ಮೌನ ಪಿಸುಗುಟ್ಟುತ್ತದೆ.
ಮೌನದ ಸೇತುವೆಯಡಿಯಲ್ಲಿ
ಹರಿಯುತ್ತದೆ ಕಾಲನ ನದಿ.

ಬಸವಣ್ಣನವರ (ಕ್ರಿ.ಶ. ೧೧೬೦) ಒಂದು ಅಪ್ರಕಟಿತ ವಚನ

(ಸಂ.) ಎಸ್. ಶಿವಣ್ಣ

ನೇಹದ ಸುಖವ ನೋಟ ನುಂಗಿತ್ತು,
ನೋಟದ ಸುಖವ ಕೂಟ ನುಂಗಿತ್ತು,
ಕೂಟದ ಸುಖವ ಆಲಿಂಗನ ನುಂಗಿತ್ತು,
ಆಲಿಂಗನದ ಸುಖವ ಸಂಗ ನುಂಗಿತ್ತು,
ಸಂಗದ ಸುಖವ ಪರವಸ ನುಂಗಿತ್ತು,
ಪರವಸದ ಸುಖವ ಕೂಡಲ ಸಂಗಯ್ಯ ತಾನೆ ಬಲ್ಲ.

ಆಕರ : [ಓಲೆ] ೭೧೪ (ಗರಿ ೫೩ ೬೦-೫೪ ಮುಂ) ಬೃಹನ್ಮಠ, ಚಿತ್ರದುರ್ಗ.

ಕಾಳನಾಯಕನ ಹಳ್ಳಿಯಲ್ಲಿ ಪತ್ತೆಯಾದ ಶಿಲಾಯುಗದ ಮಣ್ಣಿನ ಗೊಂಬೆಗಳು

ದೇ. ಸ್ಮಿತಾರೆಡ್ಡಿ

ಬೆಂಗಳೂರು ಜಿಲ್ಲೆಯ ಆನೇಕಲ್ ತಾಲ್ಲೂಕಿಗೆ ಸೇರಿದ ಕಾಳನಾಯಕನ ಹಳ್ಳಿ ಎಂಬ ಗ್ರಾಮವು ಆನೇಕಲ್‌ನಿಂದ ಆರು ಕಿ.ಮಿ. ದೂರದಲ್ಲಿದೆ. ಇಂದು ಕುಗ್ರಾಮವಾಗಿರುವ ಈ ಹಳ್ಳಿಯು ತನ್ನ ಗರ್ಭದಲ್ಲಿ ಸಹಸ್ರಾರು ವರ್ಷಗಳಷ್ಟು ಹಳೆಯ ಅಪೂರ್ವವಾದ ಇತಿಹಾಸವನ್ನು ಅಡಗಿಸಿಕೊಂಡಿದೆ. ಈ ಹಳ್ಳಿಯು ಬೃಹತ್ ಶಿಲಾಯುಗದ ಮಾನವನ ನೆಲೆಯಾಗಿದ್ದುದಕ್ಕೆ ಕುರುಹಾಗಿ ಇಲ್ಲಿ ಬೃಹತ್ ಶಿಲಾಯುಗದ (ಮೆಗಾಲಿಥಿಕ್ ಏಜ್) ಹಲವಾರು ಸಮಾಧಿಗಳು ಈಗ ಪತ್ತೆಯಾಗಿವೆ. ಈ ನಿವೇಶನದಲ್ಲಿ ಬೃ. ಶಿಲಾಯುಗದ 10 ದೊಡ್ಡ ದೊಡ್ಡ ಸಮಾಧಿಗಳು ಸುಸ್ಥಿತಿಯಲ್ಲಿವೆ, ಅಲ್ಲದೆ ಹತ್ತಾರು ಸಮಾಧಿಗಳು ನಿಧಿ ಶೋಧಕರ, ಮತ್ತು ವ್ಯವಸಾಯಗಾರರ ಧಾಳಿಗೆ ಗುರಿಯಾಗಿ ಸಂಪೂರ್ಣವಾಗಿ ಹಾಳಾಗಿವೆ.

ಈ ಸಮಾಧಿಗಳು ಗ್ರಾನೈಟ್ ಕಲ್ಲಿನಿಂದ (ಕಣಶಿಲೆ) ನಿರ್ಮಿಸಿದವುಗಳಾಗಿದ್ದು, ಆಯತಾಕಾರದ ಕೋಣೆ ಗೋರಿಗಳಾಗಿವೆ. ಹಾಗೂ ಮೇಲ್ಭಾಗದಲ್ಲಿ ಮುಚ್ಚಳದ ಕಲ್ಲುಗಳನ್ನು (ಕ್ಯಾಪ್‌ಸ್ಟೋನ್) ಹೊಂದಿವೆ. ಇವುಗಳ ಸುತ್ತಲೂ ಕಾಡುಗಲ್ಲುಗಳಿಂದ (ಉರುಟು ಕಲ್ಲು) ನಿರ್ಮಿಸಿದ ವೃತ್ತಗಳಿವೆ.

ಈ ನಿವೇಶನದಲ್ಲಿನ ಅಗೆಯಲ್ಪಟ್ಟಿರುವ ಬೃ. ಶಿಲಾ ಸಮಾಧಿಗಳ ಒಳ ಭಾಗವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಹಲವಾರು ಮಡಿಕೆ ಕುಡಿಕೆಗಳ ಚೂರುಗಳು ಹಾಗೂ ಎರಡು ಮಣ್ಣಿನ ಗೊಂಬೆಗಳು ದೊರೆತವು. ಮಡಿಕೆ ಚೂರುಗಳು ಕಪ್ಪು ಹಾಗೂ ಕೆಂಪಿನ ಬಣ್ಣದಿಂದ ಕೂಡಿದ್ದು, ಚಕ್ರದಿಂದ ಮಾಡಿ ಸುಟ್ಟವುಗಳಾಗಿವೆ.

ಗೊಂಬೆಗಳು : ಇಲ್ಲಿ ದೊರೆತ ಗೊಂಬೆಗಳು ಜೇಡಿ ಮಣ್ಣಿನಿಂದ ಮಾಡಲ್ಪಟ್ಟಿದ್ದು, ಒಂದು ಗಂಡು ಹಾಗೂ ಮತ್ತೊಂದು ಹೆಣ್ಣಿನದ್ದಾಗಿದೆ. ಹೆಣ್ಣಿನ ವಿಗ್ರಹವು (ಗೊಂಬೆಯು) 6.4 ಸೆಂ.ಮೀ. ಎತ್ತರ, ಹಾಗೂ 7.5 ಸೆಂ. ಮೀ. ಅಗಲವಾಗಿದೆ. ಈ ವಿಗ್ರಹದ ತಲೆ ಹಾಗೂ ಕೈ, ಕಾಲುಗಳು ತುಂಡಾಗಿದ್ದು ಅವು ಉಪಲಬ್ಧವಾಗಿಲ್ಲ. ಎರಡೂ ಕೈಗಳನ್ನು ಅಗಲಿಸಿ ಹಿಡಿದಂತಿರುವ ಈ ಗೊಂಬೆಯು ಮುಂಗೈಗಳವರೆಗಿನ

ಭಾಗವಮಾತ್ರ ಇದ್ದು ಎರಡೂ ಹಸ್ತಗಳು ಮುರಿದು ಹೋಗಿವೆ. ಕಾಲುಗಳಲ್ಲಿ ಎಡ ತೊಡೆಯು ಸ್ವಲ್ಪ ಭಾಗ ಮಾತ್ರ ಇದೆ. ಬಲಗಾಲು ಸೊಂಟದ ಭಾಗದಿಂದಲೇ ನಾಶವಾಗಿದೆ. ಆದ್ದರಿಂದ ಗೊಂಬೆಯು ಕುಳಿತ ಭಂಗಿಯಲ್ಲಿದೆಯೋ, ಅಥವಾ ನಿಂತಭಂಗಿಯಲ್ಲಿದೆಯೋ ಗುರುತಿಸುವುದು ಅಸಾಧ್ಯವಾಗಿದೆ. ಗೊಂಬೆಯು ನಗ್ನವಾಗಿದ್ದು ಯಾವುದೇ ರೀತಿಯ ವಸ್ತ್ರಗಳನ್ನು ಧರಿಸಿಲ್ಲ. ಆದರೆ ಸ್ತನಗಳ ಮೇಲ್ಭಾಗದಲ್ಲಿ ಕೊರಳಲ್ಲಿ ಒಡವೆಯೊಂದನ್ನು ಧರಿಸಿರುವಂತೆ (ಕೊರಳಹಾರ, ನೆಕ್ಲೇಸ್) ಚಿತ್ರಿಸಲಾಗಿದೆ. ಈ ಗೊಂಬೆಯು ತೆಳುವಾದ ಹೊಟ್ಟೆ, ಸಣ್ಣ ಸೊಂಟ ಹಾಗೂ ಪ್ರಮಾಣ ಬದ್ಧವಾದ ಅಂಗಸೌಷ್ಟವದಿಂದ ಕೂಡಿರುವ ಈ ಸ್ತ್ರೀಯ ಬೊಂಬೆಯು ಕೊರಳ ಒಡವೆ ಹಾಗೂ ಹೊಕ್ಕಳು ಸಹ ಸ್ಪಷ್ಟವಾಗಿ ಕಾಣುವಂತೆ ಶಿಲ್ಪಿಯು ನಿರ್ಮಿಸಿರುವುದನ್ನು ಗಮನಿಸಿದರೆ ಆತ ನಿಪುಣನಾದ ಶಿಲ್ಪಿ ಎಂದು ಹೇಳಬಹುದು.

ಮತ್ತೊಂದು ಗೊಂಬೆಯು ಪುರುಷನದಾಗಿದ್ದು 7 ಸೆಂ.ಮಿ. ಎತ್ತರ ಹಾಗೂ 5.4 ಸೆಂ.ಮಿ. ಅಗಲವಾಗಿದೆ. ಈ ಗೊಂಬೆಯೂ ಸಹ ರುಂಡ ಹಾಗೂ ಕೈಕಾಲುಗಳನ್ನು ಕಳೆದುಕೊಂಡಿದೆ. ಬಲಗೈ ಮೊಣಕೈವರೆಗೆ ಮಾತ್ರ ಇದೆ. ಎಡಗೈ ಹಾಗೂ ಎರಡು ಕಾಲುಗಳು ಸಂಪೂರ್ಣವಾಗಿ ಹಾಳಾಗಿದೆ. ಗೊಂಬೆಯ ದೇಹದ ಮೇಲೆ ಯಾವುದೇ ವಸ್ತ್ರಗಳಿಲ್ಲದಿದ್ದರೂ ಕೊರಳಲ್ಲಿ ಒಂದು ಸರವಂತಹ ಒಡವೆಯನ್ನು ಧರಿಸಿರುವುದು ಕಂಡು ಬರುತ್ತದೆ. ಈ ಬೊಂಬೆಯೂ ಸಹ ಅಸಮಗ್ರವಾಗಿ ಲಭಿಸಿರುವುದರಿಂದ ಇದು ಕುಳಿತ ಭಂಗಿಯಲ್ಲಿದೆಯೋ ಅಥವಾ ನಿಂತ ಭಂಗಿಯಲ್ಲಿದೆಯೋ ಹೇಳುವುದು ಅಸಾಧ್ಯವಾಗಿದೆ. ಎರಡೂ ವಿಗ್ರಹಗಳು ಜೇಡಿಮಣ್ಣಿನಿಂದ ನಿರ್ಮಿಸಿ, ಒಣಗಿಸಿ, ನಂತರ ಸುಟ್ಟಿರುವುದರಿಂದ ಗಟ್ಟಿಯಾಗಿವೆ.

ಶಿಲಾ ತಾಮ್ರಯುಗ ಅಥವಾ ಚಾಲ್ಕೋಲಿಥಿಕ್ಏಜ್‌ನ ನಂತರದ ಕಾಲದಲ್ಲಿ ಕಬ್ಬಿಣದ ಸಂಶೋಧನೆಯೊಡನೆ ಕಬ್ಬಿಣದ ಆಯುಧಗಳು ಬಳಕೆಗೆ ಬಂದು ಶಿಲಾಯುಧಗಳ ಬಳಕೆ ನಿಂತಿತು. ಈ ಯುಗವನ್ನು ಕಬ್ಬಿಣಯುಗ (ಐರನ್‌ಏಜ್) ಎಂದು ಕರೆಯಲಾಗಿದೆ. ಈ ಜನರು ದೊಡ್ಡ ದೊಡ್ಡ ಬೃಹದಾಕಾರದ ಕಲ್ಲು ಚಪ್ಪಡಿಗಳನ್ನು ಬಳಸಿ ಸಮಾಧಿಗಳನ್ನು ನಿರ್ಮಿಸುತ್ತಿದ್ದುದರಿಂದ ಈ ಸಂಸ್ಕೃತಿಯನ್ನು "ಬೃಹತ್ ಶಿಲಾಯುಗ ಸಂಸ್ಕೃತಿ" ಅಥವಾ "ಬೃಹತ್ ಶಿಲಾಸಮಾಧಿ ಸಂಸ್ಕೃತಿ" ಎಂದು ಕರೆಯಲಾಗುತ್ತದೆ. ಬೃ. ಶಿ. ಯುಗದ ಜನರ ಸಮಾಧಿಗಳಲ್ಲಿ ಮೃತರ ಅಸ್ಥಿಪಂಜರಗಳಲ್ಲದೆ ವಿವಿಧರೂಪದ ಮಣ್ಪಾತ್ರೆಗಳನ್ನೂ, ಅವರು ಉಪಯೋಗಿಸುತ್ತಿದ್ದ ಆಯುಧೋಪಕರಣಗಳನ್ನೂ ಕಾಣಬಹುದು. ಕಬ್ಬಿಣದ ಕತ್ತಿ, ಚಾಕು, ಭರ್ಜಿ ಮೊನೆ, ಬಾಣದ ಮೊನೆ, ಕೊಡಲಿ. ಮುಂತಾದ ಆಯುಧಗಳೂ, ಕುಡುಗೋಲು, ಗುದ್ದಲಿ, ಹಾರೆ ಮುಂತಾದ ವ್ಯವಸಾಯದ ಉಪಕರಣಗಳೂ, ಹಣತೆ. ತೂಗು ಸಾಧನ, ಬಾಣಲಿ. ಮುಂತಾದ ಗೃಹೋಪಕರಣಗಳೂ. ಕೆಲವೊಮ್ಮೆ ತಾಮ್ರದ

ಬೋಗುಣಿಗಳು. (Bowls) ಗಂಟೆ, ಮಣಿ, ಮುಂತಾದ ಪದಾರ್ಥಗಳೂ ಸಿಕ್ಕಿವೆ. ಅಪರೂಪವಾಗಿ ಚಿನ್ನದ ಆಭರಣಗಳೂ ದೊರೆತಿವೆ."[1] ಬೃ. ಶಿ. ಯುಗದ ಸಮಾಧಿಗಳಲ್ಲಿ ಮಣ್ಣಿನ ಗೊಂಬೆಗಳು ದೊರೆತಿರುವ ಹಲವಾರು ನಿದರ್ಶನಗಳಿವೆ.

ಘಟಪ್ರಭಾ ನದೀ ದಂಡೆಯ ಮೇಲಿನ ಹೆರಕಲ್ ಗ್ರಾಮದ ಶಿಲಾಯುಗದ ನಿವೇಶನದಲ್ಲಿ ಸುಟ್ಟ ಮಣ್ಣಿನ ಗೊಂಬೆಗಳು ಪತ್ತೆಯಾಗಿದ್ದವು. ಬೆಳಗಾಂ ಹತ್ತಿರದ ವಡಗಾಂವ ಮಾಧವ ಪುರದಲ್ಲಿ ಸಹ ಸುಟ್ಟ ಮಣ್ಣಿನಗೊಂಬೆಗಳು ಪತ್ತೆಯಾಗಿವೆ.[2] ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಭೈರವನ ಪಾದ ಎಂಬಲ್ಲಿ ಸುಟ್ಟ ಮಣ್ಣಿನ ಗೊಂಬೆ ದೊರೆತಿದೆ[3] ಅದೇ ತಾಲ್ಲೂಕಿನ ಸಿರಗಂಬಿ ಹೊಸಳ್ಳಿ ಎಂಬ ಗ್ರಾಮದಲ್ಲಿ ಸುಟ್ಟ ಮಣ್ಣಿನ ಹೆಣ್ಣುಗೊಂಬೆ ದೊರೆತಿದೆ.[4] ರಾಯಚೂರು ಜಿಲ್ಲೆಯ ಪಿಕಲಿಹಾಳು ಮತ್ತು ತೆಕ್ಕಲ ಕೋಟೆಯ ನಿವೇಶನಗಳಲ್ಲಿಯೂ ಸಹ ಕೆಲವು ಮಣ್ಣಿನ ಗೊಂಬೆಗಳು ದೊರಕಿವೆ. ಇವುಗಳು ಆ ಜನರ ಕಲಾಭಿರುಚಿಯನ್ನು ಮತ್ತು ಅವರಿಗೆ ಪರಿಚಿತವಾದ ಕೆಲವು ಪ್ರಾಣಿಗಳ ವಿಷಯವನ್ನೂ ತಿಳಿಸುತ್ತವೆ. ಅಲ್ಲಿ ದೊರೆತಿರುವ ಎತ್ತುಗಳ ಗೊಂಬೆಗಳು ಆ ಜನರು ಎತ್ತುಗಳನ್ನು ಸಾಕುತ್ತಿದ್ದರು, ಹಾಗೂ ತಮ್ಮ ವ್ಯವಸಾಯದ ಕೆಲಸಗಳಲ್ಲಿ ಎತ್ತುಗಳ ಸಹಾಯವನ್ನು ಪಡೆಯುತ್ತಿದ್ದರು ಎಂಬ ವಿಷಯವನ್ನು ತಿಳಿಸುತ್ತದೆ.[1]

ಬಲೂಚಿಸ್ಥಾನದ ಕಿಲಿಘುಲ್ ಮೊಹಮ್ಮದ್ ಎಂಬ ಪ್ರದೇಶದ ಬಳಿಯಲ್ಲಿರುವ ದಾಂಬ್ ಸದಾತ್‌ನಲ್ಲಿ ದೊರೆತ ಗಡಸು ಜೇಡಿಮಣ್ಣಿನ ಪ್ರತಿಮೆಗಳು ಕ್ರಿ. ಪೂ. 2300 ವರ್ಷಗಳಷ್ಟು ಹಳೆಯದೆಂದು ವಿದ್ವಾಂಸರು ಗುರುತಿಸಿದ್ದಾರೆ.[2] ಇದೇ ರೀತಿ ಕೊಲ್ಲಾಪುರದ ಬಳಿಯ ಬ್ರಹ್ಮಪುರಿ ಎಂಬ ಗ್ರಾಮದ ಬಳಿ ಶಾತವಾಹನರ ಕಾಲದ ಮಣ್ಣಿನ ಗೊಂಬೆಗಳು ಪತ್ತೆಯಾಗಿವೆ. ಸನ್ನತಿಯಲ್ಲಿಯೂ ಸಹ ಇದೇ ಕಾಲದ ಮಣ್ಣಿನ ಗೊಂಬೆಗಳು ಪತ್ತೆಯಾದ ವರದಿಯಾಗಿದೆ.


ಬೃಹತ್ ಶಿಲಾಯುಗ ಸಂಸ್ಕೃತಿಯು ಕ್ರಿ. ಪೂ. 1200 ರಿಂದ ಕ್ರಿ.ಪೂ. 3ನೆಯ ಶತಮಾನದವರೆಗೆ ಅಸ್ತಿತ್ವದಲ್ಲಿತ್ತೆಂದು ವಿದ್ವಾಂಸರು ನಿರ್ಧರಿಸಿದ್ದಾರೆ. ಪ್ರಸ್ತುತ ಕಾಳನಾಯಕನಹಳ್ಳಿಯಲ್ಲಿ ಪತ್ತೆಯಾಗಿರುವ ಮಣ್ಣಿನ ಗೊಂಬೆಗಳು ಸುಮಾರು ಕ್ರಿ.ಪೂ.

---

1. ದಕ್ಷಿಣ ಭಾರತದ ಇತಿಹಾಸ : ಡಾ|| ಬಿ. ಮುದ್ದಾಚಾರಿ. ಪುಟ. 61
2. ಕರ್ನಾಟಕದ ಇತಿಹಾಸ : ಡಾ|| ಆರ್. ಎಸ್. ಪಂಚಮುಖಿ. ಪುಟ. 54
3. ಕರ್ನಾಟಕದ ಇತಿಹಾಸ : ಡಾ|| ಆರ್. ಎಸ್. ಪಂಚಮುಖಿ. ಪುಟ. 56
4. ಕರ್ನಾಟಕದ ಇತಿಹಾಸ : ಡಾ|| ಆರ್. ಎಸ್. ಪಂಚಮುಖಿ. ಪುಟ. 57

1. ದಕ್ಷಿಣಭಾರತದ ಇತಿಹಾಸ : ಡಾ|| ಬಿ. ಮುದ್ದಾಚಾರಿ. ಪುಟ, 57
2. ಭಾರತದ ಇತಿಹಾಸ : ಮೂಲ. ಕ. ಅಂತೋನವ. ಜಿ. ಬೊಂಗಾರ್ದ್-ಲೆವಿನ್, ಅನು : ಕೆ. ಎಲ್. ಗೋಪಾಲ ಕೃಷ್ಣರಾವ್. ಪುಟ. 14

1000 ದ ಕಾಲದ್ದೆಂದು ನಿರ್ಧರಿಸಬಹುದು ಕರ್ನಾಟಕದ ಹಲವಾರು ಪ್ರದೇಶಗಳಲ್ಲಿ ಬೃ. ಶಿ. ಯುಗದ ಸಮಾಧಿಗಳು ಇದುವರೆಗೂ ಪತ್ತೆಯಾಗಿವೆ. ಬೆಂಗಳೂರು ಜಿಲ್ಲೆಯಲ್ಲಿಯೂ ಹಲವಾರು ನಿವೇಶನಗಳು ಪತ್ತೆಯಾಗಿದ್ದರೂ ಸಹ ಒಂದರಲ್ಲಿಯೂ ಈ ಕಾಲದ ಮಣ್ಣಿನ ಗೊಂಬೆಗಳು ಪತ್ತೆಯಾದ ವರದಿಯಾಗಿಲ್ಲದಿರುವುದು ಗಮನಾರ್ಹ ಸಂಗತಿ. ಆದ್ದರಿಂದ ಪ್ರಸ್ತುತ ಕಾಳನಾಯಕನ ಹಳ್ಳಿಯಲ್ಲಿ ಪತ್ತೆಯಾಗಿರುವ ಮಣ್ಣಿನ ಗೊಂಬೆಗಳು ಪ್ರಾಮುಖ್ಯತೆ ಪಡೆದು ಕೊಂಡಿವೆ. ಕಾಳನಾಯಕನ ಹಳ್ಳಿಯ ನಿವೇಶನದಲ್ಲಿ ಉತ್ಖನನ (ಎಕ್ಸ್‌ಕವೇಷನ್) ನಡೆಸಿದರೆ ಅಮೂಲ್ಯವಾದ ವಿಷಯಗಳು ಹೊರಬರಬಹುದು.[3]



ಕಾಳನಾಯಕನ ಹಳ್ಳಿಯಲ್ಲಿ ದೊರೆತ ಮಣ್ಣಿನ ಗೊಂಬೆಗಳು

3. ಕಾಳನಾಯಕನಹಳ್ಳಿಯ ಕ್ಷೇತ್ರಕಾರ್ಯದ ವೇಳೆಯಲ್ಲಿ ನನ್ನೊಡನಿದ್ದು ಸಹಾಯ ಮಾಡಿದ ಪುಟಾಣಿಗಳಾದ ಎಸ್. ಚಿತ್ರ, ಎಸ್. ರಾಜೇಂದ್ರ, ವೀಣಾ, ಇವರನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ವೀರಶೈವದರ್ಶನ–ಒಂದು ಪಕ್ಷಿನೋಟ

ಡಾ॥ ಟಿ. ಬಿ. ಬಸವರಾಜು

ತಾತ್ತ್ವಿಕ ಇತಿಹಾಸದಲ್ಲಿ ವೀರಶೈವದರ್ಶನವು ತನ್ನದೇ ಆದ ಮಹತ್ತ್ವದ ಸ್ಥಾನವನ್ನು ಪಡೆದುಕೊಂಡಿದೆ. ಅತ್ಯಂತ ಪ್ರಾಚೀನ ದರ್ಶನವೆಂದು ಹೇಳಬಹುದಾದರೂ, ಈ ದರ್ಶನದ 'ಕಾಲವನ್ನು' ಖಚಿತವಾಗಿ ಹೇಳಲುಬಾರದು ! ಶಿವನ ಪಾರಮ್ಯವನ್ನು ಸಾಧಿಸುವ ಶೈವದರ್ಶನವೇ ವೀರಶೈವದರ್ಶನಕ್ಕೆ ಮೂಲವೆಂದು ಹೇಳಬಹುದಾಗಿದೆ, ಅಷ್ಟೇ !!

ಪಂಚಾಚಾರ್ಯರೆಂದೇ ಹೆಸರಾಗಿರುವ ರೇವಣರಾಧ್ಯ, ಮರುಳಾರಾಧ್ಯ, ಏಕೋರಾಮಾರಾಧ್ಯ, ಪಂಡಿತಾರಾಧ್ಯ ಹಾಗೂ ವಿಶ್ವಾರಾಧ್ಯರು ವೀರಶೈವದರ್ಶನದ ಸ್ಥಾಪಕರೆಂದು ನಂಬಲಾಗಿದೆ.[1] ಈ ದರ್ಶನದ ಅತ್ಯಮೂಲ್ಯ ಆಧಾರ ಗ್ರಂಥಗಳು ಯಾವುವೆಂದರೆ, 'ಇಪ್ಪತ್ತೆಂಟು ಶೈವಾಗಮಗಳು ಹಾಗೂ ಇನ್ನೂರಿಪ್ಪತ್ತೈದು ಉಪಾಗಮಗಳು, ಅಲ್ಲಮಪ್ರಭು, ಚೆನ್ನಬಸವಣ್ಣ, ಬಸವಣ್ಣ, ಸಿದ್ಧರಾಮ, ಮಹಾದೇವಿಯಕ್ಕ, ಲಿಂಗಮ್ಮ ಮುಂತಾದವರ ಅನುಭಾವಿ ವಚನಗಳು ಮತ್ತು ಶಿವಾಗ್ರಯೋಗಿ ಶಿವಾಚಾರ್ಯ, ನೀಲಕಂಠ ಶಿವಾಚಾರ್ಯ, ಮಗ್ಗೆಯ ಮಾಯಿದೇವ, ಮರಿತೋಂಟದಾರ್ಯ...... ಮೊದಲಾದವರ ಕೃತಿಗಳು.

೧

ವೀರಶೈವದರ್ಶನದ ಪರಾತ್ಪರ ವಸ್ತುವೆಂದರೆ 'ಲಿಂಗ'. 'ಲಿಂಗ'ವೆನ್ನುವ ಶಬ್ದ 'ಲಿ' ಹಾಗೂ 'ಗಮ್' ಎಂಬ ಎರಡು ಧಾತುಗಳಿಂದ ನಿಷ್ಪನ್ನವಾಗಿರುವುದು. 'ಲೀ' ಪದವು 'ಐಕ್ಯವಾಗುವಿಕೆ' 'ಲೀನವಾಗುವಿಕೆ' ಎನ್ನುವ ಅರ್ಥವನ್ನು ನೀಡಿದರೆ, 'ಗಮ್' ಶಬ್ದವು 'ಉದ್ಭವಿಸುವುದು' 'ಸೇರು' ಎನ್ನುವ ಅರ್ಥ ಹೊಂದಿದೆ. ಒಟ್ಟಾರೆ ಸೃಷ್ಟಿ, ಸ್ಥಿತಿ ಹಾಗೂ ಲಯಗಳಿಗೆ ಕಾರಣವಾಗಿರುವುದೇ 'ಲಿಂಗ'; ಇದನ್ನು 'ಬಯಲು'

1. ವೀರಶೈವ ಧರ್ಮದ ಸ್ಥಾಪಕರ ಬಗ್ಗೆ ಖಚಿತವಾಗಿ ತೀರ್ಮಾನವನ್ನು ತೆಗೆದುಕೊಂಡಿಲ್ಲ. ಬಸವ ಪುರಾಣವು ತಿಳಿಸುವಂತೆ ನಂದಿಯ ಅವತಾರ ಬಸವೇಶ್ವರನೇ ಈ ಧರ್ಮದ ಸಂಸ್ಥಾಪಕ. ಪಾಲ್ಕುರಿಕೆ ಸೋಮನಾಥ, ಚಾಮರಸ ಮುಂತಾದವರು ಇಂದು ವಿಖ್ಯಾತರಾಗಿರುವ ಬಸವಣ್ಣನವರೇ ಈ ಧರ್ಮದ ಪ್ರವರ್ತಕರೆಂದೇ ತಿಳಿಸಿದ್ದಾರೆ.

'ಶೂನ್ಯ' 'ಸ್ಥಲ', 'ನಿಷ್ಕಲಲಿಂಗ' ಎಂದೂ ಕರೆಯುತ್ತಾರೆ. ಲಿಂಗವನ್ನು ಅನುಭೂತಿಯಿಂದಲೇ ಸಾಧ್ಯಮಾಡಿಕೊಳ್ಳಬಹುದಾದುದರಿಂದ, 'ಶಬ್ದ'ಕ್ಕೆ ಅತೀತವಾಗಿರುವುದರಿಂದ ಇದನ್ನು 'ಬಯಲು' ಎಂದು ಶರಣರು ಕರೆದಿದ್ದಾರೆ. ಪರಾತ್ಪರ ವಸ್ತುವು ನಾಮರೂಪ ತತ್ತ್ವಗಳಿಗೆ ಅತೀತವಾಗಿ, ಸರ್ವಭಾವಾತ್ಮಕ, ಅಭಾವಾತ್ಮಕ ಗುಣಗಳೆಲ್ಲವನ್ನೂ ಮೀರಿನಿಂತು, ನಾದ, ಬಿಂದು, ಕಲೆಗಳಿಗೆ ಅತೀತವಾಗಿರುವುದರಿಂದ ಅಂತಿಮ ಸತ್ಯದ ಸ್ವಭಾವ ಸಿದ್ಧ ಸ್ಥಿತಿಯನ್ನು 'ಸರ್ವಶೂನ್ಯ ನಿರಾಲಾಂಬವೆಂದು' ಕರೆಯಲಾಗಿದೆ. ಈ ಸ್ಥಿತಿಯನ್ನು ಕುರಿತು ಅಲ್ಲಮಪ್ರಭುಗಳು ತಮ್ಮ ವಚನವೊಂದರಲ್ಲಿ ಹೀಗೆ ಹೇಳಿದ್ದಾರೆ :

> 'ಆದಿ ಅನಾದಿ ಇಲ್ಲದಂದು, ಹಮ್ಮುಬಿಮ್ಮುಗಳಿಲ್ಲದಂದು,
> ಸುರಾಳನಿರಾಳವಿಲ್ಲದಂದು, ಶೂನ್ಯನಿಶೂನ್ಯವಿಲ್ಲದಂದು,
> ಸಚರಾಚರವೆಲ್ಲ ರಚನೆಗೆ ಬಾರದಂದು ಗುಹೇಶ್ವರಾ
> ನೀನೊಬ್ಬನೇ ಇದ್ದೆಯಲ್ಲ ಇದ್ದೂ ಇಲ್ಲದಂತೆ !'.

ಸರ್ವಶೂನ್ಯನಿರಾಲಾಂಬ ಸ್ಥಿತಿಯು ಆದಿಶಂಕರರು ತಮ್ಮ ಅದ್ವೈತದರ್ಶನದಲ್ಲಿ ಪ್ರತಿಪಾದಿಸುವ 'ನಿರ್ಗುಣಬ್ರಹ್ಮನಿಗೆ' ಅನುರೂಪವಾಗಿದೆಯೆಂದೇ ಹೇಳಬಹುದು, ಈ ಸ್ಥಿತಿಯು ಮುಂದಿನ ಹಂತವನ್ನು ನಿಷ್ಕಲಲಿಂಗವೆಂದೇ ತೋಂಟದ ಸಿದ್ಧಲಿಂಗೇಶ್ವರರು ಕರೆದಿದ್ದಾರೆ. ನಿಷ್ಕಲಲಿಂಗವು ನಿರಾಕಾರ, ಅಚಿಂತ್ಯ, ಅದ್ವಿತೀಯ ಮತ್ತು ಅನಿರ್ವಚನೀಯ. ನಿಷ್ಕಲಲಿಂಗವನ್ನು ವರ್ಣಿಸುತ್ತಾ ಗೂಳೂರ ಸಿದ್ಧವೀರಣ್ಣೊಡೆಯರು, 'ಅಖಂಡ', 'ಅದ್ವಯ', 'ಅನುಪಮ' 'ನಿರವಯ' 'ನಿರಂಜನ', ಸರ್ವಶೂನ್ಯವನ್ನೊಳಗೊಂಡ ಸಚ್ಚಿದಾನಂದ ನಿತ್ಯಪರಿಪೂರ್ಣವನ್ನೊಪ್ಪ ನಿಷ್ಕಲ ಲಿಂಗವೂ ಎಂದೇ ಹೇಳುತ್ತಾರೆ. ಈ ಸ್ಥಿತಿಯಲ್ಲಿದ್ದ 'ಅಂತಿಮ ತತ್ತ್ವದಲ್ಲಿ ನೆನಹು, ಚಿಂತಾ, ಇಚ್ಛಾ ಉದಯವಾದ ನಂತರ ಮಹಾಲಿಂಗ ಸ್ಥಿತಿಯು ಏರ್ಪಡುತ್ತದೆ. ಪರಾತ್ಪರ ವಸ್ತುವಿನಲ್ಲಿ ಅವಿನಾಭಾವದಿಂದಿದ್ದರೂ ಅಮೂರ್ತವೆನಿಸಿದ ಚಿಚ್ಛಕ್ತಿ ಈ ಸ್ಥಿತಿಯಲ್ಲಿ ಸ್ವಲ್ಪಮಟ್ಟಿಗೆ ಮೂರ್ತಗೊಳ್ಳುತ್ತದೆ. ಮಹಾಲಿಂಗವು ಜಗತ್ತಿನ ಸೃಷ್ಟಿ, ಸ್ಥಿತಿ, ಲಯ ಮೊದಲಾದವುಗಳಿಗೆ ಕಾರಣವಾಗಿ ಸರ್ವಕ್ಕೂ ಆಶ್ರಯವಾಗಿರುತ್ತದೆ ಎನ್ನುವುದು ಇಲ್ಲಿ ಮುಖ್ಯ ಅಂಶ. ಈ ಮಹಾಲಿಂಗವು ಸಚ್ಚಿದಾನಂದ ಸ್ವರೂಪವೆನಿಸಿ, ನಿತ್ಯಪೂರ್ಣ, ಅಣುವಿಗಿಂತಲೂ ಅಣು, ಮಹತ್ತಿಗಿಂತಲೂ ಮಹತ್, ಅಚಿಂತ್ಯ, ಅನಿರ್ವಚನೀಯವಾಗಿ ಎಲ್ಲವನ್ನೂ ಮೀರಿ ನಿಂತಿರುತ್ತದೆ.

ಆದಿಯಲ್ಲಿ ಅದ್ವಿತೀಯ, ಸಚ್ಚಿದಾನಂದ ಸ್ವರೂಪವಾಗಿದ್ದ ನಿಷ್ಕಲಲಿಂಗವು ಶಕ್ತಿಯೊಡನೆ ಅವಿನಾಭಾವ ಸಂಬಂಧವನ್ನು ಹೊಂದಿ ಒಡವೆರೆದು ಒಂದಾಗಿತ್ತು. ಹೂವಿನಲ್ಲಿ ಪರಿಮಳವಿರುವ ಹಾಗೆ ಶಕ್ತಿಯು ಪರತತ್ತ್ವದೊಡನೆ ಅನನ್ಯ ಸಂಬಂಧವನ್ನು ಹೊಂದಿತ್ತು. ಅದೇ ಚಿಚ್ಛಕ್ತಿ. ಆದರೆ ಚನ್ನಬಸವಣ್ಣನವರು ಸೃಷ್ಟಿಯ

ವಿಕಾಸವನ್ನು ಬೇರೆ ರೀತಿಯಲ್ಲಿ ವಿಶ್ಲೇಷಿಸಿದ್ದಾರೆ. ಇದಕ್ಕನುಗುಣವಾಗಿ ಅವರು ಐದು ತತ್ತ್ವಗಳನ್ನು ಹೇಳಿದ್ದಾರೆ. ಅವುಗಳು 'ಶಿವ', 'ಶಕ್ತಿ' ಸದಾಶಿವ, ಈಶ್ವರ ಹಾಗೂ ಸದ್ವಿದ್ಯಾ. ಇವುಗಳನ್ನು ಅವರು ಶಿವತತ್ತ್ವವೆಂದು ಕರೆದಿದ್ದಾರೆ. ಶಿವತತ್ತ್ವದಲ್ಲಿ ಚಿಚ್ಛಕ್ತಿಯು ಪ್ರಾಮುಖ್ಯವಾದುದು. ಅಲೌಕಿಕವೆನಿಸಿದ ಈ ತತ್ತ್ವ ಪರಾಶಕ್ತಿಯೊಡನೆ ಸೇರಿದಾಗ ಪ್ರಸಾದಲಿಂಗ; ಆದಿಶಕ್ತಿಯು ಪ್ರಾಮುಖ್ಯವಾಗಿರುವ ಶಕ್ತಿಯು ಚರಲಿಂಗ; ತೃತೀಯ ವರ್ಗವು ಸದಾಶಿವತತ್ತ್ವ, ಇಚ್ಛಾಶಕ್ತಿಯು ಇಲ್ಲಿ ಪ್ರಾಮುಖ್ಯವೆನಿಸಿರುವುದು; ಇದು ಶಿವಲಿಂಗ ಜ್ಞಾನವೇ ಹೌದು; ಪ್ರಧಾನವೆನಿಸಿರುವ ನಾಲ್ಕನೇ ತತ್ತ್ವ ಈಶ್ವರ. ಇದು ಜ್ಞಾನಶಕ್ತಿಯುಳ್ಳ ಗುರುಲಿಂಗ; ಕ್ರಿಯಾಶಕ್ತಿಯು ಪ್ರಧಾನವೆನಿಸಿರುವ ಪಂಚಮ ತತ್ತ್ವವೇ ಸದ್ವಿದ್ಯೆ; ಇದು ಕ್ರಿಯಾಶಕ್ತಿಯುಳ್ಳ ಆಚಾರಲಿಂಗ; ಮುಂದಿನ ಮಿಕ್ಕ ಗುಂಪು, 'ಮಾಯಾ' 'ಕಾಲ', 'ನಿಯತಿ', 'ರಾಗ', 'ವಿದ್ಯಾ', 'ಕಲಾ' ಹಾಗೂ ಪುರುಷ ತತ್ತ್ವದಿಂದ ಕೂಡಿರುವುದು; ಇದನ್ನು ಚಿದಚಿತ್ ತತ್ತ್ವವೆಂದೂ, ಶುದ್ಧಾಶುದ್ಧ ತತ್ತ್ವಗಳೆಂದು ವಿವರಿಸಲಾಗಿದೆ.

ವೀರಶೈವ ದರ್ಶನದಲ್ಲಿ ಕಲಾಶಕ್ತಿಯು 'ಅವಿದ್ಯೆ' ಎನಿಸಲ್ಪಟ್ಟಿದೆ. ಅದು ಮಾಯೆಯಂತೆ ತೋರುವುದರಿಂದ ಹಾಗೆ ಕರೆಯಲಾಗಿದೆ. ಸಿದ್ಧಾಂತ ಶಿಖಾಮಣಿಯು ಪ್ರತಿಪಾದಿಸುವಂತೆ ಇದು 'ಶಿವ' ಹಾಗೂ 'ಜೀವನನ್ನು ಪ್ರತ್ಯೇಕಿಸುತ್ತದೆ. ಈಶ್ವರನ 'ನಿತ್ಯತ್ವ', 'ವ್ಯಾಪಕತ್ವ', 'ಪೂರ್ಣತ್ವ', 'ಸರ್ವಜ್ಞತ್ವ', ಸರ್ವ ಕರ್ತೃತ್ವಗಳು ಸಂಕೋಚಗೊಂಡು, ಕಾಲ 'ನಿಯತಿ', 'ರಾಗ', 'ವಿದ್ಯೆ' ಹಾಗೂ 'ಕಲೆ'ಗಳಾಗುತ್ತವೆ. ಇಲ್ಲಿ 'ಈಶ್ವರನು' ಪರಿಚ್ಛಿನ್ನನಾಗುತ್ತಾನೆ.

ಪುರುಷ ತತ್ವದಿಂದ ಆರಂಭವಾಗುವ ಸೃಷ್ಟಿಯ ಕ್ರಮವನ್ನು ಚೆನ್ನಬಸವಣ್ಣನವರ 'ಕರಣಹಸಿಗೆ'ಯಲ್ಲಿ ವಿಭಿನ್ನವಾಗಿ ವಿವರಿಸಲಾಗಿದೆ.

ಪ್ರಕೃತಿಯಿಂದ ಪೃಥ್ವಿಯವರೆಗಿನ ಮುಂದಿನ ಇಪ್ಪತ್ತನಾಲ್ಕು ತತ್ವಗಳನ್ನು [ಇವುಗಳು ಅಶುದ್ಧ ಅಥವಾ ಅಚಿತ್ ತತ್ವಗಳು] ಹೀಗೆ ಗುರುತಿಸಬಹುದು.

ನಿಷ್ಕಲ ಶಿವ
|
ಮಹಾಲಿಂಗ
|
ಶಿವ — ಶಕ್ತಿ [ವಿಮರ್ಶೆ]
|
ಸಾದಾಖ್ಯ ಅಥವಾ ಸದಾಶಿವ
|
ಈಶ್ವರ
|
ಸದ್ವಿದ್ಯಾ [ಶುದ್ಧವಿದ್ಯಾ]

(ಶಕ್ತಿ … ಸದ್ವಿದ್ಯಾ): ಶುದ್ಧ ಅಥವಾ ಚಿತ್ ತತ್ವಗಳು

ಶುದ್ಧಾಶುದ್ಧ (ಚಿದಚಿತ್) ತತ್ತ್ವಗಳೆಂದರೆ ಮಾಯಾ, ಕಾಲ, ನಿಯತಿ, ಕಲಾ, ವಿದ್ಯಾ, ರಾಗ, ಹಾಗೂ ಪುರುಷ–ಶುದ್ಧಾಶುದ್ಧ [ಚಿದಚಿತ್] ತತ್ತ್ವಗಳು; ಅಶುದ್ಧ ತತ್ತ್ವಗಳೆಂದರೆ ಪ್ರಕೃತಿ, ಬುದ್ಧಿ, ಅಹಂಕಾರ, ಮನಸ್ಸು, ಚಕ್ಷು, ಶ್ರೋತ್ರ, ನಾಸಿಕ, ರಸನಾ, ತ್ವಕ್, ವಾಕ್, ಪಾಣಿ, ಪಾದ, ಪಾಯು, ಉಪಸ್ಥ, ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಆಕಾಶ, ವಾಯು, ಅಗ್ನಿ, ಅಪ್, ಪೃಥ್ವೀ, ಈ ದರ್ಶನದಲ್ಲಿ ಪ್ರಪಂಚ ವಿಕಾಸವನ್ನು ಕುರಿತಂತೆ ಅವಿಕೃತ ಪರಿಣಾಮವನ್ನು ಒಪ್ಪಿಕೊಂಡಿರುವುದು ಕಂಡುಬರುತ್ತದೆ.

ವೀರಶೈವ ದರ್ಶನದಲ್ಲಿ ಜೀವಾತ್ಮನ ಸ್ವರೂಪವು ಸ್ವತಃ ಪವಿತ್ರ, ನಿತ್ಯ, ಸರ್ವಜ್ಞ ಹಾಗೂ 'ಶಿವ' ಸ್ವರೂಪವೇ ಹೌದು! ಹೇಗೆ ಬೆಂಕಿಯ ಕಿಡಿಗಳು ಬೆಂಕಿಯಿಂದ ಬೇರೆ ಎನಿಸಲಾರವೋ ಅದೇ ರೀತಿ ಜೀವಾತ್ಮ ಪರಶಿವನಿಗಿಂತ ಭಿನ್ನವಲ್ಲ, ಆತ್ಮನು ಜೀವಾತ್ಮನಾಗಲು ಕಾರಣ ಶಿವಲೀಲೆ, ಈ ಕಾರಣದಿಂದಲೇ ಇಚ್ಛಾ, ಕ್ರಿಯಾ, ಜ್ಞಾನಶಕ್ತಿಗಳು ಸಂಕುಚಿಸಿ ಆತ್ಮನು ಜೀವಾತ್ಮನಾಗುವನು. ಶಾಶ್ವತನಾದ ಪರಮಾತ್ಮನೊಬ್ಬನೇ ಸತ್ಯ ಅರ್ಥಾತ್ ಜೀವಾತ್ಮ ವಾಸ್ತವವಾಗಿ ಪರಮಾತ್ಮನೇ ಆಗಿದ್ದಾನೆ.

ಈ ದರ್ಶನವು ಮಲತ್ರಯವನ್ನು ಸ್ವೀಕರಿಸಿದೆ. ಆಣವ, ಕರ್ಮ, ಹಾಗೂ ಮಾಯಾ–ಇವುಗಳೇ ಮಲತ್ರಯಗಳು. ಶಿವನು ತನ್ನ ಲೀಲೆಯಿಂದ ಸ್ವತಃ ತನ್ನ ಶಕ್ತಿಯನ್ನು ಸಂಕುಚಿತಗೊಳಿಸಿಕೊಂಡು ಜೀವಾತ್ಮನಾಗುವನು; ಈ ಬಗೆಯ ಸಂಕುಚಿತಗೊಳಿಸಲ್ಪಟ್ಟ ಶಿವನ ಇಚ್ಛಾಶಕ್ತಿಯೇ ಆಣವಮಲ, ಅಂತೆಯೇ ಇದರ ಪರಿಣಾಮವಾಗಿ ಅನಂತನೆನಿಸಿದ ಆತ್ಮನು ಪರಿಚ್ಛಿನ್ನನಾಗುವನು; ಸಂಕುಚಿತಗೊಳಿಸಲ್ಪಟ್ಟ ಶಿವನ ಜ್ಞಾನಶಕ್ತಿಯು ಮಾಯಾಮಲವಾಗುತ್ತದೆ. ತತ್ಪರಿಣಾಮವಾಗಿ ಆತ್ಮನ ಸರ್ವಜ್ಞತ್ವವು ಅಲ್ಪತೆಯನ್ನು ಹೊಂದುವುದು! ಶಿವನ ಕ್ರಿಯಾಶಕ್ತಿ ಸೀಮಿತಗೊಂಡು ಕರ್ಮಫಲವೆನಿಸುವುದು. ಜೀವಾತ್ಮನ ಇಚ್ಛಾಶಕ್ತಿಯು ಸಂಕುಚಿತಗೊಂಡು ತನ್ನ ಕರ್ಮಕ್ಕೆ ಅನುಗುಣವಾಗಿ ಫಲವನ್ನು ಅನುಭವಿಸುವುದು!

೩

ವೀರಶೈವ ದರ್ಶನದಲ್ಲಿ ಮೋಕ್ಷ ಪ್ರಾಪ್ತಿಗಾಗಿ ಸಾಧಕನು ಅಧ್ಯಾತ್ಮ ಪಥಕ್ಕೆ ಅಡಿಯಿಡುವ ಪ್ರಥಮ ಹೆಜ್ಜೆಯಾಗಿ 'ದೀಕ್ಷೆ' ಪಡೆಯಬೇಕು. ಕರ್ಮ, ಮಾಯಾ, ಹಾಗೂ ಆಣವವೆಂಬ ಮಲತ್ರಯಗಳನ್ನು ಹೋಗಲಾಡಿಸಲು ಸದ್ಗುರುವು ಕ್ರಿಯಾ, ಮಂತ್ರ ಹಾಗೂ ವೇಧಾದೀಕ್ಷೆಗಳ ಮೂಲಕವಾಗಿ ಸಾಧಕನಿಗೆ ಅನುಕ್ರಮವಾಗಿ ಇಷ್ಟಲಿಂಗ, ಪ್ರಾಣಲಿಂಗ, ಹಾಗೂ ಭಾವಲಿಂಗಗಳನ್ನು ಅನುಗ್ರಹಿಸುತ್ತಾನೆ. ಇಲ್ಲಿ ಯಾವುದೇ ಜಾತಿ, ಮತ, ವರ್ಗಭೇದವಿಲ್ಲದೆ ಎಲ್ಲರೂ ದೀಕ್ಷೆಯನ್ನು ಹೊಂದಬಹುದಾಗಿದೆ. ದೀಕ್ಷೆಯನ್ನು ಪಡೆದ ಸಾಧಕ ತನ್ನ ಇಷ್ಟಲಿಂಗವನ್ನು ಮಾತ್ರ ಪೂಜಿಸಬೇಕು! ದೇವಾಲಯಗಳಿಗೆ ತೆರಳುವ ಅಗತ್ಯವಿಲ್ಲ! ಮೂಢನಂಬಿಕೆ, ಆಚರಣೆಗಳಿಂದ ಮುಕ್ತ

ವಾಗಬೇಕು ; ಯೋಗ್ಯ ಗುರುವು ಸಾಧಕನ ಸಾಧನೆಗನುಸಾರವಾಗಿ ದೀಕ್ಷಾಗುರು, ಶಿಕ್ಷಾಗುರು, ಹಾಗೂ ಮೋಕ್ಷ ಗುರುಗಳಾಗಿ ಆಧ್ಯಾತ್ಮಿಕ ಉನ್ನತಿಗೆ ಸಹಾಯ ಮಾಡುವನು.

ಈ ದರ್ಶನದಲ್ಲಿ ಭಕ್ತಿ, ಜ್ಞಾನ ಕ್ರಿಯೆಗಳಿಗೆ ಸಮಾನವಾದ ಪ್ರಾಮುಖ್ಯತೆ ಉಂಟು; ಈ ಮೂರರ ಪರಿಪೂರ್ಣ ಸಂಬಂಧವು ದೇವರೊಡನೆ ಐಕ್ಯವನ್ನು ಹೊಂದಲು ಮತ್ತು ಆಧ್ಯಾತ್ಮಿಕ ಪ್ರಗತಿಯನ್ನು ಬೇಗ ಸಾಧಿಸಲು ನೆರವಾಗುತ್ತದೆ. ವೀರಶೈವ ದರ್ಶನದಲ್ಲಿ ಜಗತ್ತು ಸತ್ಯವೆಂದು ಪ್ರತಿಪಾದಿತವಾಗಿರುವುದರಿಂದ ಮೋಕ್ಷವನ್ನು ಬಯಸುವ ಸಾಧಕನು ಜಗತ್ತನ್ನು ನಿರಾಕರಿಸಬೇಕಿಲ್ಲ. ಸ್ಥೂಲ, ಸೂಕ್ಷ್ಮ ಹಾಗೂ ಕಾರಣ ಶರೀರಗಳಲ್ಲಿ ತ್ರಿವಿಧಲಿಂಗಗಳನ್ನು, ಷಡಿಂದ್ರಿಯಗಳಲ್ಲಿ ಷಡ್‌ಲಿಂಗಗಳನ್ನು ಜಾಗೃತಗೊಳಿಸುವುದರ ಮೂಲಕ ಸಾಧಕನು ಪಾವಿತ್ರ್ಯವನ್ನು ಪಡೆಯುತ್ತಾನೆ. ಅರ್ಚನೆ ಹಾಗೂ ಅರ್ಪಣೆಗಳಿಂದ ಜಗತ್ತಿನ ಪಡಿಪದಾರ್ಥಗಳ ನ್ಯೂನತೆಯು ಹೊರಟು ಹೋಗಿ, ಸಾಧಕನು ಅವುಗಳನ್ನು ಪ್ರಸಾದ ರೂಪದಿಂದ ಲಿಂಗಭೋಗೋಪಭೋಗಿಯಾಗಿ ಸೇವಿಸುವ ಕಾರಣದಿಂದ ಭವಬಂಧನಕ್ಕೆ ಅತೀತ ಎನಿಸುತ್ತಾನೆ.

ವೀರಶೈವ ದರ್ಶನ ಪ್ರತಿಪಾದಿಸುವ ಆವರಣವು ಈ ಭವಸಾಗರವನ್ನು ದಾಟಲು ನೆರವಾಗುವುದು. ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಹಾಗೂ ಮಹಾಮಂತ್ರ—ಇವು 'ಅಷ್ಟಾವರಣ'ಗಳೆಂದು ಹೆಸರಾಗಿವೆ. ಪಾರಿಭಾಷಿಕವಾಗಿ ಅಷ್ಟಾವರಣಗಳ ಬಗೆಗೆ ಹೇಳುವುದಾದರೆ ಯೋಗ್ಯಗುರುವಿನ ಬೋಧನೆಯನ್ನು ಅನುಷ್ಠಾನಗೊಳಿಸುವುದು ಭಕ್ತಿತುಂಬಿದ ಅಚಲ ನಿಷ್ಠೆಯಿಂದ ಲಿಂಗವನ್ನು ಪೂಜಿಸುವುದು, ಭಕ್ತರನ್ನು ಉದ್ಧರಿಸಲೆಂದೇ ಸಂಚಾರಮಾಡುವ ಮಹಾ ಜ್ಞಾನಿ ಜಂಗಮನಲ್ಲಿ ಶರಣು ಹೋಗುವುದು ; ರುದ್ರಾಕ್ಷಿಧಾರಣೆ, ಭಸ್ಮಧಾರಣೆ, ಪಾದೋದಕ ಸ್ವೀಕಾರ, ಪಡಿಪದಾರ್ಥಗಳನ್ನು ಲಿಂಗಕ್ಕೆ ಅರ್ಪಣೆ ಮಾಡಿ ಅದನ್ನು ಪ್ರಸಾದವೆಂದು ಸ್ವೀಕರಿಸುವುದಲ್ಲದೆ, ಪರತತ್ತ್ವಸ್ವರೂಪ ಮಹಾಮಂತ್ರದ ಪುರಶ್ಚರಣೆಗಳೆಂಬ ಎಂಟು ಸಾಧನಗಳು ಸಾಧಕನು ಸತ್ಯಾನ್ವೇಷಣೆಯಲ್ಲಿ ಔನ್ನತ್ಯವನ್ನು ಸಾಧಿಸಲು ಕ್ರಿಯಾಶೀಲವಾಗಿ ನೆರವಾಗುವುವು.

ಸಾಧಕನು ಸಾಧನೆಯ ಪ್ರಾರಂಭಾವಸ್ಥೆಯಲ್ಲಿ ಪೂಜ್ಯ–ಪೂಜಕವೆಂಬ ಭೇದವನ್ನುಳ್ಳ ದ್ವೈತಭಾವವಿರುತ್ತದೆ. ಅನಂತರ ಸಾಧನೆಯ ಪ್ರಗತಿಗೆ ಅನುಸಾರವಾಗಿ ಸಾಧಕನು ಲಿಂಗದೊಡನೆ ಸಮರಸವನ್ನು ಸಾಧಿಸಿದಂತೆ ಈ ಭೇದವು ಇಲ್ಲವಾಗುತ್ತದೆ. ಈ ಬಗೆಯ ಸಾಧನಾವಿಕಾಸವನ್ನು ಷಟ್‌ಸ್ಥಲಗಳನ್ನಾಗಿ ವಿಂಗಡಿಸಿದ್ದಾರೆ. ಅವುಗಳು ಇಂತಿವೆ :—

ಭಕ್ತ
|
ಮಹೇಶ
|
ಪ್ರಸಾದಿ
|
ಪ್ರಾಣಲಿಂಗಿ
|
ಶರಣ
|
ಐಕ್ಯ

ಭಕ್ತನು ಪವಿತ್ರವಾದ, ಉದಾತ್ತವಾದ ಬದುಕನ್ನು ತನ್ನದಾಗಿಸಿಕೊಂಡು ಗುರುವಿನಿಂದ ಪಡೆದ ಇಷ್ಟಲಿಂಗವನ್ನು ಭಕ್ತಿಯಿಂದ, ನಿಷ್ಠೆಯಿಂದ, ಆರಾಧಿಸಬೇಕು. ಈ ಬಗೆಯ ಭಕ್ತಿಯು ಶ್ರದ್ಧಾಭಕ್ತಿ ಎನಿಸುವುದು ; ಬಸವಣ್ಣನವರು ಐಕ್ಯಸ್ಥಲದ ಪ್ರತಿನಿಧಿ ಎನಿಸಿದ್ದಾರೆ. ಬಸವಣ್ಣನವರು ಐಕ್ಯಸ್ಥಲದ ಉನ್ನತಸ್ಥಿತಿಗೇರಿದ್ದರೂ, ಜಗತ್ತಿನ ಉದ್ಧಾರಕ್ಕಾಗಿ ಭಕ್ತಸ್ಥಲದಲ್ಲಿಯೇ ನಿಂತು ಸಕಲರ ಲೇಸಿಗಾಗಿ ದುಡಿದರೆನ್ನುವುದು ಗಮನಾರ್ಹ.

ಈ ಮೇಲೆ ವಿವರಿಸಿದ ಸಾಧನೆಗೆ ಅನುಗುಣವಾಗಿ ನಡೆಯುವ ಸಾಧಕನು ಇಷ್ಟ ಲಿಂಗದಲ್ಲಿ ಸ್ಥಿರವಾದ, ಅಚಲಭಕ್ತಿಯನ್ನು ಹೊಂದಿ ವಿಕಾಸವಾಗಬೇಕು. ವಿಕಾಸಗೊಂಡ ಈ ಹಂತವು ನಿಷ್ಠಾಭಕ್ತಿಯೆಂದೆನಿಸಿಕೊಳ್ಳುತ್ತದೆ. ಮಡಿವಾಳ ಮಾಚಿದೇವರು ಈ ಸ್ಥಲದ ನಿರೂಪಕರಾಗಿದ್ದಾರೆ. ಅಚಲ ಅವಧಾನ ಭಕ್ತಿಯಿಂದ ಕಾಯಕನಿಷ್ಠನಾದ ಭಕ್ತನು ಲಿಂಗವನ್ನು ಪೂಜಿಸುತ್ತಾ ಮುಂದುವರಿಯುವನು. ಈ ಹಂತದ ಸ್ಥಲವು 'ಪ್ರಸಾದಿ' ಸ್ಥಲವೆಂದು ಹೆಸರಾಗಿದೆ. ಚೆನ್ನಬಸವಣ್ಣನವರು ಇದರ ಪ್ರತಿನಿಧಿ ಯಾಗಿದ್ದಾರೆ.

ಸಾಧಕನು ತನ್ನ ಮನಸ್ಸನ್ನು ಹಾಗೂ ಇಂದ್ರಿಯಗಳನ್ನು ನಿಗ್ರಹಿಸುತ್ತಾ, ಲಿಂಗವನ್ನು ಪೂಜಿಸುತ್ತಾ ಲಿಂಗರೂಪಿಯಾದ ವಿಶ್ವಾತ್ಮನಿಗಿಂತ ತಾನು ಬೇರೆಯಲ್ಲ ಎಂಬುದನ್ನು ಅನುಭೂತಿಯಿಂದ ಅರಿಯುತ್ತಾನೆ. ಅನುಭಾವ ಭಕ್ತಿಯೆಂದು ಕರೆಯಿಸಿಕೊಳ್ಳುವ ಈ ಸ್ಥಲವು 'ಪ್ರಾಣಲಿಂಗಿ ಸ್ಥಲ'ವೆಂದು ಹೆಸರಾಗಿದೆ. ಚಂದಯ್ಯ ಈ ಸ್ಥಲದ ಪ್ರತಿನಿಧಿಯಾಗಿದ್ದಾನೆ. ಸಾಧಕನು ತನ್ನ ಸಾಧನೆಯಲ್ಲಿ ಮುಂದು ವರಿಯುತ್ತಾ, ಲಿಂಗವನ್ನು ಆರಾಧಿಸುತ್ತಾ ಪ್ರಸಾದಲಿಂಗನಿಷ್ಠನಾಗಿ ತನ್ನ ಆತ್ಮದ 'ದಿವ್ಯಹೊಳಹನ್ನು' ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾನೆ. ಪರಿಪಕ್ವಗೊಂಡ ಈ ಭಕ್ತಿಯು 'ಆನಂದಭಕ್ತಿ'ಯೆಂದು ಹೆಸರಾಗಿದೆ. ಅಲ್ಲದೆ, ಈ ಸ್ಥಲ 'ಶರಣಸ್ಥಲ'ವೆನಿಸಿಕೊಳ್ಳು ತ್ತದೆ. ಈ ಸ್ಥಲದ ಪ್ರತಿನಿಧಿಯೆಂದರೆ ಘಟ್ಟಿವಾಳಯ್ಯ.

ಸಾಧನೆಯ ಅತ್ಯುನ್ನತ ಆತ್ಯಂತಿಕ ಹಂತದಲ್ಲಿ ಅಂಗ-ಲಿಂಗಗಳ ಭೇದವಳಿದು ನದಿಯು ನದಿಯೊಡನೆ ಬೆರೆಯುವಂತೆ ಪರಿಶುದ್ಧವಾದ ಅಂಗವು ಭಗವಂತನಲ್ಲಿ (ಲಿಂಗ) ಒಡವೆರೆಯುವುದು. ಈ ಬಗೆಯ ತಾದಾತ್ಮ್ಯ ಸ್ಥಿತಿಯನ್ನು 'ಐಕ್ಯಸ್ಥಲವೆಂದು' ಕರೆದಿದ್ದಾರೆ, ಜೊತೆಗೆ, ಈ ಹಂತದ ಭಕ್ತಿಯನ್ನೂ ಸಹ ಸಮರಸ ಭಕ್ತಿಯೆಂದು ಹೇಳಿದ್ದಾರೆ. ಈ ಸ್ಥಲದ ಪ್ರತಿನಿಧಿಯೆಂದರೆ ಅಜಗಣ್ಣನವರು.

ಒಟ್ಟಾರೆ, ವೀರಶೈವ ದರ್ಶನದಲ್ಲಿ ಭಕ್ತಿ, ಜ್ಞಾನ, ಹಾಗೂ ಕ್ರಿಯೆಗಳು ಸಮಾನವಾದ ಪ್ರಾಮುಖ್ಯತೆಯನ್ನು ಪಡೆದಿವೆ. ಯಾವ ಭೇದ-ಭಾವವೂ ಇಲ್ಲದೆ ಸರ್ವರೂ ಮೋಕ್ಷವನ್ನು ಹೊಂದಬಹುದಾಗಿದೆ. ಪ್ರಾಪಂಚಿಕ ಜಗತ್ತಿನಲ್ಲಿದ್ದುಕೊಂಡೇ ಅಧ್ಯಾತ್ಮದಲ್ಲಿ ಮುನ್ನಡೆದು ಮೋಕ್ಷವನ್ನೊಂದಲು ಅಡ್ಡಿಯಿಲ್ಲ. ಮಾನವನ ಸಂಪೂರ್ಣ ಶ್ರೇಯಸ್ಸು ವೀರಶೈವದರ್ಶನದ ಧ್ಯೇಯ. ಮಾನವನ ಉದಾತ್ತ ಮತ್ತು ಆದರ್ಶದ ಬದುಕಿಗೆ ಪಂಚಾಚಾರಗಳು ನೆರವಾಗುತ್ತವೆ; ಸಾಧಕನ ಅಧ್ಯಾತ್ಮದ ಮುನ್ನಡೆಗೆ ಅಷ್ಟಾವರಣಗಳು ಬುನಾದಿಯಾಗುತ್ತವೆ. ಭಗವಂತನೊಡನೆ ಪರಿಪೂರ್ಣತೆಯನ್ನು ಪಡೆಯಲು ಸಾಧಕನು ನಡೆಸುವ ಆಧ್ಯಾತ್ಮ ಪ್ರಯತ್ನ ಹಾಗೂ ಪ್ರಗತಿಯನ್ನು, ವಿವಿಧ ಸ್ತರಗಳ ವಿಕಾಸವನ್ನು ಷಟ್‌ಸ್ಥಲವು ಸೂಚಿಸುತ್ತದೆ. ಎಲ್ಲಾ ಮಾನವರೂ ಒಂದೇ ಎಂದು ಅಧ್ಯಾತ್ಮದ ಅನುಭೂತಿಯ ಮೂಲಕ ಜೀವಾತ್ಮನು ಅರಿಯುವಂತೆ ಮಾಡುವುದೇ ವೀರಶೈವದರ್ಶನದ ಹೆಗ್ಗುರಿಯಾಗಿದೆ.

ಜನ ಜಾನಪದ

ಡಾ. ಮಂಜುನಾಥ ಬೇವಿನಕಟ್ಟಿ

ಜಾನಪದ ಕೇವಲ ಭೂತಕಾಲದ ಅಧ್ಯಯನಕ್ಕೆ ಮಾತ್ರ ಸೀಮಿತವೆನ್ನುವ ಅಭಿಪ್ರಾಯ ಸರಿಯಾದುದಲ್ಲ. ಇಂದಿನ ಜಾನಪದ ಅಧ್ಯಯನ ವರ್ತಮಾನಕ್ಕೂ ಪ್ರಸ್ತುತವಾಗಿದೆ. ಜಾನಪದ ಅಧ್ಯಯನದಲ್ಲಿ ಪಠ್ಯದ ಜೊತೆಗೆ ಸಂದರ್ಭವಿಲ್ಲದಿದ್ದರೆ ಶವದಂತೆ ಆಗುತ್ತದೆ. ಹಾಗೆಯೇ ರೂಪ ಹಾಗೂ ಬದಲಾವಣೆಯ ತತ್ತ್ವಗಳಿಗೆ ಉಪಯೋಗ ತತ್ತ್ವವನ್ನು ಸೇರಿಸಬೇಕಾಗುತ್ತದೆ. ಇದರಿಂದಾಗಿ ಜಾನಪದ ಅಧ್ಯಯನ ಹೆಚ್ಚು ಉಪಯುಕ್ತವಾಗುತ್ತದೆ. ಈ ರೀತಿಯ ಅಧ್ಯಯನಗಳಲ್ಲಿ ಜಾನಪದದ ಬಗೆಗಿನ ಅರ್ಥವನ್ನು ಜನಪದರಿಂದಲೇ ಸಂಗ್ರಹಿಸುವುದರಿಂದ ಜಾನಪದದ ಮೌಲ್ಯವನ್ನು ವಿಶೇಷವಾಗಿ ತಿಳಿಯಲು ಅನುಕೂಲವಾಗುತ್ತದೆ. ಈ ರೀತಿಯಾಗಿ ಜನಪದರಿಂದ ಜಾನಪದದ ಅರ್ಥವನ್ನು ಸಂಗ್ರಹಿಸುವುದನ್ನು 'ಜನ ಜಾನಪದ' ಎಂದು ಕರೆಯಲಾಗಿದೆ.

ಆಂಗ್ಲ ಭಾಷೆಯ 'Meta Folklore' ಎಂಬ ಪದಕ್ಕೆ 'ಜನ ಜಾನಪದ' ಎಂದು ಕರೆಯಲಾಗಿದೆ. ಇದಕ್ಕೆ ಮೊದಲು 'Meta Folklore'ಗೆ ಕನ್ನಡದಲ್ಲಿ ಅಧಿ ಜಾನಪದ ಎಂಬ ಪದವನ್ನು ಡಾ. ತೀ.ನಂ. ಶಂಕರನಾರಾಯಣರು ಬಳಸಿದ್ದಾರೆ. ಆದರೆ ನಾನು ಇಲ್ಲಿ 'ಜನ ಜಾನಪದ' ಎಂದು ಕರೆದಿದ್ದೇನೆ. ಈ ಪದವನ್ನು ಕರೆಯಲು ಮುಖ್ಯವಾದ ಕಾರಣವೇನೆಂದರೆ ಜನಪದರೇ ಜಾನಪದದ ಬಗೆಗೆ ಅರ್ಥ ವಿವರಣೆ ಕೊಡುವುದರಿಂದ ಜನ ಜಾನಪದ ಎಂದು ಕರೆಯಲಾಗಿದೆ. ಜೊತೆಗೆ 'ಅಧಿ' ಎಂಬ ಪದ ಸಂಸ್ಕೃತದಿಂದ ಬಂದುದು. ಅದಕ್ಕೆ ಬದಲಾಗಿ ಕನ್ನಡದಲ್ಲೇ 'ಜನ' ಎಂಬ ಪದ ಸೂಕ್ತವಾದುದರಿಂದ 'ಜನ ಜಾನಪದ' ಎಂದು ಕರೆಯಲಾಗಿದೆ. ಜನ ಜಾನಪದ ಎಂದರೆ ಜಾನಪದದ ಬಗೆಗಿನ ಜಾನಪದ (ಡಂಡಸ್ 1966 : 38–49). ಅಂದರೆ ಜನಪದರು ತಮ್ಮ ಉತ್ಪತ್ತಿಯಾದ ಜಾನಪದ ಮತ್ತು ತಮ್ಮಂತಹದೇ ಆದ ಇನ್ನೊಂದು ಜನಪದದ ಬಗೆಗೆ ಹೊಂದಿರುವ ಮನೋಭಾವವನ್ನು ಜನ ಜಾನಪದ ಎನ್ನುವರು. ಭಾರತದ ಜಾನಪದದಲ್ಲಿ ಜನ ಜಾನಪದಕ್ಕೆ ಸಾಕಷ್ಟು ಉದಾಹರಣೆಗಳು ಸಿಗುತ್ತಿವೆ. Indian Folklore, itself, identifies various folkgroups and assigns them stereotypical characteristics. This phenomenon is an

excellent example for 'metafolklore'. In some Indian languages there are whole genres dedicated largely to case or regional stereotypes. Proverbs and Jokes also single out various folk categrories for comment (Claus and Korom 1991 : 25). ಜನ ಜಾನಪದದಲ್ಲಿ ಜಾನಪದ ವಿದ್ವಾಂಸ ತಾನು ಅಧ್ಯಯನ ಮಾಡುವ ಜಾನಪದ ವನ್ನು ಕೇವಲ ತನ್ನ ವಿದ್ವತ್ತಿನ ನಿಲುವಿನಿಂದ ನೋಡದೆ, ಆ ಜಾನಪದದ ಬಗೆಗೆ ಜನಪದರ ಒಳನೋಟವನ್ನು ಸಹ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಈ ರೀತಿಯ ಒಳನೋಟ ಸ್ಥಳೀಯ ಅರ್ಥೈಸುವಿಕೆಯ ಪರಂಪರೆಯನ್ನು ಒಳಗೊಂಡಿರು ತ್ತದೆ. ಸ್ಥಳೀಯ ಅರ್ಥೈಸುವಿಕೆಯು ಪರಂಪರೆಯು ಜಾನಪದದ ಪರಂಪರೆ, ಐತಿಹಾಸಿಕತೆ, ಸಾಂದರ್ಭಿಕತೆ, ಕ್ರಿಯಾತ್ಮಕತೆಯಿಂದ ಕೂಡಿರುತ್ತದೆ. ಹಾಗಾಗಿ ಈ ಒಳನೋಟ ಅನೇಕ ಆಯಾಮಗಳಿಂದ ಕೂಡಿ ಶ್ರೀಮಂತ ಮತ್ತು ಅರ್ಥ ಪೂರ್ಣ ವಾಗಿರುತ್ತದೆ. ಇದರಿಂದಾಗಿ ಜಾನಪದದ ಬಹುತ್ವ ಮತ್ತು ಅರ್ಥೈಸುವಿಕೆಯ ಕ್ರಮಗಳನ್ನು ತಿಳಿದುಕೊಳ್ಳಬಹುದು.

ಜಾಕಬ್‌ಸನ್ ಮತ್ತು ಚಂಡಸ್ ರವರು ನೈಯಾಯಿಕರು (Logiciars) ಮತ್ತು ಭಾಷಾ ವಿಜ್ಞಾನಿಗಳನ್ನು ಅನುಸರಿಸಿ ಜಾನಪದ ಅಧ್ಯಯನಕ್ಕೆ ಜನ ಜಾನಪದ (Meta Folklore) ಎಂಬ ಪರಿಕಲ್ಪನೆಯನ್ನು ಚಲಾವಣೆಗೆ ತಂದರು (Meta Folklore) ನಲ್ಲಿರುವ 'Meta' ಎಂಬ ಪದವು ಕೇವಲ 'ಮೇಲೆ' 'ಸಹ' 'ಅನುಸರಿಸುವ' 'ಅವಲಂಬಿಸುವ' ಎನ್ನುವ ಅರ್ಥವಲ್ಲದೆ ಜಾನಪದದ ಪ್ರತಿಯೊಂದು ಪ್ರಭೇದಕ್ಕೂ ತಕ್ಕ ಪ್ರತ್ಯಯವಾಗಿದೆ. (ಪೀಟರ್ ಜೆ. ಕ್ಲಾಸ್ ಮತ್ತು ಫ್ರಾಂಕ್. ಜೆ. ಕೋರಮ್ 1991: 16).

ಡಾ. ಎ. ಕೆ. ರಾಮಾನುಜನ್ ರವರು ಗದ್ಯ ಕಥನಗಳಲ್ಲಿ ಐದು ವಿಧದ ಜನ ಜಾನಪದವನ್ನು ಗುರುತಿಸುತ್ತಾರೆ. (ಎ. ಕೆ. ರಾಮಾನುಜನ್ 1987 ; 87-88). ಅವುಗಳೆಂದರೆ ;

Metafeature

a) Elements in the text - Ex : Opening and closing formulac ; repititions ; framing devices ; forms like prose, verse, song ; identifying devices like names of persons ; other textural elements like shifts in tone and register.

b) Elements in performance : Ex:- gestures, asides to the audience, by which tellers separate themselves.

c) Elements in context : Ex : festival, puja (worship) performer signified by caste-marks on his forehead, costume and language.

d) Distinctions and names of genres : Ex: myth/folktale, marriage riddles. mother-in-law tales.

Metaforms

e) Tales about tales, about their forms and functions :

f) Oral exagesis and evaluation by performer and audience : Ex:- favorite tale, nations about what makes one tale better than another,

ಜನ ಜಾನಪದ ಎಂಬುದು ಜಾನಪದದ ಪ್ರಕಾರಗಳಾದ ಹಾಡು, ಗಾದೆ, ಕಥೆ· ಆಚರಣೆಗಳಂತೆ ಒಂದು ರೂಪಭೇದ (genre) ವಾಗಿರದೆ, ಈ ಪ್ರಕಾರಗಳ ಗುಣಗಳನ್ನು ಅಳೆಯುವ ವಿಶಿಷ್ಟ ನೋಟವಾಗಿದೆ. ಹಾಗಾಗಿ ಇದನ್ನು ಜಾನಪದದ ಒಂದು ಪ್ರಕಾರವೆನ್ನುವ ಬದಲಾಗಿ ವಿವಿಧ ಪ್ರಕಾರಗಳ ಒಟ್ಟಾರೆ ಗುಣವೆಂದು ತಿಳಿಯುವುದು ಹೆಚ್ಚು ಅರ್ಥಪೂರ್ಣವಾಗಿರುತ್ತದೆ. ಜನ ಜಾನಪದವು ಒಟ್ಟಾರೆ ಜಾನಪದದ ಸಮಗ್ರ ಗುಣಲಕ್ಷಣವನ್ನು ಒಂದುಗೂಡಿಸಿ ವಿಶೇಷ ಅರ್ಥವನ್ನು ನೀಡುತ್ತದೆ.

ಜನ ಜಾನಪದ ಎಂಬುದು ಜಾನಪದದ ವಿವಿಧ ಪ್ರಕಾರಗಳ ಒಳಗೆ ಇರುವ ವಿಶಿಷ್ಟವಾದ ಗುಣವಾಗಿದೆ. ಹಾಗಾಗಿ ಇದು ವಿದ್ವಾಂಸನ ಅಂತರ್ ದೃಷ್ಟಿಗೆ ಕೆಲಸ ಕೊಡುವಂತಹ ಕೆಲಸವಾಗಿರುತ್ತದೆ. ಇದರಿಂದಾಗಿ ಜನ ಜಾನಪದದ ಸಂಗ್ರಹ ಸುಲಭವಲ್ಲ. ಕೆಲವೊಮ್ಮೆ ಇದು ಜಾನಪದದ ಒಳನೋಟಕ್ಕಿಂತ ಮಿಗಿಲಾಗಿ ಅವರ ಮೇಲ್ಮೈ ಲಕ್ಷಣಗಳ ಬಗೆಗೆ ವಿಮರ್ಶಿಸುತ್ತದೆ. ಜಾನಪದದ ಕೆಲವು ಪ್ರಕಾರಗಳಿಗೆ 'ಜನ ಜಾನಪದ' ಇದೆ. ಕೆಲವು ಪ್ರಕಾರಗಳಿಗೆ ಇಲ್ಲ, ಪ್ರಾಯೋಜಿತ ಪರೀಕ್ಷೆ ಅರ್ಥ ಪ್ರಾಯೋಜಿತ ಪಠ್ಯವಾಗಿರಬೇಕು. ಕಥೆಯನ್ನು ಹೇಳುವವನ ಮತ್ತು ಕೇಳುವವನ ಅರ್ಥ ಬೇರೆ ಬೇರೆಯಾಗಿರಬಹುದು. ಕೆಲವೊಮ್ಮೆ ನಿರೂಪಕನ ಅರ್ಥ ಏಕದಾಟಿಯಾದರೂ ಅದರ ಕೇಳುಗನ ಮೌಲ್ಯಮಾಪನ ಬೇರೆಯಾಗಬಹುದು. ಹೀಗಾಗಿ ಜನ ಜಾನಪದವನ್ನು ಸಾರ್ವತ್ರಿಕವಾಗಿ ರೂಪಿಸಲು ಸಾಧ್ಯವಿಲ್ಲ.

ಜನ ಜಾನಪದದಿಂದ ಜನಪದರು ತಮ್ಮ ಜಾನಪದ ಮತ್ತು ಜನಪದದ ಬಗೆಗೆ ಹೊಂದಿರುವ ಜ್ಞಾನವನ್ನು ತಿಳಿದುಕೊಳ್ಳಬಹುದು. ಜನಪದರ ಲೋಕದೃಷ್ಟಿ (world view)ಯ ಬಗೆಗಿನ ಕಲ್ಪನೆಯನ್ನು ತಿಳಿಯಬಹುದು. ಜನಪದದಿಂದ

ಜಾನಪದದ ಅರ್ಥವನ್ನು ತಿಳಿಯುವುದರಿಂದ ಮೌಖಿಕ ಪರಂಪರೆಯ ಅನೇಕ ಆಯಾಮಗಳನ್ನು ತಿಳಿದುಕೊಳ್ಳಬಹುದು. ಆ ಮೂಲಕ ಜಾನಪದದ ಬಗೆಗಿನ ಬಹು ಅರ್ಥಗಳನ್ನು ಹೊಮ್ಮಿಸುವುದು ಸಾಧ್ಯವಾಗುತ್ತದೆ.

ಜನಪದರ ಅನುಭವವಾಣಿಯಾದ ಗಾದೆ ಜಾನಪದದ ಜನಪ್ರಿಯ ಪ್ರಕಾರಗಳಲ್ಲೊಂದು. ಅಡು ಮುಟ್ಟದ ಸೊಪ್ಪಿಲ್ಲ ಎನ್ನುವಂತ ಗಾದೆ ಮೆಟ್ಟದ ಬದುಕಿನ ಭಾಗವಿಲ್ಲ. ಇಂತಹ ಗಾದೆಗಳ ಬಗೆಗೆ ಜಾನಪದ ಸೃಷ್ಟಿಯಾಗಿರುವುದನ್ನು ನಾವು ಕಾಣಬಹುದು.

'ಗಾದೆ ಎಂದೂ ಸುಳ್ಳು ಹೇಳುವುದಿಲ್ಲ—ಜರ್ಮನ್

'ಗಾದೆಯಲ್ಲಿ ಹುಸಿ ಇದ್ದರೆ ಹಾಲಿನಲ್ಲಿ ಹುಳಿ ಇರುತ್ತದೆ—ಮಲೆಯಾಳಂ

'ಕೆಲವರು ಹೇಳಿದ್ದು ನಿಜವಿರಬಹುದು, ಎಲ್ಲರೂ ಹೇಳಿದ್ದು ನಿಜವಿರಬೇಕು'—ಇಂಗ್ಲೀಷ್

'ಗಾದೆಗಳ ಬಗ್ಗೆ ಗಮನವಿಲ್ಲದವನು ತಪ್ಪುಗಳನ್ನು ತಪ್ಪಿಸಲಾರ—ತುರ್ಕಿ

'ಗಾದೆ ತಿಳಿದ ವಿವೇಕಿ ಜಗಳ ಬಿಡಿಸುತ್ತಾನೆ'—ಆಫ್ರಿಕನ್

'ವೇದಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ'—ಕನ್ನಡ

ಹೀಗೆ ಗಾದೆಗಳ ಬಗೆಗೆ ಇನ್ನೂ ಮುಂತಾದ ಜಾನಪದವನ್ನು ಕಾಣಬಹುದು. ಅಲ್ಲದೆ ಕಿಳ್ಳೇಕ್ಯಾತರ ಆಟಗಳನ್ನು ಆಡಿಸುವುದರಿಂದ ಮಳೆ ಬೆಳೆಗಳು ಚೆನ್ನಾಗಿ ಬರುತ್ತವೆಂಬ ನಂಬಿಕೆ ಇದೆ. ಕರ್ನಾಟಕ ಜನಪದರಲ್ಲಿ ಕಿಳ್ಳೇಕ್ಯಾತರ ಆಟ ಆಡಿಸಿದರೆ ಮಳೆ ಆಗುತ್ತದೆ ಎಂಬ ನಂಬಿಕೆ ಇದೆ. ಹಾಗೆಯೇ ಜೋಗಳ ಪದದ ಬಗೆಗೂ ತಮ್ಮದೇ ಆದ ಜಾನಪದವನ್ನು ಹೊಂದಿರುವುದನ್ನೂ ಸಹ ನೋಡಬಹುದು.

'ಜೋಗುಳ ಹಾಡಿದರೆ ಆಗಾಲೆ ಕೇಳ್ತಾನು
ಹಾಲ ಹಂಬಲವ ಮರೆತಾನು ಕಂದಯ್ಯ
ಜೋಗುಳದಾಗೆ ಅತಿಮುದ್ದು'.

ಯಕ್ಷಗಾನವನ್ನು ನೋಡುವುದರಿಂದ ಕೇಡುಂಟಾಗುತ್ತದೆ ಎಂಬ ಹಿನ್ನೆಲೆಯಲ್ಲಿ (ಮೇಲ್ಜಾತಿಗಳಲ್ಲಿ) ನಂಬಿಕೆಗಳು ಉಂಟಾಗಿರುವುದನ್ನು ಕಾಣಬಹುದು. ದಕ್ಷಿಣ ಕನ್ನಡದಲ್ಲಿ ಹಿಂದೆ ಮತ್ತು ಕೆಲವೆಡೆ ಈಗಲೂ ಪ್ರಚಲಿತವಾಗಿರುವ ನಂಬಿಕೆ ಏನೆಂದರೆ. ಒಂದು ಯಕ್ಷಗಾನವನ್ನು ನೋಡಿದರೆ ಏಳು ರಂಗ ಪೂಜೆಗಳನ್ನು ನೋಡಬೇಕು.

ಭಾರತದಲ್ಲಿ ವರ್ಣಾಧಾರಿತವಾದ ಜನಪದಗಳಿದ್ದು, ಕಾಲಾಂತರದಲ್ಲಿ ಜಾತಿ ಜನಪದಗಳಾಗಿ ಮಾರ್ಪಾಡಾಗಿವೆ. ಆದರೂ ಆ ವರ್ಣಾಧಾರಿತದ ಸೆಲೆಗಳನ್ನು ನಮ್ಮ ಜಾನಪದದಲ್ಲಿ ಈಗಲೂ ಕಾಣಬಹುದು. ಹಾಗೆಯೇ ಜಾತಿ ಜಾತಿಗಳಿಗೇ ಪ್ರತ್ಯೇಕವಾದ ಜಾನಪದವೂ ಸಿಗುತ್ತದೆ.

ಕರಿ ಬ್ರಾಹ್ಮಣನ ನಂಬ ಬಾರದು, ಕೆಂಪು (ಬಿಳಿ) ಹೊಲೆಯನ ನಂಬಬಾರ್ದು
ಕರಿ ಹಾರುವ ಇರಬಾರದು, ಕೆಂಪು ಗಾಣಿಗ್ಯಾ ಇರಬಾರ್ದು
ಕರಿ ಹಾರುವನನ್ನು ಬಿಳಿ ಶೆಟ್ಟರನ್ನು ನಂಬಬಾರದು

ಆಚಾರಿ ಆಳಲ್ಲ ಅಂಬಲಿ ಪಾಯಸ ಅಲ್ಲ
ಹಾರುವ ದುಡಿಯೋದು ಪಿಂಡಕ್ಕೆ, ಒಕ್ಕಲಿಗ ದುಡಿಯೋದು ದಂಡಕ್ಕೆ, ಹೊಲೆಯ ದುಡಿಯೋದು ಹೆಂಡಕ್ಕೆ
ಉತ್ತುಬಂದ ಒಕ್ಕಲಿಗನ ಕೆಣಕಬ್ಯಾಡ, ಹಸಿದು ಬಂದ ಹಾರುವನ ಕೆಣಕಬ್ಯಾಡ
ಹೊಲೆಯನ ಮಾತು ಮಾತಲ್ಲ, ಹುಲ್ಲುಬೆಂಕಿ ಬೆಂಕಿಯಲ್ಲ
ಕುರುಬನಿಗೇನು ಗೊತ್ತು ಮರುಗದ ಗಮ
ಹಾರುವನಿಗೆ ಆಳಾಗಬ್ಯಾಡ, ಗಾಣಿಗನ್ಗೆ ಎತ್ತಾಗಬ್ಯಾಡ
ಕುರುಬಗ ಹೂವ ಕೊಟ್ರೆ ಕುಂಡ್ಯಾಗ ಇಟ್ಕೊಂಡ್ನಂತೆ
ಒಂತ ಹೊಲೆಯರು ಕೂಡಿ ತೊಗಲ ಹದ ಕೆಡಿಸಿದರಂತೆ
ಕೆಲಸವಿಲ್ಲದ ಕುಂಬಾರ ಮಗಳ ಕುಂಡಿ ತಟ್ಟಿದಂತೆ

ಹಾಲಿನಂಥವನಾದ್ರೂ ಹಾರೂವನ ನಂಬಬಾರ್ದು
ಬೆಲ್ಲದಂಗೆ ಇದ್ದರೂ ಬೇಡರ ಸಂಗಬೇಡ
ತುಪ್ಪದಂಗೆ ಇದ್ದರೂ ತುರುಕರ ಸಂಗಬೇಡ
ಹಾಲಿನಂಗೆ ಇದ್ದರೂ ಹಾರುವ ಸಂಗಬೇಡ

ಕಿರುಬನನ್ನು ನಂಬಿದರೂ ಕುರುಬನನ್ನು ನಂಬಬೇಡ
ಜೈನ ಬಿಡ, ಕೋಮಟಿ ಕೊಡ
ಏಕಶಾಸ್ತ್ರೀ ಮನೇಲಿ ಏಳುಜನ ಮುಂಡೇರು
ಸುಗ್ಗೀಲಿ ಮಾದಿಗರನ್ನು ಕೆಣಕ ಬಾರದು, ದೀವಳ್ಗೀಲಿ ದನ ಕೆಣಕಬಾರದು

ಅಕ್ಕನ ಚಿನ್ನವಾದರೂ ಅಕ್ಕಸಾಲಿಗ ತೋಸೆಯದೆ ಬಿಡ
ಮೊಂಡರಿಗೆ ನಾಚಿಕೆಇಲ್ಲ ಮರಳಿಗೆ ಗಾಳಿಇಲ್ಲ
ಲಿಂಗದಂಥಾವ್ನಾದ್ರೂ ಜಂಗಮನ ನಂಬಬಾರ್ದು
ಶೆಟ್ಟಿ ಬಿಟ್ಟಲ್ಲೆ ಪಟ್ಟಣ
ಬಿದ್ದಕಲ್ಲೆಲ್ಲಾ ಅಗಸನದು, ನಿಂತಕಲ್ಲೆಲ್ಲಾ ಪೂಜಾರಿಯದು

ಭಾರತದಲ್ಲಿ ಹೆಣ್ಣು ಗಂಡು ಎಂಬ ತಾರತಮ್ಯ ಭಾವನೆ ಮೊದಲಿನಿಂದಲೂ ಇದೆ. ಅದರಲ್ಲೂ ಹೆಣ್ಣನ್ನು ಅಸವಮಾನವಾಗಿ ಕಾಣುವುದು ನಮ್ಮ ಸಾಂಸ್ಕೃತಿಕ ಭಾವಕೋಶದ ಭಾಗವಾಗಿ ಬಿಟ್ಟಿದೆ. ಈ ರೀತಿಯ ಅಸವಮಾನ ಭಾವ ನಮ್ಮ ಜನಪದರ ಗಾದೆಗಳಲ್ಲೂ ಸಹ ವ್ಯಕ್ತವಾಗಿವೆ. ಅದೇರೀತಿ ಗಂಡಸರ ಬಗೆಗೂ ಸಹ ಕೆಲವಡೆ ಅವರ ಕೆಟ್ಟ ಗುಣಗಳಿಗೆ ಸಂಬಂಧಿಸಿದಂತೆ ಗಾದೆಗಳು ಹುಟ್ಟಿಕೊಂಡಿರುವುದನ್ನು ಕಾಣುತ್ತೇವೆ.

ಹೆಂಗಸಿಗೆ ಗುಟ್ಟು ಹೇಳುವುದಕ್ಕಿಂತ, ತೂತು ದೋಣಿಯಲ್ಲಿ ಸಮುದ್ರ ಯಾನ ಮಾಡುವುದು ಮೇಲು (ರಷ್ಯಾ)
ಸ್ತ್ರೀ ಬುದ್ಧಿ ಪ್ರಳಯಾಂತಕ
ಹೆಂಗಸರ ಬುದ್ಧಿ ಮೊಳಕಾಲ್ ಕೆಳಗೆ
ಅಲಲಾ ಎಂಬ ಆಲದ ಮರವನ್ನು ನಂಬಹುದು, ಮಳ್ಳಿಯಂಥ ಕಳ್ಳಿಯನ್ನು ನಂಬಬಾರದು
ಹೆಂಗಸರ ಬಾಯಾಗ ಮಾತ ನಿಲ್ಲಲ್ಲ, ಗಂಡಸರ ಬಗಲಾಗ ಕೂಸು ನಿಲ್ಲಲ್ಲ
ಊರಾಗ ಹೆಂಗಸರನ್ನ ಬಿಡಬಾರ್ದು, ನೀರಾಗ ಎಮ್ಮೆ ಬಿಡಬಾರ್ದು
ನೂರು ರುಮಾಲು ಒಂದು ಗೂಡಬಹುದು, ಮೂರು ತುರುಬು ಒಂದು ಗೂಡಲ್ಲ
ಮೂವರು ಹೆಂಗಸರಲ್ಲಿ ಒಮ್ಮತವಿದ್ದದ್ದಾದರೆ ಹಗಲಿನಲ್ಲಿಯೇ ನಕ್ಷತ್ರಗಳು ಕಾಣಿಸಿಕೊಳ್ಳುತ್ತವೆ
ಮಾತು ಮಾತಿಗೂ ನಗುವ ಗಂಡಸನ್ನ ನಂಬಬಾರದು, ಮಾತುಮಾತಿಗೂ ಅಳುವ ಹೆಂಗಸನ್ನ ನಂಬಬಾರದು
ಮೊಂಡು ಬಿದ್ದವಳು ಗಂಡನ ಮದುವೆಗೆ ಹೋಗಿ ಅಡ್ಡಗೊಡೆಯ ಪಕ್ಕದಿಂದ ಅರ್ಧ ರೂಪಾಯಿ ಓದಿಸಿದಳು
ಗಂಡಸರಿಗೆ ಮಾರಿಮ್ಯಾಲ ಮೀಸಿ ಇದ್ರ, ಹೆಂಗಸರಿಗೆ ಎದೆಮ್ಯಾಲ ಮೀಸಿ ಇರ್ತಾವ
ಕುಳ್ಳ ಕೊಳ್ಳೆಗಾಲ ಕೆಡಿಸ್ದ
ಕುಳ್ಳ ಗಂಡನಲ್ಲ, ಸೀಗಡಿ ಬಾಡಲ್ಲ

ಜನಪದಕಥೆ ಜನಪದ ಸಾಹಿತ್ಯದ ಬಹು ಮುಖ್ಯವೂ, ಆಕರ್ಷಕವೂ ಆದ ಭಾಗವಾಗಿದೆ. ಸುದೀರ್ಘವಾದ ಕಥೆಗಳಿಂದ ಹಿಡಿದು ಸಂಕ್ಷಿಪ್ತವಾದ ಕಥೆಗಳವರೆಗೆ ಈ ಕಥಾಕ್ಷೇತ್ರ ಆವರಿಸಿದೆ. ಈ ಕಥೆಗಳ ಬಗೆಗೆ ಜನಪದರು ತಮ್ಮದೇ ಆದ ಹಲವಾರು ನಂಬಿಕೆಗಳನ್ನು ಇರಿಸಿಕೊಂಡಿದ್ದಾರೆ. ಜನಪದರಲ್ಲಿ ಜನಪದ ಕಥೆಯ ಬಗೆಗೆ ಇರುವ ನಂಬಿಕೆಗಳು ಈ ರೀತಿಯಾಗಿವೆ. (Tales get fewer as one moves from village to town (Claus and Korom, 1991 : 13) 'ಕಥೆಯನ್ನು ಹೇಳದಿರುವವರು ಮತ್ತು ಕೇಳದಿರುವವರಿಗೆ ಸ್ವರ್ಗದಲ್ಲಿ ಸ್ಥಾನವಿರುವುದಿಲ್ಲ' ಚೆನ್ನಾಗಿ ಒಳ್ಳೆಯಕಥೆ ಹೇಳುವವರು ಸಿಕ್ಕರೆ ಯಮಧರ್ಮರಾಯ ಅವರನ್ನು ತನ್ನ ರಾಣಿಯರಿಗೆ ಕಥೆ ಹೇಳಲು ಇಟ್ಟುಕೊಳ್ಳುತ್ತಾನೆ. ಇವಲ್ಲದೆ ಸಂಸ್ಕೃತಿ ಜನಪದ ಕಥೆಯ ಬಗೆಗೆ

ತನ್ನದೇ ಆದ ಕೆಲವು ಯೋಚನೆಗಳನ್ನು ಹೊಂದಿದೆ. ರಾಮಾಯಣದ ಕಥೆಗಳನ್ನು ಕೇಳುವುದರಿಂದ ಸುಸಂಸ್ಕೃತನಾದ ವ್ಯಕ್ತಿಯಾಗುತ್ತಾನೆ ಕಥೆಗಳು ಬರುತ್ತಿದ್ದು ಅವುಗಳನ್ನು ಬೇರೆಯವರಿಗೆ ಹೇಳದಿದ್ದರೆ, ಕಥೆಗಳೇ ಕಥೆ ಹೇಳದಿದ್ದ ವ್ಯಕ್ತಿಯಮೇಲೆ ಸೇಡು ತೀರಿಸಿಕೊಳ್ಳುವುದು, ದೇವರು ಕಥೆಗಳನ್ನು ಭೂಲೋಕಕ್ಕೆ ಜನರ ಬೇಸರ ಕಳೆಯಲಿಕ್ಕ ಕಳುಹಿಸಿ ಕೊಟ್ಟಿದ್ದಾರೆ. ಹಾಗೂ ಕಥೆಗಳು ಹೆಚ್ಚಾಗಿ ಹೊಲೆಯರಿಗೆ ಬರುತ್ತವೆ. ಈ ರೀತಿಗಳಲ್ಲಿ ಕಥೆಗಳ ಬಗ್ಗೆ ಜನಪದರು ಭಾವನೆಗಳನ್ನು ಹೊಂದಿದ್ದು, ಅವುಗಳಿಗೆ ಸಂಬಂಧಿಸಿದ ಕಥೆಗಳನ್ನು ಸಹ ಹೊಂದಿದ್ದಾರೆ.

ಕಥೆಗಳು ಬಂಡಾಯವೆದ್ದು ವ್ಯಕ್ತಿಯಿಂದ ಬಿಡಿಸಿಕೊಂಡು ಬಂದು ಬೇರೆ ಬೇರೆ ರೂಪ ತಾಳಿ ತಮ್ಮ ಸೇಡನ್ನು ತೀರಿಸಿಕೊಳ್ಳಲು ಪ್ರಯತ್ನಿಸುವುದನ್ನು ಡಾ॥ ಎ. ಕೆ. ರಾಮಾನುಜನ್ ರವರು ಸಂಗ್ರಹಿಸಿರುವ Folktales from India ಸಂಗ್ರಹದಲ್ಲಿಯ ಹೇಳದ ಕಥೆಗಳು (Untold Story) ಶೀರ್ಷಿಕೆಯ ಕಥೆಯನ್ನು ಗಮನಿಸಬಹುದು ಕಥೆಯ ಸಾರಾಂಶ ಕೆಳಗಿನಂತಿದೆ.

ಗೋಂಡಿರೈತನಿದ್ದ ಅವನು ತನ್ನ ಸಾಮರ್ಥ್ಯಕ್ಕೆ ತಕ್ಕುದಾದ ಜಮೀನು ಮಾಡಿಕೊಂಡಿದ್ದ. ವ್ಯವಸಾಯಕ್ಕೆ ಆಳನ್ನು ಇಟ್ಟುಕೊಂಡಿದ್ದ. ಒಂದು ದಿನ ಇಬ್ಬರು ಮಗ ಮತ್ತು ಸೊಸೆ ನೋಡಲು ಹೋಗುತ್ತಾರೆ ರಸ್ತೆಯಲ್ಲಿ ಸಣ್ಣ ಗುಡಿಸಿಲಿನಲ್ಲಿ ಊಟ ಮಾಡುತ್ತಾರೆ, ಆಳು ಕಥೆಹೇಳಿ ಅನ್ನುತ್ತಾನೆ. ಗೋಂಡಿರೈತನಿಗೆ ನಿದ್ದೆ ಬಂದು ಕಥೆ ಹೇಳುವುದಿಲ್ಲ. ಆಳು ಎಚ್ಚರವಾಗಿರುತ್ತಾನೆ. ಸಾಹುಕಾರನಿಗೆ ನಾಲ್ಕು ಕಥೆ ಗೊತ್ತಿವೆ ನನಗೆ ಹೇಳಲಿಲ್ಲ ಎನ್ನುವನು. ಗೋಂಡಿರೈತ ಗಾಢವಾದ ನಿದ್ರೆಯಲ್ಲಿದ್ದಾಗ ಕಥೆಗಳೆಲ್ಲಾ ಹೊಟ್ಟೆಯಿಂದ ಹೊರಗಡೆ ಬರಲು ಪ್ರಾರಂಭಿಸಿದವು. ಹೊರಗಡೆ ಬಂದು ಹೊಟ್ಟೆಮೇಲೆ ಕುಳಿತುಕೊಂಡು ಮಾತಾಡಹತ್ತಿದವು. ಒಂದು ಕಥೆಹೇಳುತ್ತೆ ಚಿಕ್ಕಂದಿನಿಂದಲೂ ಇವನಿಗೆ ಗೊತ್ತು, ಆದರೆ ಯಾರಿಗೂ ಹೇಳುತ್ತಿಲ್ಲ, ಇವನನ್ನು ಕೊಂದು ಬಿಟ್ಟು ಬೇರೆಜೊತೆ ಇರೋಣ ಎನ್ನುತ್ತದೆ, ಅದನ್ನು ಗೋಂಡನ ಆಳು ಕೇಳಿಸಿಕೊಳ್ಳುತ್ತಾನೆ.

ಮೊದಲನೆ ಕಥೆ ಈತ ಮಗನ ಮನೆಯಲ್ಲಿ ಊಟ ಮಾಡುವಾಗ ಮೊದಲ ತುತ್ತನ್ನು ಮೊನಚಾದ ಸೂಜಿ ಮಾಡುತ್ತೇನೆ. ಅವನು ಅದನ್ನು ತಿಂದು ಸಾಯುತ್ತಾನೆ. ಎರಡನೇ ಕಥೆ ಒಂದುವೇಳೆ ಅಲ್ಲಿ ತಪ್ಪಿಸಿಕೊಂಡರೆ ರಸ್ತೆ ಬದಿಯಲ್ಲಿ ದೊಡ್ಡ ಮರವಾಗಿ ಅವನು ರಸ್ತೆ ಬದಿಯಲ್ಲಿ ಹೋಗುವಾಗ ಅವನ ಮೇಲೆಬಿದ್ದು ಸಾಯಿಸುತ್ತೇನೆ. ಮೂರನೇಕಥೆ ಅಗಲೂ ಸಾಯದಿದ್ದರೆ ಹಾವಾಗಿ ಕಚ್ಚಿ ಸಾಯಿಸುತ್ತೇನೆ ಎನ್ನುತ್ತದೆ. ನಾಲ್ಕನೇ ಕಥೆ ಆಗಲೂ ಸಾಯದಿದ್ದರೆ ದೊಡ್ಡ ನೀರಿನ ಅಲೆಯಾಗಿ ಬಂದು ಕೊಚ್ಚಿಕೊಂಡುಹೋಗಿ ನದಿಗೆ ತಳ್ಳಿ ಸಾಯಿಸುತ್ತೇನೆ ಎನ್ನುತ್ತದೆ.

ಮಾರನೇದಿನ ಮಗನ ಮನೆಗೆ ಹೋದಾಗ ಊಟಕ್ಕೆ ಕುಳಿತಾಗ ಮೊದಲ ತುತ್ತನ್ನು ತಿನ್ನುವಾಗ ಆಳು ಸಾಹುಕಾರನಿಗೆ ನೀನು ತಿನ್ನ ಬೇಡ ಅದರಲ್ಲಿ ಸೂಜಿ ಇವೆ ತಿನ್ನಬೇಡ ಎನ್ನುವನು. ಮಾರನೇದಿನ ಊರಿಗೆ ಬರುವಾಗ ದಾರಿಯಲ್ಲಿ ದೊಡ್ಡ ಮರ ಬಂದಾಗ ಆಳು ಮರದ ಕೆಳಗೆ ಹೋಗುವಾಗ ಜೋರಾಗಿ ಓಡು ಎನ್ನುವನು. ಸಾಹುಕಾರ ಹಾಗೆ ಮಾಡಲು ಮರದಾಟಿದ ತಕ್ಷಣ ಮರ ಬೀಳುತ್ತೆ. ತಪ್ಪಿಸಿಕೊಳ್ಳುತ್ತಾನೆ. ಸ್ವಲ್ಪ ಸಮಯದಲ್ಲಿ ಹಾವು ಕಾಣಿಸಿಕೊಳ್ಳುತ್ತದೆ. ಆಳು ಅದನ್ನು ಕೊಲ್ಲುತ್ತಾನೆ. ಹೊಳೆದಾಟುವಾಗ ದೊಡ್ಡ ಅಲೆ ಬಂದು ಕೊಚ್ಚಿಕೊಂಡು ಹೋಗಬೇಕೆನ್ನುವಾಗ ಆಳು ಪಾರುಮಾಡುತ್ತಾನೆ.

ಆಮೇಲೆ ಹೊಳೆದಂಡೆ ಮೇಲೆ ವಿಶ್ರಾಂತಿಗೆ ಕುಳಿತ್ತಿದ್ದಾಗ ಗೋಂಡಾ 'ನೀನು ನನ್ನನ್ನು ನಾಲ್ಕು ಸಾರಿ ಸಾಯುವುದನ್ನು ತಪ್ಪಿಸಿದ್ದೀಯ' ಹಾಗಾಗಿ ನಿನಗೆ ಏನೋ ಗೊತ್ತಿದೆ ಹೇಳು ಎನ್ನುವನು. ಆಳು ಅವನ್ನು ಹೇಳಿದರೆ ನಾನು ಕಲ್ಲಾಗಬೇಕಾಗುತ್ತೆ ಎನ್ನುವನು. ಅದಕ್ಕೆ ಗೋಂಡಾ ಅದು ಹೇಗೆಸಾಧ್ಯ ಹೇಳು ಎನ್ನುವನು. ಆಗ ಆಳು ಹೇಳುವನು 'ಒಂದು ವೇಳೆ ನಾನು ಕಲ್ಲಾದರೆ ನಿನ್ನ ಸೊಸೆಯ ಮಗುವನ್ನು ನನ್ನ ಮೇಲೆ ಎಸೆಯಬೇಕು ಆವಾಗ ಮನುಷ್ಯನಾಗುತ್ತೇನೆ' ಎಂದು ಹೇಳಿ ಕಲ್ಲಾಗುತ್ತಾನೆ. ಗೋಂಡಾ ಹಾಗೆಯೇ ಮನೆಗೆ ಹೋಗುವನು. ಸ್ವಲ್ಪ ದಿನವಾದ ಮೇಲೆ ಸೊಸೆಗೆ ಗೊತ್ತಾಗಿ ಅಲ್ಲಿಗೆ ಹೋಗಿ ತನ್ನ ಮಗುವನ್ನು ಕಲ್ಲಿನ ಮೇಲೆ ಎಸೆಯುವಳು. ಆಳು ಮನುಷ್ಯನಾಗುವನು ಆಳನ್ನು ಗೋಂಡಾ ಮನೆಗೆ ಸೇರಿಸುವುದಿಲ್ಲ. ಇವತ್ತಿಗೂ ಅಲ್ಲಿಯ ಜನ 'ಗೋಂಡನಿಗೆ ಏನೂ ಹೇಳಬೇಡಿ ಎಂದು ಮಾತನಾಡಿಕೊಳ್ಳುವರು.

ಕಥೆಗಳು ಭೂಮಿಗೆ ಏಕೆ ಬಂದವು, ಅವುಗಳು ಹೊಲೆಯರ ಹತ್ತಿರವೇ ಜಾಸ್ತಿ ಏಕೆ ಇವೆ ಎಂಬುದರ ಬಗೆಗೆ ಡಾ॥ ಆರ್. ಶೇಷಶಾಸ್ತ್ರಿಯವರು, 'ಹರತಿ ಸಿರಿ' ಗ್ರಂಥದಲ್ಲಿ 'ಕಥೆಯ ಕತೆಗಳು' ಎಂಬ ಶೀರ್ಷಿಕೆಯಲ್ಲಿ ಸಂಗ್ರಹಿಸಿರುವ ಕಥೆ ಉತ್ತಮ ಉದಾಹರಣೆಯಾಗಿದೆ.

ಈ ಭೂಲೋಕದಾಗ ಜನಗಳು ಕೆಲಸ ಮಾಡಿಕೊಂಡು ತಮ್ಮ ಬೇಕಾದ ಅದೂ ಇದೂ ಸರಿ ಮಾಡಿಕೊಣ್ಣೋದ್ರಾಗ ಬಿಡುವೇ ಇತ್ತಾ ಇರಲಿಲ್ಲ. ಎಲ್ಲಾ ಒಂದು ಅದುಬಸ್ತಕ ಬಂದ ಮ್ಯಾಕ್ಕರವಷ್ಟು ಟೈಮು ಸಿಕ್ತು. ನಾನು ಏಳ್ತಾ ಇರೋದು ಈ ಭೂಲೋಕ ಉಟ್ಟಿದಾಗಿನ ಸಮಾಚಾರ. ಬಿಡುವು ಇದ್ದಾಗ ಅದೂ ಇದೂ ಮಾತಾಡ್ತಾ ಇದ್ರು. ಎಷ್ಟು ದಿನಾ ಅಂತ ಅದೂ ಇದೂ ಅಂತ ಮಾತಾಡೋದು. ಅವ್ರ ಮನೆ ಇಚಾರಗಳನ್ನು ಎಚ್ಚಗಾ ಮಾತಾಡೋದು ಮೈಕ ಒಳೇದಲ್ಲಾ ಅಂತ ಕೊಡತಿಳಿದೋಯ್ತು. ಅದ್ರನಿಂಕ ಅವರು ದೇವರ್ನ ತಬುಸು ಮಾಡಿದ್ರು. ಅವಾಗ ದೇವರು ಬಂದ್ನು, ಕೇಳಿದ್ನು ಇವ್ರು, ಎಲ್ಲಾ ಏಳಿದ್ರು. ಅವಾಗ ದೇವ್ರು, "ನಿಮ್ಕ

ಬೇಜಾರು ಆದ್ರೆ ನಮ್ಮ ದೇವಾನುದೇವ ಲೋಕದಾಗ ಬೆವರ್ಸ್ಕೊಂಡ್ಲಗಾ ಬಿದ್ದಿರೋ ಕಥೆಗಳ್ನ ನಿಮ್ಮ ಎಷ್ಟು ಬೇಕೋ ಅಷ್ಟು ತಕ್ಕೊಂಡೋಗರ‍್ಯಾ" ಅಂತವರಾ ಕೊಟ್ರು. ಸರಿ ಇವ್ರು ಅವನು ಏಳಿದ್ದೇ ತವ್ರು ಎಲ್ಲಾ ಬಂಡಿಗಳ್ನ ಸರಿ ಮಾಡಿಕೊಂಡು ವ್ರೊಲ್ಟ್ರು, ಎಲ್ಲಾ ಗಾಡಿಗಳ್ಗಾ ಶೆನ್ನಾಗಿ ತುಂಬಿಶಿದರು. ಜನಗಳು ಮೊದಲೀ ಆಶಿಪುರುಕ್ರು. ಪುಗಸಟ್ಟೆ ಶಿಕ್ತು ಅಂದ್ರೆ ಕೇಳಬೇಕಾ. ಅವು ಎಂತಾ ಕತೆಗಳು ಏನು : ಎತ್ತುಗಳು ಎಳಿತಾವ, ಅಚ್ಚು ತಡದಾತಾ ಈ ಭಾರಾನ ಅಂತಕೂಡಾ ನೋಡುಲ್ಲ. ಫುಲ್ ಲೋಡ್ ಮಾಡಿದ್ರು, ಆ ಎತ್ತುಗಳು ಎಳೀಲಾರದಾ ಎಳಕಂಡು ಬತ್ತಾ ಅವೆ. ಎಲ್ಲಿಗಂಟಾ ಬಂದುವು, ಊರಗಂಟಾ ಬಂದುವು. ಮಾದಿಗರ ಮನೆಗಳ ತಾವ ಅದೆ ಗಾಡಿ ಅನ್ನೋವಾಗ ಒಂದು ಗಾಡಿ ಅಚ್ಚು ಮುರ್ದ್ವೋಯ್ತು. ಸರಿ, ಈ ದಾರಿ ಸರಿಗಿಲ್ಲ ಅಂತಾ ಇನ್ನೊಂದು ಗಾಡಿನಾ ಅಂಗಾಸಿ ವ್ರೊಡಕ್ಕಂಡು ಬಂದ್ರು. ಅದೂ ವ್ರೊಲೇರ ಮನೆಗ್ಳ ತಾವ ಅಚ್ಚು ಮುರುದು ಕುಂತಕಂತ್ತು ಸರಿ ಇನ್ನೇನು ಮಾಡೋದು ಸಂಸಾರಿಗಳ್ಕ ಅಷ್ಟ್ರಾಗ ಬೇಜಾರಾಗಿತ್ತು. ಎಲ್ಲೂರೂ ರವಷ್ಟು ತಕ್ಕಂಡು ವ್ರೋದ್ರು. ಬಾಕಿ ಕತೆಗಳ್ನ ನಾವು ವ್ರೊಲೇರೂ ಎತ್ತಿಕೊಂಡು ವ್ರೋದ್ವಿ. ಅದ್ರಕೇ ಸ್ವಾಮಿ ಸಂಸಾರಿಗಳಜನ್ನ ನಾವೇ ಎಚ್ಚುಗಾ ಕತೆಗಳು ಏಳಾದು ಎಂದು ತನ್ನ ಕತೆಯನ್ನು ಮುಗಿಸಿ. ತನ್ನ ತಾಯಿ ಆಣೆಯಾಗಿ ಈ ಕತೆ ಸತ್ಯವೆಂದು ಹೇಳಿದ.

ಆಧಾರ ಗ್ರಂಥಗಳು

1) ಶೇಷಶಾಸ್ತ್ರಿ ಆರ್ ; 1987, ಕತೆಯ ಕತೆಗಳು (ಹರತಿಸಿರಿ ; ಸಂ. ಲಕ್ಷ್ಮಣ್ ತೆಲಗಾವಿ) ಹರ್ತಿ ಕೋಟೆ, ವಾಲ್ಮೀಕಿ - ಸಾಹಿತ್ಯ ಸಂಪದ.

2) Dundes, Alan ; 1966. The Study of Folklore. Englewood cliffs, New Jersey : Prentice Hall.

3) Peter J. Claus and Frank. J. Korom ; 1991. Folkloristics and Indian Folklore, Udupi : RRC for Folk Performing Arts.

4) Ramanujan A. K ; 1987. 'The Relevance of South Asian Folklore' In Peter J. Claus, J. Handoo and D. P. Pattanayak (eds) Indian Folklore II, Mysore C. I. I. L.

"ಕವಿಯ ತುಡಿತ"

ವೈ. ಎಸ್. ಕೃಷ್ಣಮೂರ್ತಿ

ನಾಲ್ಕು ಗೋಡೆಗಳ ನಡುವೆ
ನಾನೇನ ಓದಲಿ ಕವನ
ಸಹಸ್ರಾರು ಮನಸ್ಸುಗಳು
ಕಾಯುತ್ತಿವೆ ನನ್ನ ॥

ನೊಂದು ಬೆಂದ ಒಡಲುಗಳು
ನನಸಾಗಿಸಲಾರದಂಥ
ಸುಳಿಗೆ ಸಿಕ್ಕ ಕನಸುಗಳು
ಕಾಯುತ್ತಿವೆ ನನ್ನ ॥

ಹರಿತವೆಂದು ಗೊತ್ತಿಹುದು
ಕತ್ತಿಗಿಂತ ಲೇಖನಿ
ಚಡಪಡಿಸುತ್ತಿಹುದಿಲ್ಲಿ
ಲೇಖನಿಯ ಆಧ್ವನಿ ॥

ಬಂಧಿಸಿಡಲಾರೆನಿಲ್ಲಿ
ಈ ನನ್ನ ಧ್ವನಿಯನ್ನ
ತುಡಿಯುತ್ತಿದೆ ನನ್ನಧ್ವನಿ
ಸೇರಲೆಂದು ಅವರನ್ನ ॥

ತೆರೆಯ ಬೇಕು ನಾನಿಂದು
ಅವರಿಗಾಗಿ ಬಾಯನ್ನ
ಬಳಸಬೇಕು ನಾನಿಂದು
ಅವರಿಗಾಗಿ ಲೇಖನಿಯನ್ನ ॥

ಅವರಿಗಾಗಿ ಬಿಚ್ಚಿಡಬೇಕು
ನನ್ನಧ್ವನಿಯ ಭಾವನ
ಅಂದು ಸಾರ್ಥಕವು
ಕವಿಯಹಾಗಿ ಜೀವನ

ಆರ್ಥಿಕ ಪ್ರಗತಿಗೆ ಕೃಷಿರಂಗದಲ್ಲಿ ತಾಂತ್ರಿಕತೆ ನಮಗೀಗ ಬೇಕು

ಡಾ. ಡಿ. ಕೆ. ಪೊದುವಾಳ್

ನಮ್ಮ ಗದ್ದೆ-ಬಯಲುಗಳೆಲ್ಲ ಸೀಮೆಂಟ್ ಕಾಡಾಗಿ ಕೃಷಿಯುತ್ಪನ್ನಕ್ಷಾಮದಿಂದಾಗಿ ಬೆಲೆಗಳು ಗಗನಕ್ಕೇರುತ್ತಿವೆ. ವಾಣಿಜ್ಯಬೆಳೆಗಳತ್ತ ಒಲವು, ನಗರ-ಪಟ್ಟಣಗಳತ್ತ ಆದರ, ಆಧುನಿಕತೆಯ ವ್ಯಾಮೋಹ, ಉದ್ಯೋಗ ಸೃಷ್ಟಿಮಾಡದ ವಿದ್ಯಾಭ್ಯಾಸ, ಸೇವಾಘಟಕಗಳಲ್ಲಿ ಭದ್ರತೆಯ ಕೆಲಸಪಡೆಯುವ ಬಗ್ಗೆ ಸದಾಚಿಂತೆ, ಕಾರ್ಮಿಕ ಸಂಘಗಳ ಭದ್ರರಕ್ಷಣೆ ——ಇವು ಇಂದಿನ ವರ್ಣಮಯ ಭಾರತವೆಂದರೆ ತಪ್ಪಾಗಲಾರದು. ಜನಸಂಖ್ಯಾಸ್ಫೋಟ, ಕಿತ್ತು ತಿನ್ನುವ ಬಡತನ—ಶೋಷಣೆಗಳು ಸಮಸ್ಯೆಗಳ ಗಹನತೆಯನ್ನು ತೀವ್ರಗೊಳಿಸುತ್ತಿವೆ.

ಕೃಷಿರಂಗದಲ್ಲಿ ಉತ್ಪಾದನೆಯಾಗದೆ ಯಾವದೇಶವೂ ಪ್ರಗತಿ ಸಾಧಿಸಲಾರದು. ಭಾರತದ ಅನೇಕ ಸಮಸ್ಯೆಗಳಿಗೆ ಉತ್ತರ ಇದೇ. ದಾರಿದ್ರ್ಯತನ — ಬಡತನಗಳಿಂದ ಎರಡು ಹೊತ್ತು ಅನ್ನ ಕಾಣದ, ಕೋಟಿಕೋಟಿ ಜನರಿರುವರು ನಮ್ಮ ದೇಶದಲ್ಲಿ ಆಧುನಿಕತೆ—ಅಭಿವೃದ್ಧಿಗಳು ಮೇಲ್ಮಟ್ಟವನ್ನೂ ತಲುಪಿಲ್ಲ. ಆದುದರಿಂದ ಕೃಷಿರಂಗದಲ್ಲಿ ಅಧಿಕ ಉತ್ಪಾದನೆಯನ್ನು ಸಾಧಿಸಲು ತಾಂತ್ರಿಕತೆಯ ಕಾಯಕಲ್ಪ ಸಾಗಬೇಕು. ದೇಶದ ಐದುಲಕ್ಷ ಹಳ್ಳಿಗಳ ಚಿಕ್ಕ ಚಿಕ್ಕ ಹಿಡುವಳಿಗಳಿಗೆ ಹೊಂದಿಕೊಳ್ಳುವ ಉಪಕರಣಗಳು ನಮ್ಮ ಅವಶ್ಯಕತೆ.

ಬಿತ್ತುವ ಉಳುವ ಕೊಯ್ಯುವ, ಸಂಗ್ರಹಿಸುವ ವೈಜ್ಞಾನಿಕ ರೀತಿ, ಬೀಜ ರಾಸಾಯನಿಕ ದ್ರವ್ಯ, ಕ್ರಿಮಿನಾಶಕ ಔಷಧಿ. ಗೊಬ್ಬರ ವಿದ್ಯುತ್ ಶಕ್ತಿ, ಕಾರ್ಮಿಕ ಹಾಗೂ ನೆಲ-ಜಲ ಸಂಪತ್ತುಗಳ ವಿಚಕ್ಷಿತ ಬಳಕೆ ಇವು ತಾಂತ್ರಿಕತೆಯ ಅರ್ಥವ್ಯಾಪ್ತಿಯಲ್ಲಿ ಬೀಡುಬಿಟ್ಟಿವೆ.

1979ರಲ್ಲಿ ಕೃಷಿ ಯಾಂತ್ರಿಕ ಉದ್ದಿಮೆ ರಂಗವು 1264 ಭೂಮಿ ಸರಿಪಡಿಸುವ (340 ಭಾರತ ನಿರ್ಮಿತ) ಯಂತ್ರಗಳನ್ನು ಹೊಂದಿತ್ತು. 1964ರಲ್ಲಿ ಭಾರತ್ ಅರ್ಥ್ ಮೂವರ್ಸ್ ಜಪಾನ್ ಸಹಯೋಗದಿಂದ ಅನೇಕ ನೀರಾವರಿ ಯಂತ್ರಗಳನ್ನು ಉತ್ಪಾದಿಸಿತು. ಮದ್ರಾಸಿನ TEREX ಪಶ್ಚಿಮ ಜರ್ಮನಿಯಿಂದಲೂ, ಲಾರ್ಸೆನ್ ಮತ್ತು ಟ್ಯುಬ್ರೊ ಫ್ರಾನ್ಸಿನ ಸಹಯೋಗದಿಂದಲೂ ಪ್ರವರ್ಧಮಾನಕ್ಕೆ ಗರಿಗೆದರಿಕೊಂಡವು.

ಬೃಹತ್ ಬಂಡವಾಳ ಬೇಡುವ ಕೃಷಿ ತಾಂತ್ರಿಕ ಉದ್ದಿಮೆಗಳ ಹುಟ್ಟು ಹಾಗೂ ಬೆಳವಣಿಗೆಯಲ್ಲಿ ಸರ್ಕಾರದ್ದೇ ಮುತ್ಸದ್ದಿಪಾತ್ರ ಎಂಬುದರಲ್ಲಿ ಎರಡು ಮಾತಿಲ್ಲ.

ಸಮಸ್ಯೆಗಳ ಬಗ್ಗೆ ಉದಾಹರಿಸುವುದಾದರೆ ಕರ್ನಾಟಕದಲ್ಲಿ ಶೇ. 29.9ರಷ್ಟು ಮಾತ್ರ ಸುಧಾರಿತ ಉಪಕರಣ ಬಳಕೆಯಾಗಲು ಕಾರಣ, ಏರುತ್ತಿರುವ ಟ್ರ್ಯಾಕ್ಟರು ಬಾಡಿಗೆ, ಇತ್ಯಾದಿ. ಟೈವಾನಿನಲ್ಲಿ 10,000 ಮಾನವ ಗಂಟೆಗಳು 10 ಟನ್ ಅಕ್ಕಿ ಉತ್ಪಾದಿಸಿದರೆ (ಜಪಾನಿನಲ್ಲಿ 5000 ಗಂಟೆಗಳಿಗೆ 5 ಟನ್), ಭಾರತದಲ್ಲಿಂದು 3000 ಗಂಟೆಗಳಿಗೆ 2 ಟನ್.

91 ಕೋಟಿಗೂ ಮೀರುವ ಭಾರತದ ಜನಸಂಖ್ಯೆಗೆ ಆಹಾರಾಭಾವ ಭರಿಸಲಾಗದ ಕುತ್ತು. ಉಳಿದ ದೇಶಗಳಿಗೆ ಅಲ್ಪ ಜನಸಂಖ್ಯೆ ವರದಾನವಾದರೆ ನಮಗದು ಶಾಪ. ಉತ್ಪಾದನಾ ಹೆಚ್ಚಳವೊಂದೇ ಬೆಲೆಯಿಳಿಸಲು ಹಾಗೂ ಹೊಟ್ಟೆ ತಣಿಸಲು ಮೇಲೆ ಹೇಳಿದಂತೆ ಪ್ರಜಾಸಂಖ್ಯಾ ಸ್ಫೋಟದಿಂದ ದೊರಕುತ್ತಿರುವ ಆಹಾರ ಪ್ರಮಾಣ ಕುಗ್ಗಿರುವುದು ಏರುತ್ತಿರುವ ಬೆಲೆಗಳು ಶ್ರುತಪಡಿಸುತ್ತಲಿವೆ. ಪರಿಹಾರ ಯಾಂತ್ರಿಕತೆಯಲ್ಲಡಗಿದೆ. ಶ್ರಮವುಳಿಸುವ ಹಾಗೂ ಮಿತಕಾಲ ಬಳಸುವ ಯಂತ್ರೋಪಕರಣಗಳು (ರೆಂಟೆ, ಒಡ್ಡು ನಿರ್ಮಿಸುವ ಉಪಕರಣ, ನೆಲ ಸರಿಪಡಿಸುವ ಹಲಗೆ, ಶೇಂಗಾ ಬೇರ್ಪಡಿಸುವ ಯಂತ್ರ, ಭತ್ತ ಒಕ್ಕುವ ಯಂತ್ರ, ಇತ್ಯಾದಿ) ಭಾರತದಲ್ಲಿ ದೊರಕುತ್ತವೆ.

ಬೃಹತ್ ಉತ್ಪಾದನೆ ನಮಗೀಗ ಬೇಕು. ಅದಕ್ಕೆ ಮೂಲಭೂತವಾಗಿ ಬೃಹತ್ ಬಂಡವಾಳದ ಆವಶ್ಯಕತೆ ಇದೆ. ಇದು ಪ್ರಜಾತಂತ್ರದ ಮೂಲಕ ಸಾಧಿಸಲ್ಪಡಬೇಕು. ಈ ಮೂರನ್ನು ಒಂದುಗೂಡಿಸುವುದು ಸಹಕಾರಿ ರಂಗವೊಂದೆ, ಅದರ ಅನುಷ್ಠಾನವಾಗಬೇಕೀಗ. ಡಾ. ವಿಶ್ವೇಶ್ವರಯ್ಯನವರು ಹೇಳಿದ್ದರು : "ಸಹಕಾರಿ ಸಂಘಗಳು ಭಾರತದಲ್ಲಿ ವಿಫಲಗೊಂಡಿವೆ–ಆದರೆ ಅವು ಜಯಗಳಿಸಬೇಕು."

ಯಾಂತ್ರೀಕರಣವು ನಿರುದ್ಯೋಗಕ್ಕೆಡೆ ಮಾಡಿಕೊಡುತ್ತದೆ ಎಂಬ ನಿಲುವಿದೆ. ಹಳ್ಳಿಗಳ ಬಗ್ಗೆ ಅಜ್ಞಾನವುಳ್ಳ ನಗರವಾಸಿಗಳು ನಡೆಸಿದ ಸಂಶೋಧನೆಯ ತಿರುಳಿದು. ಈ ಮಾತು ನಿಜವಲ್ಲ. ಯಾಂತ್ರಿಕರಣದಿಂದ ವಿಪುಲ ಆದಾಯ ತಲೆದೋರಿ ಕೈಗಾರಿಕಾ-ವ್ಯವಸಾಯಿಕ ಉತ್ಪನ್ನ ಬೇಡಿಕೆ ಹೆಚ್ಚುತ್ತದೆ. ಜನರ ಆದಾಯವೇರುವುದರಿಂದ ದೇಶವು ಪ್ರಗತಿ ಸಂಪನ್ನವಾಗುವುದು. ಬೆಲೆಗಳು ಉತ್ಪಾದನಾ ಹೆಚ್ಚಳದಿಂದ ಕಡಿಮೆಯಾಗುವುದರಿಂದ 'ಹಳ್ಳಿಬಿಟ್ಟು ದಿಲ್ಲಿ ಸೇರು' ನಿಲ್ಲುತ್ತದೆ. ಕುಟುಂಬದಲ್ಲಿ ಎಲ್ಲರೂ ಸಂಪಾದಿಸುವ ಅಗತ್ಯಕತೆಯುಂಟಾಗುವುದಿಲ್ಲ. ನಿರುದ್ಯೋಗ ಸಮಸ್ಯೆಯ ಹುಟ್ಟೇ ಕುಂಠಿತವಾಗುತ್ತದೆ. ದೇಶವು ತನ್ನ ಕಾಲಮೇಲೆ ತಾನು ನಿಲ್ಲಲು, ಬೆಳೆಯುವುದು ಸಾಧ್ಯವಾಗುತ್ತದೆ.

ಅತ್ಯಧಿಕ ಶ್ರಮವುಳಿಸುವ, ಅವಿರತ ಹಾಗೂ ಒಂದೇ ತರಹದ ಬೇಸರ ಹುಟ್ಟಿಸುವ ಕೆಲಸವು ಆರ್ಥಿಕ ಪ್ರಗತಿಯನ್ನು ಸಾಧಿಸಬಲ್ಲುದೆಂಬುದು ನಿಜ. ಆದರೆ ಅಲ್ಲಿ ತೃಪ್ತಿಯಿಲ್ಲ. ಮಾನಸಿಕ ತೃಪ್ತಿ ನೀಡದ ಕೆಲಸ ಬಹು ಕಾಲ ಸಾಗದು. ಅದುದರಿಂದ ದೇಶದ ಪ್ರಗತಿ ತೋರಿಕೆಯದಾಗುವುದು. ತಾಂತ್ರಿಕತೆಯನ್ನು ಪ್ರಗತಿ ಸಾಧಿಸಲು ತೃಪ್ತಿಯುಂಟುಮಾಡಲು ಬಳಸುವುದು ಇಂದಿನ ಅವಶ್ಯಕತೆ ಮಾತ್ರವಲ್ಲ. ಇದು ಎಂದೆಂದಿಗೂ ಇರತಕ್ಕ ಉತ್ತಮ ಪರಿಣಾಮವನ್ನು ಬೀರಬಲ್ಲುದು.

ವಿಜ್ಞಾನದ ಮಹತ್ತರ ಶಿಶುವಾದ ತಾಂತ್ರಿಕತೆಯು ಬಳಕೆ ವರವೇ ಸರಿ. ಸರಿಯಾಗಿ ಬಳಸಿಕೊಂಡರೆ ಇಂದಿನ ಜನಾಂಗ ಶ್ರಮವುಳಿಸುವುದರಲ್ಲಿ ತೀರ ಆಸಕ್ತರು. ಹಾಗೂ ಅಧಿಕ ಉತ್ಪಾದನೆಯತ್ತ ಒಲವುಳ್ಳವರು. ಯಾಂತ್ರಿಕತೆಯೊಂದೇ ಇವೆರಡನ್ನು ಒಟ್ಟಿಗೆ ಬೆಸೆಯುವ ಕೊಂಡಿ. 1972 ರ ಗ್ರಾಮೀಣ ನೀರಾವರಿ ಸಮಿತಿ ಹಾಗೂ 1976 ರ ರಾಷ್ಟ್ರೀಯ ಕೃಷಿ ಸಮಿತಿಗಳ ಶಿಫಾರಸ್ಸುಗಳ ಜತೆಜತೆಗೆ ಪ್ರಚಲಿತ ಜಿಲ್ಲಾ ಕೈಗಾರಿಕಾ ಕೇಂದ್ರಗಳು ಕೆಲವು ಆವಿಷ್ಕಾರಗಳನ್ನು—ಬೆಳೆ ತುಂಡರಿಸುವ ಯಂತ್ರ, ಬಕೆಟ್ಟು-ಡ್ರಮ್‌ಗಳ ಆವಿಷ್ಕಾರ—ಕೈಗೆತ್ತಿಕೊಂಡಿರುವುದು ಸ್ತುತ್ಯ.

ಪಂಜಾಬಿನ ಸ್ಥಿತಿಗತಿಗಳನ್ನು ಅವಲೋಕಿಸುವ : ಯಾಂತ್ರಿಕತೆ ವಲಸೆ ಹೋಗುವಿಕೆಯನ್ನು ಸ್ಥಗಿತಗೊಳಿಸಿದೆ ಆ ಪ್ರಾಂತ್ಯದಲ್ಲಿ. ಈಗ ಅಲ್ಲಿ ಯಾಂತ್ರಿಕತೆ ಶೇ. 160. ಅಲ್ಲದೆ, ಯಾಂತ್ರಿಕತೆಯು ಪಂಜಾಬಿನಲ್ಲಿ ವೇತನ ಹೆಚ್ಚಳವನ್ನು ಆಗುಮಾಡಿದೆ.

ಗ್ರಾಮೀಣ ಭಾರತದ ಬೆಳವಣಿಗೆಯಲ್ಲಿ ಕೃಷಿ ಆಧರಿತ ಕೈಗಾರಿಕೆಗಳಾದ ಟೀ, ಕಾಫೀ, ಬಟ್ಟೆಬರೆಗಳ ಪ್ರಗತಿ ಎಷ್ಟು ಮುಖ್ಯವೋ ಕೃಷಿಪೂರಕ ಯಂತ್ರೋದ್ಯಮಗಳ ಪ್ರಗತಿಯೂ ಅಷ್ಟೇ ಮುಖ್ಯ.

ಆಧುನಿಕ ಮಾಹಿತಿ ಪ್ರಸಾರ ಜಾಲ

ಪುಷ್ಪ ಜೋಸೆಫ್ ಮತ್ತು ಸಿ. ಪಿ. ರಾಮಶೇಷ್

ಯಾವುದೇ ಗ್ರಂಥಾಲಯು ತನ್ನದೇ ಆದ ಚೌಕಟ್ಟಿನಲ್ಲಿ ಗ್ರಂಥ-ಪತ್ರಿಕೆಗಳನ್ನು ಸಂಗ್ರಹಿಸಿ, ಸೇವೆ ಸಲ್ಲಿಸುವ ಕಾಲ ಮುಗಿಯಿತು. ಈಗ ಪರಾವಲಂಬಿಗಳಂತೆ ಕಾರ್ಯ ನಿರ್ವಹಿಸುವ ಅನಿವಾರ್ಯ ಪರಿಸ್ಥಿತಿ ಉಂಟಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಗ್ರಂಥಾಲಯುಗಳು ಒಟ್ಟುಗೂಡಿ ತಮ್ಮ ಸಂಪನ್ಮೂಲ ವಿನಿಮಯ ಕ್ರಿಯೆಗೆ ಜಾಲವನ್ನು ನಿರ್ಮಿಸಿ ಕಾರ್ಯಪ್ರವೃತ್ತವಾಗುವುವು. ಅವುಗಳನ್ನು 'ಆನ್ ಲೈನ್' ವ್ಯವಸ್ಥೆಗಳು ಎನ್ನುವರು. ಇವುಗಳ ಮೂಲಕ ಓದುಗರು ವಿವಿಧ ದತ್ತಾಂಶ ಕೇಂದ್ರಗಳಲ್ಲಿನ ಮಾಹಿತಿಯನ್ನು ತಾವಿರುವಲ್ಲೇ ನೇರವಾಗಿ ಪಡೆಯುವರು. ಅಂದರೆ ಸರ್ವ ವಿಷಯಗಳ ಗ್ರಂಥಗಳು, ನಿಯತಕಾಲಿಕೆಗಳು ಗ್ರಂಥಸೂಚಿಗಳು ಮುಂತಾದ ವಿವರಗಳನ್ನು ದತ್ತಾಂಶ ಕೇಂದ್ರಗಳಲ್ಲಿ ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಸಂಗ್ರಹಿಸಲಾಗಿ ಬೇಕಾದ ನಿರ್ದಿಷ್ಟ ಮಾಹಿತಿಯನ್ನು 'ಆನ್ ಲೈನ್' ವ್ಯವಸ್ಥೆ ಮೂಲಕ ನೇರವಾಗಿ ಪಡೆದುಕೊಳ್ಳಬಹುದು. 'ಆನ್ ಲೈನ್' ಎಂದರೆ ನಮ್ಮ ದೂರವಾಣಿ ಉಪಕರಣವನ್ನು ವೈಯಕ್ತಿಕ ಕಂಪ್ಯೂಟರ್‌ಗೆ (ಪಿ.ಸಿ.) ಅಳವಡಿಸಿ ಯಾವುದೇ ದತ್ತಾಂಶ ಕೇಂದ್ರದಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ನೇರವಾಗಿ ನಾವಿರುವಲ್ಲೇ ಪಡೆಯುವುದು. ವ್ಯಾವಹಾರಿಕವಾಗಿ ನಾವು ಮಾಹಿತಿ ಹುಡುಕುವ ರೀತಿಯಲ್ಲೇ ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಇರುವ ಮಾಹಿತಿಯನ್ನು ನಮ್ಮ ಅವಶ್ಯಕತೆಗೆ ತಕ್ಕಂತೆ ಕಂಪ್ಯೂಟರ್ ಮೂಲಕ ವಿಚಾರಣೆ ಮಾಡಿ ಉತ್ತರ ಪಡೆಯಬೇಕಾಗುವುದು. ಈ ವಿಚಾರಗಳಿಗೆ ಸಮಂಜಸ ಉತ್ತರವನ್ನು ಕಂಪ್ಯೂಟರ್ ದತ್ತಾಂಶ ಕೇಂದ್ರದಲ್ಲಿ ಸಂಗ್ರಹಿಸಿದ ಮಾಹಿತಿಯಲ್ಲಿ ಹುಡುಕಿ ಒದಗಿಸುವುದು. ಇಂತಹ 'ಆನ್ ಲೈನ್' ಮಾಹಿತಿ ಜಾಲಗಳು ವಿಶ್ವದಲ್ಲಿ ಹಲವಾರಿವೆ. ಅವುಗಳಲ್ಲಿ ಪ್ರಖ್ಯಾತಿ ಪಡೆದ ಕೆಲವೆಂದರೆ :

ಭಾರತದಲ್ಲಿನ ಆನ್ ಲೈನ್ ಮಾಹಿತಿ ವ್ಯವಸ್ಥೆಗಳು

Delnet ಡೆಲ್ನೆಟ್-ದೆಹಲಿ ಗ್ರಂಥಾಲಯುಗಳ ಮಾಹಿತಿ ಜಾಲ
Calibnet ಕ್ಯಾಲಿಬ್‌ನೆಟ್-ಕಲ್ಕತ್ತಾ ಗ್ರಂಥಾಲಯುಗಳ ಮಾಹಿತಿ ಜಾಲ
Desinet ಡೆಸಿನೆಟ್-ರಕ್ಷಣಾ ವಿಜ್ಞಾನ ಮಾಹಿತಿ ಜಾಲ
Btisnet ಬಿಟಿಐಸ್‌ನೆಟ್-ಜೀವ ತಂತ್ರಜ್ಞಾನ ಮಾಹಿತಿ ವ್ಯವಸ್ಥೆಯ ಜಾಲ
Nicnet ನಿಕ್‌ನೆಟ್-ರಾಷ್ಟ್ರೀಯ ಮಾಹಿತಿ ಕೇಂದ್ರ ಜಾಲ

ವಿದೇಶಗಳಲ್ಲಿನ ಆನ್ ಲೈನ್ ಮಾಹಿತಿ ವ್ಯವಸ್ಥೆಗಳು

Dialog ಡೈಲಾಗ್ (ಅಮೆರಿಕಾ)
Datanet ಡೆಟಾನೆಟ್ (ನದರ್‌ಲ್ಯಾಂಡ್ಸ್)
ISA/IRS ಈಸ/ಐ ಆರ್ ಎಸ್ (ಫ್ರಾನ್ಸ್)
Datex. P ಡಟೆಕ್ಸ್. ಪಿ. (ಜರ್ಮನಿ)
Tymnet ಟಿಮ್‌ನಟ್ (ಅಮೆರಿಕಾ)
Telepac ಟೆಲಿಪ್ಯಾಕ್ (ಸ್ವಿಡ್ಸ್ವರ್‌ಲ್ಯಾಂಡ್)
OCLC ಒ ಸಿ ಎಲ್ ಸಿ (ಅಮೆರಿಕ)

ಮೇಲೆ ಹೇಳಿರುವ ವ್ಯವಸ್ಥೆಗಳಲ್ಲಿ ಕೆಲವು ಖಾಸಗಿ ಸಂಸ್ಥೆಗಳಿಂದ ನಿರ್ಮಿತ ವಾಗಿವೆ. ಇವು ದತ್ತಾಂಶ ಕೇಂದ್ರಗಳಿಗೆ ಸಂಪರ್ಕವನ್ನು ಕಲ್ಪಿಸುವಲ್ಲಿ ಪರಿಣತೆ ಹೊಂದಿದ್ದು, ಪ್ರಭಾವಶಾಲಿ ಮಾಹಿತಿ ಜಾಲವನ್ನು ನಿರ್ಮಿಸುವುದರ ಮೂಲಕ ಓದುಗರಿಗೆ ಸೇವೆ ಸಲ್ಲಿಸುತ್ತಲಿವೆ. ಹಾಗೆಯೇ ಕೆಲವು ಪ್ರಖ್ಯಾತಿ ಪಡೆದ ಆನ್ ಲೈನ್ ದತ್ತಾಂಶ ಕೇಂದ್ರಗಳೆಂದರೆ :

ಭಾರತದ ಆನ್ ಲೈನ್ ದತ್ತಾಂಶ ಕೇಂದ್ರಗಳು

ಕೇಂದ್ರ ಆಹಾರ ವಿಜ್ಞಾನ ಸಂಶೋಧನಾ ಸಂಸ್ಥೆಯು	:	Fostis
ಬಾಬಾ ಅಣು ವಿಜ್ಞಾನ ಸಂಶೋಧನಾ ಕೇಂದ್ರದ	:	Inis
ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯು	:	Agris

ವಿದೇಶಿ ಆನ್ ಲೈನ್ ದತ್ತಾಂಶ ಕೇಂದ್ರಗಳು

Medline	ವೈದ್ಯಕೀಯ ಮಾಹಿತಿ (ಅಮೆರಿಕ)
Ca-Search	ರಸಾಯನಿಕ ಶಾಸ್ತ್ರಕ್ಕೆ ಸಂಬಂಧಿಸಿದ ಪ್ರಕಟಣೆಗಳ ಸಾರಾಂಶಗಳು (ಅಮೆರಿಕ)
Biosis	ಜೀವಶಾಸ್ತ್ರಕ್ಕೆ ಸಂಬಂಧಿಸಿದ ಪ್ರಕಟಣೆಗಳ ಸಾರಾಂಶಗಳು (ಅಮೆರಿಕ)
Inspec	ಭೌತಶಾಸ್ತ್ರಕ್ಕೆ ಸಂಬಂಧಿಸಿದ ಪ್ರಕಟಣೆಗಳ ಸಾರಾಂಶಗಳು (ಇಂಗ್ಲೆಂಡ್)

ಆನ್ ಲೈನ್ ದತ್ತಾಂಶ ಕೇಂದ್ರಗಳಲ್ಲಿ ಮೂಲತಃ ಎರಡು ವಿಧಗಳಿವೆ.

1. ಪರಾಮರ್ಶನ ಸೇವೆಯ ದತ್ತಾಂಶ ಕೇಂದ್ರಗಳು – ಇವು ಕೇವಲ ಪ್ರಕಟಣೆಗಳ ವಿವರಗಳನ್ನು (ಗ್ರಂಥಸೂಚಿ) ಮತ್ತು ವಿವಿಧ ಮಾಹಿತಿ ವಿಚಾರಗಳಿಗೆ ಎಲ್ಲಿ ಉತ್ತರ ದೊರೆಯುವುದು ಎಂಬುದಾಗಿ ಹೇಳುತ್ತದೆ.

2. ಮಾಹಿತಿ ಒದಗಿಸುವ ದತ್ತಾಂಶ ಕೇಂದ್ರಗಳು – ಇವುಗಳು ಮೂಲ ಮಾಹಿತಿಯನ್ನೇ ಸಂಗ್ರಹಿಸಿ ಬೇಡಿಕೆಗಳಿಗೆ ಅನುಗುಣವಾಗಿ ಉತ್ತರ ದೊರಕಿಸಿ ಕೊಡುತ್ತವೆ. ಇಲ್ಲಿ ದೊರೆಯಬಹುದಾದ ಉತ್ತರ ವಿವಿಧ ರೂಪಗಳಲ್ಲಿರುತ್ತವೆ. ಅಂಕಿ-ಸಂಖ್ಯೆಗಳು ಕೋಷ್ಟಕಗಳು, ಸೂತ್ರಗಳು ಗ್ರಂಥಪಾಠಗಳು ಇತ್ಯಾದಿ.

ಮೆಡ್ಲೈನ್ Medline : ಆನ್ ಲೈನ್ ವೈದ್ಯಕೀಯ ಮಾಹಿತಿ ವ್ಯವಸ್ಥೆ

ಇಪ್ಪತ್ತನೇ ಶತಮಾನದಲ್ಲಿ ವಿಜ್ಞಾನದ ಮುನ್ನಡೆ ಗಮನಾರ್ಹವಾದುದು. ವಿಜ್ಞಾನಿಗಳ ಸತತ ಪರಿಶ್ರಮ ಮತ್ತು ಸಂಶೋಧನೆಗಳ ಫಲವಾಗಿ ಹಲವಾರು ಕ್ಷೇತ್ರಗಳಲ್ಲಿ ಪ್ರಗತಿಯನ್ನು ಸಾಧಿಸಲಾಗಿದೆ. ಹೊಸ ಹೊಸ ಯಂತ್ರೋಪಕರಣಗಳನ್ನು ಅಳವಡಿಸಿಕೊಂಡು ತಂತ್ರಜ್ಞರು ಜನತೆಗೆ ಹಲವು ರೀತಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇದನ್ನು ಸಾಧಿಸಲು ತಂತ್ರಜ್ಞರಿಗೆ ವಿವಿಧ ಮೂಲಗಳಿಂದ ವೈಜ್ಞಾನಿಕ ಮಾಹಿತಿಗಳು ನಿರಂತರವಾಗಿ ಒದಗುತ್ತಿರಬೇಕು. ಇಂತಹ ಮಾಹಿತಿಗಳನ್ನು ಒದಗಿಸುವ ಕಾರ್ಯವನ್ನು ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ 'ಮೆಡ್ಲೈನ್' ಅತ್ಯಂತ ಯಶಸ್ವಿಯಾಗಿ ನಿರ್ವಹಿಸುತ್ತಿದೆ. ಮೆಡ್ಲೈನ್ MEDICAL LITERATURE ON LINE (MEDLINE) ಎಂಬುದರ ಸಂಕ್ಷಿಪ್ತ ರೂಪ, ಇದು ಅಮೆರಿಕ ಸಂಯುಕ್ತ ಸಂಸ್ಥಾನಗಳ ರಾಷ್ಟ್ರೀಯ ವೈದ್ಯಕೀಯ ಗ್ರಂಥಾಲಯದ ಒಂದು ಸೇವಾ ವ್ಯವಸ್ಥೆ. ವಾಷಿಂಗ್‌ಟನ್‌ನಲ್ಲಿ ಸ್ಥಾಪಿತವಾಗಿರುವ ಈ ಕೇಂದ್ರದ ಮುಖ್ಯ ಉದ್ದೇಶ ವೈದ್ಯನಿಗೆ ಹಾಗೂ ವೈದ್ಯಕೀಯ ಸಂಶೋಧನೆಗಳಲ್ಲಿ ತೊಡಗಿರುವವರಿಗೆ ಪ್ರಚಲಿತ ವೈದ್ಯಕೀಯ ವಿಷಯಗಳ ವಿಶ್ಲೇಷಣ ಮಾಹಿತಿಯನ್ನು ಒದಗಿಸುವುದು. 1961 ರ ದಶಕದ ಉತ್ತರಾರ್ಧದಿಂದ ಈ ದಿಕ್ಕಿನಲ್ಲಿ ತುಂಬಾ ಗಮನಾರ್ಹವಾದ ಸೇವೆಯನ್ನು ಸಲ್ಲಿಸುತ್ತಾ ಬಂದಿದೆ.

ಮಾಹಿತಿ ಪ್ರಸರಣ ವ್ಯವಸ್ಥೆಯಲ್ಲಿ ಬಳಸುವ ಉಪಕರಣಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು : (1) ರಾಷ್ಟ್ರೀಯ ಗ್ರಂಥಾಲಯದಲ್ಲಿ ಕೇಂದ್ರೀಕೃತವಾಗಿ ಅಳವಡಿಸಲ್ಪಟ್ಟ ಕಂಪ್ಯೂಟರ್ (ಗ್ರಾಹಕ) : ಇದರಲ್ಲಿ ಪ್ರಚಲಿತ ನಿಯತಕಾಲಿಕೆಗಳು ಹಾಗೂ ಮತ್ತಿರ ಸಂಶೋಧನೆಗಳ ವಿವರಗಳನ್ನು 5 × 3 ಅಳತೆಯ ಫೋಟೋ ಫಿಲ್ಮ್‌ಗಳ ಮೇಲೆ ಮುದ್ರಿಸಿರುವ 'ಮೈಕ್ರೋಫಿಲ್‌ಗಳು' ವ್ಯವಸ್ಥಿತವಾಗಿ ವರ್ಗೀಕರಿಸಿರಲಾಗಿರುತ್ತದೆ. (2) ಟೆಲಿವಿಷನ್ ಪರದೆ ಮತ್ತು ಟೈಪರೈಟರ್ ಹೋಲುವ ಉಪಕರಣ ಕಂಪ್ಯೂಟರ್ ಟರ್ಮಿನಲ್ : (3) ಕಂಪ್ಯೂಟರ್ ಕನ್ಸೋಲ್ : ಇದರಲ್ಲಿ ಮಾಹಿತಿಗಳನ್ನು ನೆನಪಿನ ಸಂಗ್ರಹದಲ್ಲಿ ದಾಖಲೆ ಮಾಡಿಟ್ಟುಕೊಂಡು ಅಗತ್ಯವಾದಾಗಲೆಲ್ಲ ನೀಡಬಲ್ಲ ವ್ಯವಸ್ಥೆ ಇದೆ. ಈ ಭಾಗಕ್ಕೆ ಕಂಪ್ಯೂಟರ್ ಕನ್ಸೋಲ್ ಎಂದು ಹೆಸರು.

ರಾಷ್ಟ್ರೀಯ ವೈದ್ಯಕೀಯ ಗ್ರಂಥಾಲಯದಲ್ಲಿ ಮಾಹಿಗಳು ದಾಖಲೆಯಾಗಿರುವ ಮುಖ್ಯ ಕಂಪ್ಯೂಟರ್ ಇರುತ್ತದೆ. ಮಾಹಿತಿಗಳು ಅಗತ್ಯವಿರುವ ಆಸ್ಪತ್ರೆಗಳಲ್ಲಿ ಸಂಶೋಧನಾ ಕೇಂದ್ರಗಳಲ್ಲಿ, ವಿಜ್ಞಾನಿಗಳಲ್ಲಿ, ಗ್ರಂಥಾಲಯಗಳಲ್ಲಿ ಕಂಪ್ಯೂಟರ್–ಟರ್ಮಿನಲ್ ಉಪಕರಣಗಳು ಇರುತ್ತವೆ. ಈ ಉಪಕರಣವನ್ನು ಸುಲಭವಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಒಯ್ಯಬಹುದು. ಸಾಮಾನ್ಯವಾಗಿ ಸಂಶೋಧನಾ ನಿರತ ವೈದ್ಯರು ಸ್ವಂತ ಟರ್ಮಿನಲ್‌ಗಳನ್ನು ಇಟ್ಟುಕೊಂಡಿರುತ್ತಾರೆ.

ಹೀಗೆ ವ್ಯವಸ್ಥಿತ ವಿಷಯ ಪ್ರಸರಣವನ್ನು ಈ ರೀತಿ ವಿವರಿಸಬಹುದು: ಉದಾಹರಣೆಗೆ, ಜಠರ ನೋವಿನಿಂದ ನರಳುವ ರೋಗಿ ವೈದ್ಯನಲ್ಲಿಗೆ ಬರುತ್ತಾನೆ. ಆತನ ರೋಗದ ಬಗ್ಗೆ ವೈದ್ಯನಲ್ಲಿ ಹಲವು ತರದ ಸಂಶಯ ಹಾಗೂ ಸಮಸ್ಯೆಗಳು ಉದ್ಭವಿಸಬಹುದು. ರೋಗಗಳನ್ನು ಖಚಿತವಾಗಿ ಗೊತ್ತುಪಡಿಸಲು ರೋಗದ ಮೂಲಲಕ್ಷಣಗಳನ್ನು ವೈದ್ಯನು ಅರಿತಿರಬೇಕು. ಒಂದು ಪಕ್ಷ ಆತ ಅದನ್ನು ಮರೆತಲ್ಲಿ ಅವನು ಆ ಖಾಯಿಲೆ ಜಠರ ಚರ್ಮಗಳ ಊತ (ಗ್ಯಾಸ್ಟ್ರಿಟಿಸ್) ಎಂದು ಊಹಿಸುತ್ತಾನೆ. ಆ ಖಾಯಿಲೆಯ ವಿವರಗಳನ್ನೊಳಗೊಂಡ ಕಂಪ್ಯೂಟರ್ ಹಲವು ಮೈಲಿ ದೂರದಲ್ಲಿದ್ದರೂ ವೈದ್ಯ ತನ್ನ ಟರ್ಮಿನಲ್ ಲಕ್ಷಣಗಳು ಏನೆಂದು ಪ್ರಶ್ನಿಸುವನು. ಆಗ ಆ ರೋಗಕ್ಕೆ ಸಂಬಂಧಿಸಿದ ವಿವರಗಳುಳ್ಳ ನಿರ್ದಿಷ್ಟ ಮೈಕ್ರೋಚಿಪ್ ತನ್ನ ಸಾಲಿನಿಂದ ಚಿಮ್ಮಿ ಮೇಲೆ ಬರುತ್ತದೆ. ಆಗ ಅದರ ಮೂಲಕ ಬೆಳಕು ಹಾದು ವಿವರಗಳು ಗ್ರಾಹಕದ ಮೇಲೆ ಬೀಳುವುದು. ಈ ವಿವರ ತಂತಿಯ ಮೂಲಕ ಹೊರಟು ವೈದ್ಯನ ಟರ್ಮಿಲ್‌ನಲ್ಲಿರುವ ಟೆಲಿವಿಷನ್ ಮಾದರಿಯ ಪರದೆ ಮೇಲೆ ಮೂಡುತ್ತದೆ. ಈ ಲಕ್ಷಣಗಳನ್ನೊಳಗೊಂಡ ವಿವರಗಳನ್ನು ಗ್ರಹಿಸಿದ ವೈದ್ಯ ತನ್ನ ಪ್ರಶ್ನೆಗಳನ್ನು ಮುಂದುವರಿಸಿ, ಇದಕ್ಕೆ ಸಂಬಂಧಿಸಿದ ಹೆಚ್ಚಿನ ವಿವರಗಳನ್ನು ತಿಳಿಯಲು ತೊಡಗುತ್ತಾನೆ. ಪೇಟೆಯಲ್ಲಿ ಆ ರೋಗಕ್ಕೆ ಬಳಕೆಯಲ್ಲಿರುವ ಔಷಧಗಳು ಯಾವುದೆಂದು ಯಥಾಪ್ರಕಾರ ವಿವರಗಳಿಗೆ ಬೆರಳಚ್ಚು ಮೂಲಕ ಪ್ರಶ್ನೆ ಮಾಡುವನು. ಅನಂತರ ಉತ್ತರ ಒಂದರ ಕೆಳಗೆ ಮತ್ತೊಂದರಂತೆ ಪರದೆ ಮೇಲೆ ಮೂಡುವುದು. ಇದೇ ರೀತಿ ಮುಂದುವರಿದರೆ ರೋಗಿಗೆ ಕೊಡಬೇಕಾದ ಔಷಧದ ಅಂಶ ಪ್ರಮಾಣ ಮತ್ತು ಆ ಔಷಧಿಯ ಬಳಕೆಯಿಂದ ರೋಗಿಗೆ ಆಗಬಹುದಾದ ದುಷ್ಪರಿಣಾಮದ ವಿವರಗಳನ್ನು ತಿಳಿಯಬಹುದು. ಈ ವಿವರಗಳನ್ನು ಕಂಪ್ಯೂಟರ್ ಕನ್ಸೋಲ್ ಎಂಬ ನೆನಪಿನ ದಾಖಲೆ ಸಾಧನದ ಮೂಲಕ ಟರ್ಮಿನಲ್‌ನಲ್ಲೇ ದಾಖಲೆ ಮಾಡಿಟ್ಟುಕೊಳ್ಳಬಹುದು. ಮತ್ತೆ ಬೇಕಾದಾಗ ಪರದೆ ಮೇಲೆ ವಿವರಗಳು ಮೂಡುವಂತೆ ಮಾಡಲು ಸಲಕರಣೆಗಳಿರುತ್ತವೆ. ಹೀಗೆ ವೈದ್ಯನು ರೋಗದ ಮೂಲ ಲಕ್ಷಣಗಳಿಂದ ರೋಗಿ ಗುಣಮುಖವಾಗುವವರೆಗೆ ಬೇಕಾಗುವ ಮಾಹಿತಿಗಳನ್ನು ಪಡೆಯಬಹುದು.

ಮತ್ತೊಂದು ಗಮನಾರ್ಹ ಸಂಗತಿ ಎಂದರೆ ಇತ್ತೀಚಿನ ಬೆಳವಣಿಗೆಗಳಿಂದ ಮಾಹಿತಿಯನ್ನು ಮೈಕ್ರೊಚಿಪ್‌ಗಳಲ್ಲಿ ಸಂಗ್ರಹಿಸುವ ಬದಲು ಸಿ ಡಿ ಆರ್ ಒ ಎಂ ಅಡಕ ತಟ್ಟೆಗಳಲ್ಲಿ ಸಂಗ್ರಹಿಸಲಾಗುತ್ತಿದೆ.

ಡೈಲಾಗ್ : ಜನಪ್ರಿಯ ಆನ್ ಲೈನ್ ಮಾಹಿತಿ ವ್ಯವಸ್ಥೆ

ಮಾಹಿತಿ ಅತ್ಯಂತ ಪ್ರಭಾವಶಾಲಿ ಹಾಗೂ ಶಕ್ತಿಶಾಲಿ ಎನ್ನುವುದು ಮನದಟ್ಟಾದ ವಿಷಯ. ಡೈಲಾಗ್ ಸೇವಾಸೌಲಭ್ಯಗಳು ಈ ಶಕ್ತಿಯುತ ಮಾಹಿತಿಯನ್ನು ಪಡೆಯ

ವಲ್ಲಿ ಸಹಾಯ ಹಸ್ತ ನೀಡುವ ಸಂಸ್ಥೆಯಾಗಿದೆ. ಬೇಕೆಂದ ಯಾವುದೇ ವಿಚಾರಕ್ಕೆ ಮಾಹಿತಿಯನ್ನು ನಿಷ್ಕೃಷ್ಟವಾಗಿ ಒಡನೆಯೇ ಪಡೆಯಬಹುದಾದ ಸೌಕರ್ಯವನ್ನು ಡೈಲಾಗ್ ಕಲ್ಪಿಸುತ್ತದೆ.

ಡೈಲಾಗ್, ಅಮೆರಿಕಾ ಸಂಯುಕ್ತ ಸಂಸ್ಥಾನದ ಕ್ಯಾಲಿಫೋರ್ನಿಯಾದಲ್ಲಿ ಸ್ಥಾಪಿತ ವಾಗಿದ್ದು, ಹಲವಾರು ರಾಷ್ಟ್ರಗಳಲ್ಲಿನ ವಿವಿಧ ದತ್ತಾಂಶ ಕೇಂದ್ರಗಳಿಗೆ ನೇರ ಸಂಪರ್ಕ ತಂದುಕೊಡುವ ಖಾಸಗಿ ಸಂಸ್ಥೆಯಾಗಿದೆ. ಈ ರೀತಿಯಲ್ಲಿ ದತ್ತಾಂಶ ಕೇಂದ್ರಗಳ ಮತ್ತು ಮಾಹಿತಿ ಉಪಯೋಗಿಸುವವರ ನಡುವೆ ನೇರ ಸಂಪರ್ಕ ಕಲ್ಪಿಸುವ ಮೂಲಕ ಈ ಖಾಸಗಿ ಸಂಸ್ಥೆ ಹಣ ಸಂಪಾದನೆಯಲ್ಲಿ ತೊಡಗಿದೆ.

ಡೈಲಾಗ್ ಸೇವಾಸೌಲಭ್ಯಗಳು ಅತ್ಯಂತ ಶಕ್ತಿಯುತ ಹಾಗೂ ಸಮಗ್ರವಾದದ್ದು ನಾನಾ ರೀತಿಯ ವಿಚಾರಣೆಗಳಿಗೆ ತಕ್ಕಂತೆ ದತ್ತಾಂಶ ಒದಗಿಸಬಲ್ಲದು–ಯಾವ ವ್ಯಾಪಾರಿಯಾಗಲಿ ಅಥವಾ ವೃತ್ತಿನಿರತ ವ್ಯಕ್ತಿಯಾಗಲಿ, ತನ್ನ ಅಭಿರುಚಿಗೆ ಮತ್ತು ಅವಶ್ಯಕತೆಗೆ ತಕ್ಕ ಮಾಹಿತಿ ಪಡೆಯಲು ಅವಕಾಶ ಕಲ್ಪಿಸಿ ಸರಳ ಸೂತ್ರಗಳ ಮೂಲಕ ಬೇಕಾದ್ದನ್ನು ಪಡೆದುಕೊಳ್ಳಲು ಅವನಿಗೇ ಬಿಡಲಾಗುತ್ತದೆ. ಅಗತ್ಯ ಮಾಹಿತಿಯನ್ನು ಪಡೆಯುವಲ್ಲಿ ಸಹಾಯ ಹಸ್ತ ನೀಡುವುದಲ್ಲದೆ, ಈ ಸಂಸ್ಥೆ ಮತ್ತೊಂದು ಹೆಜ್ಜೆ ಮುಂದೆ ಸಾಗಿ ಮಾಹಿತಿ ಪಡೆಯುವ ಚಾಕಚಕ್ಯತೆ, ಕುಶಲತೆ, ಜಾಣ್ಮೆಯನ್ನು ಕಲಿಸಿ ಜ್ಞಾನದೇಗುಲಕ್ಕೆ ದಾರಿ ತೋರಿಸುತ್ತದೆ. ಹಾಗೆಯೇ ನಂತರದ ಜೀವನದಲ್ಲಿ ಮಾಹಿತಿಯೇ ಮೂಲಾಧಾರ ಎನ್ನುವಂತೆಯೂ ಮಾಹಿತಿಯಲ್ಲಿ ಮೋಜು ಕಾಣು ವಂತೆಯೂ ಮಾಡುತ್ತವೆ.

ಆನ್ ಲೈನ್ ಮಾಹಿತಿ ವ್ಯವಸ್ಥೆ ಬಳಸಿ ಸಂಶೋಧಕ ತನ್ನ ಮೇಜಿನೆದುರೇ ಕುಳಿತು ಅನಾಯಾಸವಾಗಿ ಕೋಟಿಗಟ್ಟಲೆ ವಿವಿಧ ಮಾಹಿತಿ ಆಕಾರಗಳನ್ನು ಹುಡುಕಿ, ಆರಿಸಿ ತನಗೆ ಸಮಂಜಸ ಎಂಬುದನ್ನು ಮಾತ್ರ ಪಡೆದುಕೊಳ್ಳಬಹುದು. ಡೈಲಾಗ್ ಸಂಸ್ಥೆ ಸಂಪರ್ಕ ಕಲ್ಪಿಸುವ ದತ್ತಾಂಶ ಕೇಂದ್ರಗಳಲ್ಲಿ ಸಂಗ್ರಹವಾದ ಮಾಹಿತಿ ಅಂಕಿ–ಸಂಖ್ಯೆ ಇತ್ಯಾದಿ ಸಮಗ್ರ ಹಾಗೂ ಪ್ರಚಲಿತವಾದದ್ದು ಎನ್ನುವುದರಲ್ಲಿ ಸಂದೇಹವಿಲ್ಲ. ಆದುದರಿಂದ ಈ ಖಾಸಗಿ ವ್ಯಾಪಾರ ಸಂಸ್ಥೆ ಮೇಲುಗೈ ಸಾಧಿಸಲು ಮುಖ್ಯವಾಗಿ ವೈದ್ಯಕೀಯ, ರಸಾಯನಶಾಸ್ತ್ರ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಪ್ರಚಲಿತ ವಿದ್ಯಮಾನಗಳ ಬೆಳವಣಿಗೆಗಳು ಮತ್ತು ನೂತನ ಪದ್ಧತಿಗಳನ್ನು ನೀಡುತ್ತಿದೆ. ಆನ್ ಲೈನ್ ಸೌಲಭ್ಯ ಕಲ್ಪಿಸಿರುವಲ್ಲಿ ಮಾಹಿತಿ ಪಡೆಯಲು ಇಚ್ಛಿಸುವ ಸದಸ್ಯ ಮಾಡಬೇಕಾಗಿರುವುದು ಕೇವಲ ಬೆರಳನ್ನು ಆಡಿಸುವುದಷ್ಟೇ ಯಾವುದೇ ಸಮಯವಾಗಲಿ ಹಗಲು ಇರುಳು ಎನ್ನದೆ ಸದಾ ಕಾಲ ಮಾಹಿತಿ ಪಡೆದುಕೊಳ್ಳುವ ಅವಕಾಶ ಕಲ್ಪಿಸಿದ್ದು ಭಾನುವಾರ ಗಳಂದು ಮಧ್ಯರಾತ್ರಿ ವೇಳೆಯಲ್ಲಿ ಕೆಲವು ತಾಸುಗಳಷ್ಟು ಮಾತ್ರ ಈ ವ್ಯವಸ್ಥೆಗೆ ವಿರಾಮವಿರುತ್ತದೆ.

ನಾನಾ ರೀತಿಯ ಸೇವಾಸೌಲಭ್ಯಗಳಿಂದ ಕೂಡಿದ್ದು ವಿಶ್ವದ ಆನ್ ಲೈನ್ ಮಾಹಿತಿ ವ್ಯವಸ್ಥೆಗಳಲ್ಲಿ ಡೈಲಾಗ್ ಸೌಲಭ್ಯ ಸಮಗ್ರ ಹಾಗು ಅತ್ಯಂತ ಶಕ್ತಿಶಾಲಿ ಸಮಗ್ರತೆಗೆ ಮೂಲ ಕಾರಣ ಏನೆಂದರೆ ಸುಮಾರು 450ಕ್ಕೂ ಹೆಚ್ಚಿನ ದತ್ತಾಂಶ ಕೇಂದ್ರಗಳಿಗೆ ಸಂಪರ್ಕ ಕಲ್ಪಿಸಬಲ್ಲ ಸಾಮರ್ಥ್ಯ ಪಡೆದಿದೆ. ಅತ್ಯಂತ ಶಕ್ತಿಶಾಲಿ, ಏಕೆಂದರೆ ತಪಾಸಣಾ ವಿಧಾನ ಸರಳ ಮತ್ತು ನಾನಾ ಶೈಲಿಗಳಿಗೂ ಹೊಂದಿಕೊಳ್ಳುತ್ತವೆ. ಬಹು ಮುಖ್ಯವಾಗಿ ಇಲ್ಲಿನ ಕಾರ್ಯಗತಿ ತ್ವರಿತವಾಗಿ ಮಿತವ್ಯಯದಲ್ಲಿ ಸಾಗುತ್ತದೆ.

'ಡೈಲಾಗ್' ನೇರ ಮಾಹಿತಿ ಸೌಲಭ್ಯಕ್ಕಾಗಿ ಬೇಕಾಗುವ ಯಂತ್ರೋಪಕರಣ.

1 ವೈಯಕ್ತಿಕ ಕಂಪ್ಯೂಟರ್(ಪಿಸಿ) ಅಥವಾ ಟರ್ಮಿನಲ್ ಸೌಲಭ್ಯ

2 ದೂರವಾಣಿ ಸಂಪರ್ಕ

3 ಮೋಡೆಮ್–ಡಿಜಿಟಲ್ ಸಂಜ್ಞೆಗಳನ್ನು ಶಬ್ದ ತರಂಗಗಳಿಗೆ ಮಾರ್ಪಡಿಸಲು ಶಬ್ದ ತರಂಗಗಳನ್ನು ಡಿಜಿಟಲ್ ತರಂಗಗಳಿಗೆ ಮಾರ್ಪಡಿಸಲು

4 ಸಂಪರ್ಕ ಸೂತ್ರ (ಕಮ್ಯೂನಿಕೇಶನ್ ಸಾಫ್ಟ್‌ವೇರ್)

ಇಂಗ್ಲಿಷಿನ ಕೆಲವೇ ಸರಳ ಶಬ್ದಗಳನ್ನು ಡೈಲಾಗ್ ನಿಯಂತ್ರಣಾ ಭಾಷೆಯಾಗಿ ಬಳಸುತ್ತದೆ. ಆದುದರಿಂದ ವಿವಿಧ ದೇಶಗಳಲ್ಲಿ ಇದನ್ನು ಬಳಸುವವರಿಗೆ ಅಷ್ಟಾಗಿ ತೊಂದರೆ ಕಂಡುಬರುವ ಸಂಭವಗಳಿಲ್ಲ. ಖಾಸಗಿ ವ್ಯಾಪಾರ ಸಂಸ್ಥೆಯಾದ್ದರಿಂದ ಮಾಹಿತಿಗಾಗಿ ತಪಾಸಣೆ ನಡೆಸಲು ಮತ್ತು ಪಡೆದುಕೊಂಡ ಮಾಹಿತಿಗೆ ಮಾತ್ರ ಅಮೆರಿಕಾದ ಡಾಲರ್‌ಗಳಲ್ಲಿ ಪಾವತಿ ಮಾಡಬೇಕಾಗುವುದು. ಒಂದು ಸಂಶೋಧನಾ ವಿಚಾರಣೆಗೆ ಸಾಧಾರಣವಾಗಿ 10 ನಿಮಿಷಗಳಷ್ಟು ಸಮಯ ಬೇಕಾಗಿದ್ದು ನಿಮಿಷಕ್ಕೆ 2 ಡಾಲರ್‌ನಂತೆ ವೆಚ್ಚವನ್ನು ಭರಿಸಬೇಕಾಗುವುದು. ಈ ದರ ಕಡಿಮೆ ಎಂದೇ ಹೇಳಲಾಗಿದೆ. ಆದರೆ ಭಾರತದಲ್ಲಿ ಸಂಶೋಧಕರಿಗೆ ಇದು ದುಬಾರಿಯೇ. ಆದುದರಿಂದ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳಲ್ಲಿ ಈ ಸೌಲಭ್ಯವನ್ನು ಕಲ್ಪಿಸಿ ಅನುಕೂಲ ಮಾಡಿಕೊಡುವುದು ಉತ್ತಮ. ಏಕೆಂದರೆ ರೂಪಾಯಿಯ ಮೌಲ್ಯ ಅಗಾಧವಾಗಿ ಕುಗ್ಗಿದ್ದು ಪ್ರತಿ ಡಾಲರ್‌ಗೆ ಬಹಳಷ್ಟು ಹಣ ರೂಪಾಯಿಗಳಲ್ಲಿ ತೆರಬೇಕಾಗುವುದು.

ಡೈಲಾಗ್ ದತ್ತಾಂಶ ಕೇಂದ್ರಗಳಲ್ಲಿ ಸಂಗ್ರಹವಾಗುವ ಮಾಹಿತಿ ವಿವಿಧ ಆಕರಗಳನ್ನು ಒಳಗೊಂಡಿರುತ್ತದೆ ಅದರ ಆಕಾರ ವ್ಯಾಪ್ತಿ ವಿವಿಧ ಗ್ರಂಥಸೂಚಿಗಳು, ಲೇಖನಸೂಚಿಗಳು, ಸಾರಾಂಶಸೂಚಿಗಳು, ನಿರ್ದೇಶಕಗಳು, ಸುದ್ದಿ ಸಾರಾಂಶಗಳು, ವಿಮರ್ಶೆಗಳು, ವಿಶ್ಲೇಷಣಾ ವರದಿಗಳು, ತಾಂತ್ರಿಕ ವರದಿಗಳು ಮತ್ತು ಹಕ್ಕು ಸ್ವಾಮ್ಯಗಳು. ಇವುಗಳಷ್ಟೇ ಅಲ್ಲದೆ ಸುಮಾರು 800 ಸಂಶೋಧನಾ ನಿಯತಕಾಲಿಕೆಗಳು, ಜನಪ್ರಿಯ ವರ್ತಮಾನ ಪತ್ರಿಕೆಗಳು ಮತ್ತು ಇತ್ತೀಚಿನ ಸುದ್ದಿ ಸಮಾಚಾರಗಳು

ಹಾಗು ಪತ್ರಿಕಾ ವರದಿಗಳನ್ನು ಸಹ ವ್ಯಾಪ್ತಿಯಲ್ಲಿ ಸೇರಿರುತ್ತವೆ. ಆದಕಾರಣ ಸರ್ವ ವಿಚಾರಣೆಗೂ ಉತ್ತರ, ಡೈಲಾಗ್ ನೇರ ಮಾಹಿತಿ ವ್ಯವಸ್ಥೆಯ ಮೂಲಕವೇ ದೊರೆಯುತ್ತದೆ. ಉಪಯೋಗಿಸುವ ವಿವಿಧ ದತ್ತಾಂಶ ಕೇಂದ್ರಗಳ ಸೇವಾ ಸೌಲಭ್ಯಗಳನ್ನೇ ಮುಖ್ಯವಾಗಿ ಏಳು ರೀತಿಗಳಲ್ಲಿ ಸೂಚಿಸಬಹುದು.

1 ಗ್ರಂಥಸೂಚಿ ಮಾಹಿತಿ (ವರ್ಣಾತ್ಮಕ ಸೂಚಿ)
2 ಮಾರ್ಗದರ್ಶಕ ಮಾಹಿತಿ
3 ಅಂಕಿ–ಅಂಶ ಸಂಗ್ರಹ
4 ಪರಾಮರ್ಶನ ಆಕರಗಳ ಸಂಗ್ರಹ
5 ನಿಯತಕಾಲಿಕ ಲೇಖನ ಹಾಗು ಸಾರಾಂಶ
6 ಹಕ್ಕುಸ್ವಾಮ್ಯ ವಿವರ
7 ವಿಶ್ಲೇಷಣಾ ವರದಿ

ಡೈಲಾಗ್ ಆನ್ ಲೈನ್ ಮಾಹಿತಿ ವ್ಯವಸ್ಥೆಯ ವ್ಯಾಪ್ತಿಯಲ್ಲಿ ಬರುವ ವಿವಿಧ ವಿಷಯ ಕ್ಷೇತ್ರಗಳು.

—ಕೃಷಿ ಮತ್ತು ಆಹಾರ ವಿಜ್ಞಾನ —ಜನಸಂಖ್ಯೆ
—ವ್ಯಾಪಾರ ವಿವರ —ವೈದ್ಯಕೀಯ ಮತ್ತು ಜೀವವಿಜ್ಞಾನ
—ರಸಾಯನ ಶಾಸ್ತ್ರ —ಜನಪ್ರಿಯ ಮಾಹಿತಿ, ವೇಟೆಧಾರಣೆ
—ಸಂಘ-ಸಂಸ್ಥೆ ಸಮೀಕ್ಷೆಗಳು —ವಿಜ್ಞಾನ ಮತ್ತು ತಂತ್ರಜ್ಞಾನ
—ಕಂಪ್ಯೂಟರ್ ವಿಜ್ಞಾನ —ಮಾನಸಿಕ ಅಧ್ಯಯನ ಮತ್ತು ಸಮಾಜ ವಿಜ್ಞಾನ
—ಇಂಧನ ಮತ್ತು ಪರಿಸರ —ಪ್ರವಾಸ ಮತ್ತು ಪ್ರಯಾಣ
—ನ್ಯಾಯಾಂಗ ಮತ್ತು ಸರ್ಕಾರ

ಡೈಲಾಗ್ ಆನ್ ಲೈನ್ ಮಾಹಿತಿ ವ್ಯವಸ್ಥೆ ಒದಗಿಸುವ ಸೇವೆ ನಿಜಕ್ಕೂ ಮಿತವ್ಯಯ ಎನ್ನಬಹುದು. ವರ್ಷಗಟ್ಟಲೆ ಗ್ರಂಥಾಲಯಗಳಲ್ಲಿ ವಿವಿಧ ಆಕರಗಳನ್ನು ತಿರುವಿಹಾಕಿ ಪಡೆಯಬಹುದಾದ ಮಾಹಿತಿಯನ್ನು ಒಬ್ಬ ಸಂಶೋಧಕ ಆನ್ ಲೈನ್ ವ್ಯವಸ್ಥೆಯ ಮೂಲಕ ಕೆಲವೇ ನಿಮಿಷಗಳಲ್ಲಿ ಪಡೆಯುತ್ತಾನೆ. ವಿಶ್ವದ ನಾನಾ ರಾಷ್ಟ್ರಗಳಲ್ಲಿ ಇರುವ ದತ್ತಾಂಶ ಕೇಂದ್ರಗಳ ಕೋಟಿಗಟ್ಟಲೆ ಆಕರಗಳ ಆಧಾರದಿಂದ ಸಂಗ್ರಹಿಸಿದ ಮಾಹಿತಿಯನ್ನು ನಾವಿರುವಲ್ಲಿ ಪಡೆಯುವ ಅವಕಾಶ ನಿಜಕ್ಕೂ ಆಶ್ಚರ್ಯದ ಸಂಗತಿಯಾಗಿದ್ದು, ಸಂಶೋಧಕರಿಗೆ ಒಂದು ವರವಾಗಿ ಪರಿಣಮಿಸಿದೆ ಎನ್ನುವುದು ಅತಿಶಯೋಕ್ತಿಯಾಗಲಾರದು. ದತ್ತಾಂಶ ಕೇಂದ್ರ, ಮಾಹಿತಿ ಕೇಂದ್ರ, ಮಾಹಿತಿ ವಿಶ್ಲೇಷಣಾ ಕೇಂದ್ರಗಳಲ್ಲಿ ದತ್ತಾಂಶ ಅಥವಾ ಮಾಹಿತಿಯನ್ನು ಸಿ.ಡಿ–ಆರ್.ಒ.ಎಂ.

ಅಡಕ ತಟ್ಟೆಗಳಲ್ಲಿ ಸಂಗ್ರಹಿಸಿಡಲಾಗುತ್ತದೆ. ಈ ರೀತಿಯ ಅಡಕ ಸಂಗ್ರಹ ತಾಂತ್ರಿಕತೆ ಇತ್ತೀಚೆಗಷ್ಟೇ ಬೆಳಕಿಗೆ ಬಂದಿದೆ. ಇನ್ನೂ ಕೆಲವು ಕೇಂದ್ರಗಳು ಅಯಸ್ಕಾಂತ ತಟ್ಟೆ ಹಾಗು ಮೈಕ್ರೋಫಿಷ್‌ಗಳಲ್ಲಿ ಸಹ ಸೇವೆಯನ್ನು ಕಲ್ಪಿಸುತ್ತಿವೆ. ಆನ್ ಲೈನ್ ವ್ಯವಸ್ಥೆಯ ಮೂಲಕ ಪಡೆಯುವ ಕ್ರಮವನ್ನು ಇಲ್ಲಿ ತಿಳಿಯೋಣ.

ಉದಾಹರಣೆಗೆ, ಇರಾಕ್‌ನಲ್ಲಿ ನಡೆಯುತ್ತಿರುವ ಯುದ್ಧದ ಇತ್ತೀಚಿನ ಸಮಾಚಾರವೇನು, ಸದ್ದಾಂ ಹುಸೇನ್ ಬಗ್ಗೆ ಲಭ್ಯವಿರುವ ವ್ಯಕ್ತಿವಿಚಾರ ಏನೇನು ಎಂಬ ಪ್ರಶ್ನೆಗಳಿಗೆ ಉತ್ತರ ಪಡೆಯಬೇಕಾದರೆ ಮೊದಲು ನಮ್ಮ ಕೋಣೆಯಲ್ಲಿರುವ ವೈಯಕ್ತಿಕ ಕಂಪ್ಯೂಟರ್‌ನಲ್ಲಿ ಒದಗಿಸಿರುವ ಬೆರಳಚ್ಚು ಯಂತ್ರವನ್ನು ಉಪಯೋಗಿಸಿ ದೂರಸಂಪರ್ಕ ಜಾಲದ ಮೂಲಕ ಮುಂಬಯಿನಲ್ಲಿರುವ ವಿದೇಶೀ ಸಂಚಾರ ನಿಗಮದ ಅನುಮತಿ ಮೇರೆಗೆ ಉಪಗ್ರಹಕ್ಕೆ ಸಂಪರ್ಕ ಕಲ್ಪಿಸಲಾಗುತ್ತಿದೆ. ಅನಂತರ ಅಲ್ಲಿಂದ ಕ್ಯಾಲಿಫೋರ್ನಿಯಾದಲ್ಲಿರುವ ಡೈಲಾಗ್ ಆನ್ ಲೈನ್ ವ್ಯವಸ್ಥೆಯನ್ನು ತಲುಪುತ್ತೇವೆ. ಈಗ ನಮಗೆ ಡೈಲಾಗ್ ಸದಸ್ಯರೆಂದು ನೀಡಲಾದ ಸದಸ್ಯತ್ವ ಸಂಖ್ಯೆಯನ್ನು (ಪಾಸ್ ವರ್ಡ್) ನಮ್ಮ ಕಂಪ್ಯೂಟರ್ ಮೂಲಕ ರವಾನಿಸಿದರೆ ಡೈಲಾಗ್ ಮಾಹಿತಿ ವ್ಯವಸ್ಥೆಯನ್ನು ಪ್ರಶ್ನಿಸುವ ಅವಕಾಶ ಉಂಟಾಗುತ್ತದೆ. ಈ ರೀತಿಯ ಎಲ್ಲಾ ಸಂಖ್ಯೆಗಳು ಹಾಗು ಪ್ರಶ್ನೆಗಳು ಮೋಡೆಮ್ ಉಪಕರಣದ ಮೂಲಕ ಹಾದು ಹೋಗಬೇಕು. ಈ ಉಪಕರಣ ಡಿಜಿಟಲ್ ಸಂಖ್ಯೆಗಳನ್ನು ಶಬ್ದ ತರಂಗಗಳಾಗಿ ಪರಿವರ್ತಿಸಿ ಬಾಹ್ಯಾಕಾಶದಲ್ಲಿ ಕ್ಯಾಲಿಫೋರ್ನಿಯಾಗೆ ಸಾಗುವಂತೆ ಮಾಡುತ್ತದೆ. ಅನಂತರ ಉತ್ತರ ರೂಪದಲ್ಲಿ ಬರುವ ಶಬ್ದ ತರಂಗಗಳನ್ನು ಮತ್ತೆ ಡಿಜಿಟಲ್ ಸಂಜ್ಞೆಗಳಾಗಿ ಪರಿವರ್ತಿಸಿ ಕಂಪ್ಯೂಟರ್ ಪರದೆ ಮೇಲೆ ಮೂಡುವಂತೆ ಮಾಡುತ್ತದೆ.

ಈ ರೀತಿಯಲ್ಲಿ ಸಂಪರ್ಕ ಕಲ್ಪಿಸಲಾಗಿ ನಮ್ಮ ಕಂಪ್ಯೂಟರ್ ಪರದೆ ಮೇಲೆ ಸದ್ದಾಂ ಹುಸೇನ್ ವ್ಯಕ್ತಿ ವಿವರ ಹಾಗು ಯುದ್ಧ ಸಮಾಚಾರವನ್ನು ಒಳಗೊಂಡ ಹಲವಾರು ಪತ್ರಿಕೆಗಳ ಪಟ್ಟಿ ಮೂಡುತ್ತದೆ. ನಮ್ಮ ಅನಿಸಿಕೆಯಂತೆ ಯಾವುದಾದರೊಂದು ಪತ್ರಿಕೆಯನ್ನು ಆರಿಸಿ ಪ್ರಚಲಿತ ಸಂಚಿಕೆಯಲ್ಲಿ ನೀಡಿರುವ ವಿವರ ಬೇಕೆಂದು ಬೆರಳಚ್ಚು ಮಾಡುವ ಮೂಲಕ ಕೇಳಿದರೆ, ಆ ಪತ್ರಿಕೆಯ ಪೂರ್ಣ ವಿವರ ಪರದೆ ಮೇಲೆ ತಕ್ಷಣವೇ ಮೂಡಿಬರುತ್ತದೆ.

1) ಇದನ್ನು ನಮ್ಮಲ್ಲಿರುವ ಪ್ರಿಂಟರ್ ಸಹಾಯದಿಂದ ಪ್ರತಿ ತೆಗೆಯಬಹುದು.
2) ಅದರ ಪ್ರತಿಗಾಗಿ ಆಗಲೇ ಸಂಜ್ಞೆ ಮೂಲಕ ಡೈಲಾಗ್ ಸೇವಾ ಸಂಸ್ಥೆಗೆ ಸೂಚನೆ ಕೊಟ್ಟರೆ, ಅದನ್ನು ಅಂಚೆ ಮೂಲಕ ರವಾನಿಸಲಾಗುವುದು.
3) ಇಡೀ ಸಂಚಿಕೆಗಳಲ್ಲಿ ಪ್ರಕಟವಾದ ವಿವರವನ್ನು ಸಹ ಬೇಕೆಂದು ಕೇಳಬಹುದು.

4) ಆ ವಿಷಯವಾಗಿ ಇಲ್ಲಿಯವರೆಗೆ ಪ್ರಕಟವಾದ ಮಾಹಿತಿ ಅಥವ ಇನ್ನು ಮುಂದೆ ಪ್ರಕಟವಾಗುವ ಮಾಹಿತಿ ಅಥವ ಎರಡೂ ಬೇಕೆಂದು ಆಜ್ಞಾಪಿಸಿದರೆ ಡೈಲಾಗ್ ವ್ಯವಸ್ಥೆ ಇದನ್ನು ಪರಿಗಣಿಸಿ ಅತ್ಯಂತ ತೃಪ್ತಿಕರವಾಗಿ ಸೇವೆ ನೀಡುತ್ತದೆ.

ಹೀಗೆ ಪಡೆದುಕೊಂಡ ಮಾಹಿತಿಗೆ ತಗಲುವ ವೆಚ್ಚವನ್ನು ಡಾಲರ್‌ಗಳಲ್ಲಿ ಸಹ ಸೂಚಿಸಿ ಅದು ಪರದೆ ಮೇಲೆ ಮೂಡಿಬರುತ್ತದೆ. ಒಟ್ಟಿನಲ್ಲಿ ಅನುಸರಿಸಬೇಕಾದ ಹಂತಗಳು ನಾಲ್ಕು.

1) ಯಾವ ದತ್ತಾಂಶ ಕೇಂದ್ರವನ್ನು ಸಂಪರ್ಕಿಸಬೇಕೆಂಬ ನಿರ್ಧಾರ
2) ಮಾಹಿತಿ ತಪಾಸಣೆಯ ತಂತ್ರ ಮತ್ತು ಕ್ರಮ
3) ಪಡೆದ ಮಾಹಿತಿಯ ವಿಮರ್ಶಾತ್ಮಕ ಅಧ್ಯಯನ.

   ಪಡೆದ ಮಾಹಿತಿ ಸಮಂಜಸವೇ ಇಲ್ಲವೆ ಮತ್ತು ಎಷ್ಟು ನಿಷ್ಕೃಷ್ಟ ಎಂಬುದಾಗಿ ನಿರ್ಧಾರ—ಅವಶ್ಯವಿದ್ದರೆ ಮತ್ತೆ ತಪಾಸಣಾ ತಂತ್ರಗಳ ಪರಿಷ್ಕರಣೆ.
4) ಪ್ರಿಂಟರ್ ಸಹಾಯದಿಂದ ಪ್ರತಿ ಪಡೆಯಬೇಕೆ ಅಥವ ನೆನಪಿನಲ್ಲಿ ಸಂಗ್ರಹಿಸಬೇಕೆ.

ಗ್ರಂಥ ಋಣ

1) ಅಚ್ಯುತರಾವ್, ಎಚ್. ಆರ್. (1991): ಬರಲಿರುವ ಮಾಹಿತಿ ಕ್ರಾಂತಿ ಗ್ರಂಥಲೋಕ 15 (1) : 4–6
2) ರಾಮಶೇಷ್, ಸಿ. ಪಿ. (1994) : ಪರಾಮರ್ಶನ ಸೇವೆ ಮತ್ತು ಮಾಹಿತಿ ಆಕರಗಳು. ಮೈಸೂರು, ಟಿ. ವಿ. ಸ್ಮಾರಕ ಗ್ರಂಥಮಾಲೆ
3) DIALOG (1989). DIALOG – Systems Seminar I California, DIALOG Information Services INC
4) Baman, P (1991) : Net Working of Libraries and information centres in India. 37th ILA Seminar.

   On National Information Policies and Programmes Dec. 4-7, 1991, Madras–113-121
5) Ibrahim, A 2, Shiahn, A 1 (1991) Information resources in electronic media in India, Ibid: 51-70.

ಈ ಸಂಚಿಕೆಯ ಲೇಖಕರು

ಡಾ॥ ವಿಜಯಕುಮಾರ ಮಹಾನುಭಾವಿಗಳು	ನಂ. 608., ಸಿದ್ಧ, 3ನೇ ವಿಭಾಗ 3ನೇ ಹಂತ, 7ನೇ ಮುಖ್ಯ ಬೀದಿ, ಬಸವೇಶ್ವರನಗರ, ಬೆಂಗಳೂರು–560079
ಡಾ॥ ಕೆ. ಆರ್. ದುರ್ಗಾದಾಸ	ರೀಡರ್, ಕನ್ನಡ ವಿಭಾಗ ಸ್ನಾತಕೋತ್ತರ ಕೇಂದ್ರ, ಬೆಳಗಾವಿ
ಡಾ॥ ಹಂಪ ನಾಗರಾಜಯ್ಯ	ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ, ಬೆಂಗಳೂರು–560056
ಎಂ. ಜಿ. ಮಂಜುನಾಥ ಜೆ. ವಿಶ್ವನಾಥ	ಸಂಶೋಧನಾ ವಿದ್ಯಾರ್ಥಿಗಳು ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ, ಬೆಂಗಳೂರು–560056
ಕೆಂಗೇರಿ ಚಕ್ರಪಾಣಿ	ನಂ. 23, ಕೋಟೆ ಕೆಂಗೇರಿ ಬೆಂಗಳೂರು–560060
ತಮಿಳ್ ಸೆಲ್ವಿ	ದ್ವಿತೀಯ ಎಂ.ಎ., ವಿದ್ಯಾರ್ಥಿನಿ ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ, ಬೆಂಗಳೂರು–560056
ಎಸ್. ಶಿವಣ್ಣ	ಸಂಪಾದಕರು ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ, ಬೆಂಗಳೂರು–560056

ದೇ. ಸ್ಮಿತಾರೆಡ್ಡಿ	ನಂ, 72, 1ನೆಯ ಅಡ್ಡರಸ್ತೆ ಲಕ್ಕಸಂದ್ರ ಬೆಂಗಳೂರು–560030
ಡಾ॥ ಟಿ. ಬಿ. ಬಸವರಾಜು	ಅಧ್ಯಾಪಕರು ತತ್ವಶಾಸ್ತ್ರ ಅಧ್ಯಯನ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ, ಬೆಂಗಳೂರು–560056
ಡಾ॥ ಮಂಜುನಾಥ ಬೇವಿನಕಟ್ಟಿ	ಉಪನ್ಯಾಸಕ ಜಾನಪದ ವಿಭಾಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ಕಾಮಲಾಪುರ–583221
ವೈ. ಎಸ್. ಕೃಷ್ಣಮೂರ್ತಿ	ಸಹಾಯಕ, ಅಭಿವೃದ್ಧಿ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ. ಬೆಂಗಳೂರು–560056
ಡಾ॥ ಡಿ. ಕೆ. ಪೊದುವಾಳ್	ರೀಡರ್, ಕಾಮರ್ಸ್ ವಿಭಾಗ ಮಂಗಳ ಗಂಗೋತ್ರಿ, ದ. ಕನ್ನಡ ಕರ್ನಾಟಕ–574199
ಶ್ರೀಮತಿ ಪುಷ್ಪ ಜೋಸೆಫ್ ಮತ್ತು ಡಾ॥ ಸಿ. ಪಿ. ರಾಮಶೇಷ್	ಗ್ರಂಥಪಾಲಕರು ಮೈಸೂರು ವಿಶ್ವವಿದ್ಯಾಲಯ ಮೈಸೂರು–570006

ವಿವರಗಳಿಗೆ ವ್ಯವಹರಿಸಿ :

ನಿರ್ದೇಶಕರು
ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು 560 056